ಜನಶಕ್ತಿ



ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 38
ಸೆಪ್ಟೆಂಬರ್ 16, 2012

ಪುಟ 16 ರೂ. 5/-

ಸಶಕ್ತೀಕರಣ ಎಂದರೆ ಯುವಜನರ ಸರ್ವತೋಮುಖ ಅಭಿವೃದ್ಧಿ





ಯುವಜನರ ಸಶಕ್ತೀಕರಣ

dyfi

ಅಖಿಲ ಭಾರತ
ಸಮ್ಮೇಳನ
11-15 ಸೆಪ್ಟೆಂಬರ್, 2012 ಬೆಂಗಳೂರು, ಕರ್ನಾಟಕ







'ಶಂಕಿತ ಉಗ್ರ'ರ ಬಂಧನ ತನಿಖೆ ಪೂರ್ವ ತೀರ್ಪು ಅನಾಹುತಕಾರಿ



ದೈತ್ಯ ಕಲ್ಲಿದ್ದಲು ಹಗರಣ ಖಾಸಗೀಕರಣ ನೀತಿಗಳ ಕಹಿಫಲ



ವಿಶ್ವ ಶಾಂತಿ ಸಮ್ಮೇಳನ : ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣಕ್ಕೆ ಕರೆ

ಸದಾಶಿವ ಆಯೋಗದ ವರದಿ: ವಾದ-ವಿವಾದ

ವಿಶ್ವ ಶಾಂತಿ ಸಮ್ಮೇಳನ: ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣಕ್ಕೆ ಕರೆ

ನಾಗರಿಕ ಸಮಾಜವು ಮನುಷ್ಯತ್ವ ನಾಚಿಸುವಂತಹ ನರಕಗಳನ್ನು ಭೂಮಿಯ ಮೇಲೆ ಸೃಷ್ಟಿಸುವ ಅಣ್ವಸ್ತ್ರಗಳನ್ನು ನಿರ್ನಾಮ ಮಾಡಿ ಅಣ್ವಸ್ತ್ರಮುಕ್ತ ವಿಶ್ವ ನಿರ್ಮಾಣಕ್ಕೆ ಮುಂದಾಗುವಂತೆ ಜಪಾನ್ ದೇಶದ ಹಿರೋಶಿಮಾ ನಗರದಲ್ಲಿ ನಡೆದ ಜಾಗತಿಕ ಶಾಂತಿ ಸಮ್ಮೇಳನವು ಒಕ್ಕೊರಲ ಕರೆ ನೀಡಿದೆ.

ಸಮ್ಮೇಳನವು ಸಂಪೂರ್ಣ ಅಣ್ವಸ್ತ್ರಗಳ ನಿರ್ನಾಮದ ಜೊತೆಯಲ್ಲಿಯೇ ಬೆಳೆಯುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ವಿರೋಧಿಸಿತು. ಪ್ರಜಾಪ್ರಭುತ್ವ ಹಾಗೂ ಸೇನಾಮುಕ್ತ ಜನ ಜೀವನಕ್ಕಾಗಿ ನಡೆಯುತ್ತಿರುವ ಹೋರಾಟಕ್ಕೆ ಕೈಜೋಡಿಸಲು ಮತ್ತು ಹಸಿವು, ಬಡತನ, ನಿರುದ್ಯೋಗ, ಅನಕ್ಷರತೆಯಂತಹ ಸಾಮಾಜಿಕ ಸಮಸ್ಯೆಗಳನ್ನು ನಿರ್ನಾಮ ಮಾಡಿ ಸಾಮಾಜಿಕ ನ್ಯಾಯವನ್ನು ಪ್ರತಿಷ್ಠಾಪಿಸುವ ಕ್ರಮಗಳಿಗೆ ಒತ್ತಾಯಿಸಿದೆ.

ಸೇನಾ ವೆಚ್ಚವನ್ನು ಕಡಿತಗೊಳಿಸುವುದು, ಅಣ್ವಸ್ತ್ರಗಳ ಮೇಲಿನ ವೆಚ್ಚ ಕಡಿಮೆ ಮಾಡಿ' ಸಾಮಾಜಿಕ ಅಭಿವೃದ್ಧಿಗಾಗಿ, ಮಾನವ ಹಕ್ಕುಗಳ ಉಳಿವಿಗಾಗಿ, ಸಮಾನ ಸಾಮಾಜಿಕ ಸ್ಥಾನಮಾನಗಳಿಗಾಗಿ' ಆದ್ಯತೆ ನೀಡುವಂತೆ ಜಗತ್ತಿನ ಆಡಳಿತದ ಚುಕ್ಕಾಣಿ ಹಿಡಿದ ಮುಖ್ಯಸ್ಥರನ್ನು ಆಗ್ರಹಿಸಿದೆ.

ಆಗಸ್ಟ್ 2 ರಿಂದ 9ರವರೆಗೆ ಹಿರೋಶಿಮಾ ಮತ್ತು ನಾಗಸಾಕಿ ಪಟ್ಟಣಗಳಲ್ಲಿ 20ಕ್ಕೂ ಹೆಚ್ಚು ವಿವಿಧ ದೇಶಗಳ ವಿಜ್ಞಾನಿಗಳು, ರಾಜತಾಂತ್ರಿಕರು, ಸಮಾಜಶಾಸ್ತ್ರಜ್ಞರು, ಶಾಂತಿ ಬಯಸುವ ಸರ್ಕಾರದ ಪ್ರತಿನಿಧಿಗಳು, ವಿದ್ಯಾರ್ಥಿ, ಯುವಜನರು, ಮಹಿಳೆಯರು, ಕಾರ್ಮಿಕರು ಹಾಗೂ ಸ್ವಯಂ ಸೇವಾ ಸಂಘಟನೆಗಳ ಪ್ರತಿನಿಧಿಗಳನ್ನು ಒಳಗೊಂಡು ವಿಶ್ವಶಾಂತಿ ಸಮ್ಮೇಳನವು ಯಶಸ್ವಿಯಾಗಿ ನೆರವೇರಿತು. ಆಗಸ್ಟ್ 2–6ರವರೆಗೆ ಹಿರೋಶಿಮಾ ನಗರದಲ್ಲಿ, 7ರಿಂದ 9ರವರೆಗೆ ನಾಗಸಾಕಿ ಪಟ್ಟಣದಲ್ಲಿ ವಿವಿಧ ವಿಚಾರ ಸಂಕಿರಣ, ಬಹಿರಂಗ ಸಭೆಗಳ ಮೂಲಕ ಸಮ್ಮೇಳನವು ಅಣ್ವಸ್ತ್ರಗಳ, ಬಳಕೆಯ ಅಪಾಯ, ಅಣು ವಿದ್ಯುತ್ ಅಣುಸ್ಥಾವರದ ಪ್ರಶ್ನೆಯಲ್ಲಿ ಜನರ ಬದುಕಿನ ಸುರಕ್ಷತೆಯನ್ನು ಕಡೆಗಣಿಸುವ ಅಪಾಯ, ಜಗತ್ತಿನ ವಿವಿಧೆಡೆಗಳಲ್ಲಿ ಅಮೆರಿಕಾ ಸ್ಥಾಪಿಸಿರುವ ಮತ್ತು ಸ್ಥಾಪಿಸುತ್ತಿರುವ ಮಿಲಿಟರಿ ನೆಲೆಗಳು, ಅದರಿಂದ ಬಾಧಿತವಾದ ಜನತೆಯ ಸಂಕಷ್ಟಗಳ ಬಗ್ಗೆ ಹಾಗೂ ಅಣ್ವಸ್ತ್ರ ಪ್ರಯೋಗಗಳಿಂದ ನಿರಾಶ್ರಿತರಾಗಿರುವ ಹಿಭಾಕುಶರ ಬದುಕಿನ ಕುರಿತು ಚರ್ಚಿಸಲಾಯಿತು.

ಆಗಸ್ಟ್ 1ರಂದು ಮಧ್ಯಾಹ್ನ 2 ಗಂಟೆಗೆ ಹಿರೋಶಿಮಾ ಪಟ್ಟಣದ ಶಾಂತಿ ಉದ್ಯಾನದಲ್ಲಿ ಶಾಂತಿ ಸ್ತಂಭಕ್ಕೆ ವಿದೇಶಿ ಪ್ರತಿನಿಧಿಗಳು ಪುಷ್ಪಗುಚ್ಛವಿರಿಸಿ ಬಾಂಬ್ ದಾಳಿಯಲ್ಲಿ ಮೃತಪಟ್ಟಿರುವವರಿಗೆ ನಮನ ಸಲ್ಲಿಸಿದರು. ಇದರೊಂದಿಗೆ ಸಮ್ಮೇಳನದ ಕಲಾಪಗಳು ಆರಂಭಗೊಂಡವು.

ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣದ ಆಶಯದೊಂದಿಗೆ 1955 ರಿಂದ ಪ್ರತಿ ವರ್ಷ ಜಪಾನಿನ ಹಿರೋಷಿಮಾ–ನಾಗಸಾಕಿ ನಗರಗಳಲ್ಲಿ ಸಂಘಟಿಸಲಾಗುತ್ತಿರುವ 'ವಿಶ್ವ ಶಾಂತಿ ಸಮ್ಮೇಳನ'ಕ್ಕೆ ಭಾರತದಿಂದ ಸಿಐಟಿಯುವನ್ನು ಕರ್ನಾಟಕ ರಾಜ್ಯ ಸಿಐಟಿಯು ಕಾರ್ಯದರ್ಶಿಗಳಾದ ಕಾಂ.ಸೈಯದ್ ಮುಜೀಬ್ ಮತ್ತು ಕೇರಳ ರಾಜ್ಯ ಕಾರ್ಯದರ್ಶಿ ಕಾಂ.ಶಶಿ ಕುಮಾರ್ ಪ್ರತಿನಿಧಿಸಿದ್ದರು. ಮುಜೀಬ್ ಇಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಆಗಸ್ಟ್ 2ರಂದು ವಿವಿಧ ತಂಡಗಳು ಹಿರೋಶಿಮಾ ನಗರದ ಹಲವು ಆಸ್ಪತ್ರೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದವು. ನಮ್ಮ ತಂಡವು ಹಿರೋಶಿಮಾ ಚಾಪು ಮೆಡಿಕಲ್ ಸಹಕಾರಿ ಯುನಿಯನ್‌ಗೆ ಭೇಟಿ ನೀಡಿತು. ಸಂಸ್ಥೆಯ ನಿರ್ದೇಶಕರು ಹಾಗೂ ವೈದ್ಯರೂ ಆದ ಡಾ. ಐ.ಡಿ.ಹೋಮಿ ಪ್ಯೂಜಿವಾರ್ ಅಣು ವಿಕಿರಣತೆಯಿಂದ ಬಳಲುತ್ತಿರುವರ ಆರೋಗ್ಯ ಸಮಸ್ಯೆಗಳ ಬಗ್ಗೆ ವಿವರಿಸಿದರು. "ಹಿಭಾಕುಶರನ್ನು ಆರೋಗ್ಯವಂತರನ್ನಾಗಿ ನೋಡಿಕೊಳ್ಳುವುದು ಅತ್ಯಂತ ಕಷ್ಟದ ಕೆಲಸ. ಬಹು ರೋಗಗಳಿಂದ ನರಳುತ್ತಿರುವ ಅವರ ಶುಶ್ರೂಷೆ ವೈದ್ಯಕೀಯ ರಂಗಕ್ಕೆ ಸವಾಲಾಗಿದೆ. ನೇರ ವಿಕಿರಣಕ್ಕೆ ಒಳಗಾದವರಷ್ಟೇ ಅಲ್ಲದೆ ಹಿಭಾಕುಶರ ಎರಡು ಮತ್ತು ಮೂರನೇ ತಲೆಮರಿನ ಮಕ್ಕಳು ವಯಸ್ಕರಲ್ಲಿ ವಿಭಿನ್ನ ಸ್ವರೂಪದ ಕ್ಯಾನ್ಸರ್ ಹೆಚ್ಚಾಗಿದೆ. ಆರಂಭದ ಹಂತದಲ್ಲೇ ಇದನ್ನು ಪತ್ತೆ ಮಾಡಿ ಗುಣಪಡಿಸುವ ಪ್ರಯತ್ನಗಳು ಸಾಗಿವೆ. ಆದರೂ ನಮ್ಮ ಆಸ್ಪತ್ರೆಯ ಹೊರಾಂಗಣದಲ್ಲಿ ಸಾವನ್ನಪ್ಪಿದ ಹಿಭಾಕುಶರ ಪಟ್ಟಿಯು ಬೆಳೆಯುತ್ತಿದೆ" ಎಂದು ವಿವರಿಸುತ್ತಾ ಹೋದರು.

ಅಂದು ಮಧ್ಯಾಹ್ನ 2 ಗಂಟೆಗೆ ಸಮ್ಮೇಳನ ಉದ್ಘಾಟನಾ ಅಧಿವೇಶನವು ಹಿರೋಶಿಮಾ ನಗರದ ಬಂಕ ಕೊರಿಯಾ ಕಿಂಕನ್‌ಹಾಲ್‌ನಲ್ಲಿ ನಡೆಯಿತು. ಆರಂಭದಲ್ಲಿ ಜೆನ್‌ಸೋಕ್ಯೋ ನಿರ್ದೇಶಕರಾದ ಸ್ವಾದಸೂಜಿ ಅವರು ಸ್ವಾಗತ ಬಯಸುತ್ತ ಅಣ್ವಸ್ತ್ರಗಳ ನಿಷೇಧಕ್ಕೆ ಪೂರಕವಾದ ವಾತಾವರಣ ನಿರ್ಮಾಣಕ್ಕೆ ಸಮ್ಮೇಳನ ಪೂರಕವಾಗಿರಲಿ ಎಂದು ಹಾರೈಸಿದರು.


ಸಮ್ಮೇಳನಕ್ಕೆ ಶುಭ ಹಾರೈಸಿ ಮಾತನಾಡಿದ ಅವರು ಬಾಂಬ್ ದಾಳಿ ನಿರಾಶ್ರಿತರ ಸಂಘಟನೆಯ ಟಿಚಿಪಿ ಫಿಜುಮೊರಿ(ಹಿಭಾಕುಶ) ತಮ್ಮ ಕುಟುಂಬದ ಕರುಣಾಜನಕ ಕಥೆಯನ್ನು ವಿವರಿಸುತ್ತಿದ್ದರೆ, ಭಾಷೆಯ ಗಡಿಗಳನ್ನು ದಾಟಿ ಭಾಷೆ ಬಾರದವರ ಮನಸ್ಸನ್ನು ತಟ್ಟಿ ತಮ್ಮ ಸಂಕಷ್ಟಗಳ ಬದುಕನ್ನು ವಿವರಿಸಿದ ಅವರು ಹಿಭಾಕುಶನಾಗಿ ಬಾಳುವುದು ಸಮಾಜದ ಎಲ್ಲಾ ಸಂದರ್ಭಗಳಲ್ಲೂ ತೀವ್ರತರ ತಾರತಮ್ಯ ಮತ್ತು ಸಂಕಷ್ಟಗಳನ್ನು ಅನುಭವಿಸಿದ್ದನ್ನು ಎಳೆಎಳೆಯಾಗಿ ಬಿಡಿಸಿಟ್ಟರು.(ಮದುವೆ, ಮಕ್ಕಳ ಶಿಕ್ಷಣ, ಮಕ್ಕಳ ಮದುವೆ, ಅನಾರೋಗ್ಯ ಸ್ಥಿತಿ ಮೊದಲಾದ ಸಂದರ್ಭ)ಅವರ ಹೃದಯಾಂತರಾಳದ ಬಯಕೆ: "ನಮ್ಮನ್ನು ಉಳಿಸಿ ಮತ್ತು ಮನುಕುಲವನ್ನು ಸಂಕಷ್ಟಗಳಿಂದ ರಕ್ಷಿಸಿ" ಎಂದು ಬೇಡಿದರು.



ಸಮ್ಮೇಳನಕ್ಕೆ ಶುಭ ಹಾರೈಸಿದ ಮಲೇಶಿಯಾ ದೇಶದ ಪ್ರಧಾನಿ ಮೊಹದ್ ನಜಿ ಅವರು ಕಳಿಸಿದ 'ಅಣ್ವಸ್ತ್ರಗಳು ಜೀವ ವಿರೋದಿ'ಎಂಬ ಸಂದೇಶವನ್ನು ವಾಚಿಸಲಾಯಿತು.

ಸಂಯುಕ್ತ ಮೆಕ್ಸಿಕೋ ರಾಜ್ಯಗಳ ಅಧ್ಯಕ್ಷ ಫಿಲಿಪೆ ಕಲ್ಡೋರನ್ ಇನೋಜೋಷಾ ನ್ಯೂಜಿಲ್ಯಾಂಡ್ ವಿದೇಶಾಂಗ ಸಚಿವ ಮರ್ರಿ ಮುಸಲಿ ಹಾಗೂ ವಿಯಟ್ನಾಂ ದೇಶದ ಉಪಾಧ್ಯಕ್ಷ ಯುಂಗ್ ಚೂ ಲುಲು ಸಮ್ಮೇಳನಕ್ಕೆ ಶುಭ ಹಾರೈಸಿ ಕಳಿಸಿದ್ದ ಸಂದೇಶಗಳನ್ನು ಓದಲಾಯಿತು.

ಸಮ್ಮೇಳನದ ಉದ್ಘಾಟನಾ ಗೋಷ್ಠಿಯಲ್ಲಿ ಮಾತನಾಡಿದ ಯುಎನ್ ಜಿನಿವಕ್ಕೆ ಮಲೇಶಿಯಾದ ಖಾಯಂ ಪ್ರತಿನಿಧಿಯಾಗಿರುವ ಮಸ್ಲಿನ್ ಮಹಮದ್, ಅಂತರರಾಷ್ಟ್ರೀಯ ಸಮುದಾಯ ಅಂದರೆ ಸರ್ಕಾರ ಮತ್ತು ನಾಗರಿಕ ಸಮಾಜಗಳು ಒಳಗೊಂಡಂತೆ ಅಣು ಸಮರದ ಅನಾಹುತಗಳ ಬಗ್ಗೆ ಎಚ್ಚೆತ್ತು ಕೊಳ್ಳದಿದ್ದರೂ ಇಂದೂ ಸಹ ಸಹಸ್ರಾರು ಅಣ್ವಸ್ತ್ರಗಳನ್ನು ದೇಶಗಳು ಹೊಂದಿರುವುದು, ಉತ್ಪಾದಿಸುತ್ತಿರುವುದು ನೋಡಿದಾಗ ನಿಶಸ್ತ್ರೀಕರಣದ ಚಳವಳಿ ಅಗತ್ಯ ಏನೆಂಬುದನ್ನು ಮನಗಾಣಬಹುದಾಗಿದೆ. ಮಲೇಶಿಯಾ ದೇಶವು ಎನ್‌ಪಿಟಿ ಮತ್ತು ಸಿಟಿಬಿಟಿ



ಸಂದರ್ಭಗಳಲಿ ಜಾಗತಿಕ ಶಾಂತಿ ಮತ್ತು ಭದ್ರತೆಗಾಗಿ ನಡೆಸಿದ ಪ್ರಯತ್ನಗಳು ಅಣ್ವಸ್ತ್ರ ಹೊಂದಿರುವ ದೇಶಗಳ ಪ್ರಯತ್ನದಿಂದಾಗಿ ವಿಫಲಗೊಂಡಿದ್ದಕ್ಕಾಗಿ ವಿಷಾದ ವ್ಯಕ್ತ ಪಡಿಸಿದರು. ಎನ್‌ಪಿಟಿಯ 2015ರ ಸಮ್ಮೇಳನಕ್ಕೆ ಮುಂಚಿತವಾಗಿಯೇ ಮಲೇಶಿಯಾವು ಇತರೆ 16 ಸಮಾನ ಮನಸ್ಕ ದೇಶಗಳ ಜೊತೆಗೂಡಿ ಅಣ್ವಸ್ತ್ರಗಳ ಬಳಕೆಯಿಂದಾಗಿ ಸೃಷ್ಟಿಸುವ ಮಾನವೀಯ ಸಂಕಟಗಳ ನೆಲೆಯಲ್ಲಿ ನಿಶಸ್ತ್ರೀಕರಣಕ್ಕೆ ಒತ್ತು ನೀಡುವ ಅಗತ್ಯತೆಯನ್ನು ಪ್ರತಿಪಾದಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಲೀಗ್ ಆಫ್ ಅರಬ್ ಸ್ಟೇಟ್‌ನ ನಿಶಸ್ತ್ರೀಕರಣ ಮತ್ತು ವ್ಯೂಹಾತ್ಮಕ ಸಚಿವಾಲಯದ ವಿಶೇಷ ಸಲಹಾಗಾರ ಮೊಹಮದ್ ಇಜಲ್‌ಬದೀನ್ ಅಬ್ದುಲ್ ಮೋಯಿಮ್ ಮಾತನಾಡಿ ಕಳೆದ ವಿಶ್ವಶಾಂತಿ ಸಮ್ಮೇಳನದ ನಂತರ ಎರಡು ಪ್ರಮುಖ ಘಟನೆಗಳು ಜರುಗಿವೆ. ಅರಬ್ ದೇಶಗಳಲ್ಲಿ ಸರ್ಕಾರಗಳ ಬದಲಾವಣೆಯ ಗಾಳಿಯೆಂದರೆ "ವಶಪಡಿಸಿಕೊಳ್ಳಿ" ಚಳವಳಿಯು ಬೆಳೆದಿದೆ. ಈ ಚಳವಳಿಗಳಲ್ಲಿ ಸಹಸ್ರಾರು ಯುವ ನಿರುದ್ಯೋಗಿ ಹಾಗೂ ತಾರತಮ್ಯಕ್ಕೊಳಗಾದ ಶೋಷಿತ ಜನರನ್ನು ಎಲ್ಲೆಡೆ ಕಾಣಬಹುದಾಗಿದೆ.

ಎರಡನೇ ಮಹಾ ಯುದ್ಧದ ಸಂದರ್ಭದಲ್ಲಿ ಬಾಂಬ್ ದಾಳಿಯು ರಾಜಕೀಯ ಸರ್ವಾಧಿಕಾರ ಹಾಗೂ ವ್ಯಾಪಾರಿ ಬಂಡವಾಳಶಾಹಿಗಳ ನಡುವಿನ ಸಮ್ಮಿಲನದಿಂದಾಗಿ ಕ್ರಾಂತಿಯು ಪರಿಪೂರ್ಣಗೊಳ್ಳದೆ ಮಾನವ ಸಂಕಟಗಳು ಮುಂದುವರಿದವು. ಬ್ರಿಟನ್‌ವೊಂದರಲ್ಲೇ 12 ವರ್ಷಗಳಲ್ಲಿ ನಡೆದಿರುವ ಹಣಕಾಸು ದುರಂತಗಳಲ್ಲಿ 78 ಶತಕೋಟಿ ಡಾಲರ್‌ಗಳಷ್ಟು ನಷ್ಟವಾಗಿದೆ. ಇದರ ಆರನೇ ಒಂದು ಭಾಗದಷ್ಟು ವೆಚ್ಚ ಮಾಡಿದ್ದರೂ ಜಗತ್ತಿನಲ್ಲಿ ಆಹಾರದ ಕೊರತೆಯಿಂದ ಸಾಯುತ್ತಿರುವ 15 ದಶಲಕ್ಷ ಮಕ್ಕಳನ್ನು ಉಳಿಸಲು ಸಾಧ್ಯವಾಗುತ್ತಿತ್ತು ಎಂದರು.

ಇಂದು ತಾರತಮ್ಯ ಜಾಗತಿಕವಾಗಿ ವಿಸ್ತರಿಸಿಕೊಂಡಿದೆ. ಶ್ರೀಮಂತ ದೇಶಗಳಲ್ಲಿರುವ ಜನತೆಯೂ ಸಹ ಸಂಕಷ್ಟಗಳಲ್ಲಿ ಮುಳುಗುವಂತೆ ಮಾಡಿದೆ ಎಂದು ಇಟಲಿಯನ್ನು ಉದಾಹರಿಸಿದ ಅವರು ಮಾರ್ಕೋಟು ರವಿ ತನ್ನ ನಾಲ್ಕು ವರ್ಷದ ಮಗನನ್ನು ಮತ್ತು 14 ತಿಂಗಳ ಮಗಳನ್ನು ಆರನೇ ಅಂತಸ್ತಿನಿಂದ ಎಸೆದು ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪತ್ರಿಕೆಗಳು ವರದಿ ಮಾಡಿವೆ. ಆತ ಒಂದು ವರ್ಷದ ಹಿಂದೆಯೇ ಕೆಲಸದಿಂದ ಹೊರಹಾಕಲ್ಪಟ್ಟಿದ್ದ. ಅವನು ತೆರಿಗೆ ಸಂಗ್ರಹಕರಿಂದ ವಿಪರೀತ ಒತ್ತಡಕ್ಕೆ ಒಳಗಾಗಿದ್ದ. ಇಂತಹ ಉದಾಹರಣೆಗಳು ಹಲವು ಇವೆ. ಈ ಸಂದರ್ಭದಲ್ಲಿ 'ವಶಪಡಿಸಿಕೊಳ್ಳಿ' ಚಳವಳಿಯ ಮೂಲಕ ಹರಡಿಕೊಳ್ಳಬೇಕಾದ ಜಾಗತಿಕ ಕ್ರಾಂತಿ ಮಸುಕಿ ಹೋಗುತ್ತಿದೆ. ಶೋಷಣೆ ನಿಲ್ಲುತ್ತಿಲ್ಲ. ತಾರತಮ್ಯ ಮುಂದುವರಿದಿದೆ. ಇಡೀ ಜಗತ್ತು ಟೈಟಾನಿಕ್‌ನಂತೆ ಮುಳುಗತೊಡಗಿದೆ. ಶಾಂತಿ ಚಳವಳಿಯು ಕೇವಲ ಅಣ್ವಸ್ತ್ರಗಳ ನಿಶಸ್ತ್ರೀಕರಣಕ್ಕೆ ಮಾತ್ರ 'ಸೀಮಿತವಾಗಿರಬೇಕಾಗಿಲ್ಲ. ಮೂಲಭೂತವಾಗಿ ಆರ್ಥಿಕ ಪರಿಸ್ಥಿತಿಗಳು ಬದಲಾಗದೆ ನಿಶಸ್ತ್ರೀಕರಣ ಸಾಧ್ಯವಿಲ್ಲ. ಹಾಗಾಗಿ ನಾವು ಮುಳುಗುತ್ತಿರುವ ಜಗತ್ತೆಂಬ ಟೈಟಾನಿಕ್ ಹಡಗನ್ನು ಉಳಿಸಲು ಪ್ರಯತ್ನಿಸಬೇಕಾಗಿದೆ ಎಂದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ತನಿಖೆ ಪೂರ್ವ ತೀರ್ಪು ನೀಡುವುದು ನಿಲ್ಲಲಿ

ಕಳೆದ ಒಂದು ವಾರದಿಂದ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಕೆಲವು "ಉಗ್ರರನ್ನು" ಕೇಂದ್ರ ಅಪರಾಧ(ಸಿಸಿಬಿ) ವಿಭಾಗದ ಪೊಲೀಸರು ಬಂಧಿಸಿದ್ದಾರೆ ಎಂಬ ಸುದ್ದಿ ಮಾಧ್ಯಮಗಳಲ್ಲಿ ವರ್ಣರಂಜಿತ ವರದಿಗಳಾಗಿ ಪ್ರಕಟವಾಗುತ್ತಿದೆ. ಬಂಧಿತರು ರಾಜ್ಯದ ಕೆಲವು ಗಣ್ಯರ ಹತ್ಯೆಗೆ ಸಂಚು ರೂಪಿಸಿದ್ದರು ಎಂದು ಆರೋಪಿಸಲಾಗಿದ್ದು ನಿಷೇಧಿತ ಭಯೋತ್ಪಾದನಾ ಸಂಘಟನೆಗಳೊಂದಿಗೆ ಸಂಪರ್ಕದಲ್ಲಿದ್ದವರು ಎಂದು ಹೇಳಲಾಗಿದೆ. ಇವರು ಹೂಡಿದ್ದಾರೆನ್ನಲಾದ ಸಂಚಿನ ಬಗ್ಗೆ ಹಲವು ರೀತಿಯ ವದಂತಿಗಳು ರಾಜ್ಯಾದ್ಯಂತ ಹರಿದಾಡುತ್ತಿದ್ದು ಜನ ಆತಂಕಕ್ಕೊಳಗಾಗಿದ್ದಾರೆ.

ಸಮಾಜದಲ್ಲಿ ವಿಧ್ವಸಂಕ ಕೃತ್ಯಗಳನ್ನು ನಡೆಸುವವರು ಯಾವುದೇ ಕೋಮಿಗೆ ಸೇರಿದವರಾಗಿರಲಿ, ಅವರ ವಿರುದ್ಧ ಕಠಿಣ ಕಾನೂನು ಕ್ರಮ ಜರಗಿಸುವುದು ಅತ್ಯಗತ್ಯವಾಗಿದೆ. ಆದರೆ ಬಂಧಿಸಲ್ಪಟ್ಟವರೆಲ್ಲರೂ ಭಯೋತ್ಪಾದಕರಾಗುವುದಿಲ್ಲ. ಎಫ್.ಐ.ಆರ್. ದಾಖಲಾದ ನಂತರವೂ, ಚಾರ್ಜಶೀಟ್ ಸಲ್ಲಿಕೆಯಾದ ನಂತರವೂ ಅವರು ಆರೋಪಿಗಳಷ್ಟೇ. ಅವರು ಅಪರಾಧಿಗಳೆಂದು ನ್ಯಾಯಾಲಯ ನಿರ್ಣಯಿಸಿದ ನಂತರಷ್ಟೇ ಅವರು ಶಿಕ್ಷಾರ್ಹ ಅಪರಾಧಿಗಳು. ಆದರೆ ಇಂದು ಮಾಧ್ಯಮಗಳೇ ನ್ಯಾಯಾಲಯದ ಕೆಲಸವನ್ನು ಮಾಡತೊಡಗಿವೆ. ಪೊಲೀಸರ ತನಿಖೆ ಪೂರ್ಣಗೊಳ್ಳುವ ಮೊದಲೇ, ನ್ಯಾಯಾಲಯದಲ್ಲಿ ವಿಚಾರಣೆ ಆರಂಭ ಆಗುವ ಮೊದಲೇ ಮಾಧ್ಯಮಗಳು ಬಂಧಿತರನ್ನು "ಉಗ್ರರು" ಎಂದು ತೀರ್ಪು ಕೊಡುತ್ತಿವೆ. ಇಂದು ಮುದ್ರಣ ಮಾಧ್ಯಮವೇ ಆಗಲಿ, ದೃಶ್ಯ ಮಾಧ್ಯಮವೇ ಆಗಲಿ, ಸಂಖ್ಯೆಯಲ್ಲಿ ಕೌರವರಂತೆ ವೃದ್ಧಿಯಾಗುತ್ತಿದ್ದು ಅವುಗಳ ನಡುವಿನ ಪೈಪೋಟಿಗೆ ಎಲ್ಲೆ ಇಲ್ಲದಂತಾಗಿದೆ. ಸೆನ್ಸೇಷನಲ್ ಸುದ್ದಿಗಳಿಗಾಗಿ ಹುಡುಕಾಡುತ್ತಿರುವ ಈ ಮಾಧ್ಯಮಗಳು ಸುದ್ದಿಗಳನ್ನು ತಿರುಚಿ ಬರೆಯಲು ಹೇಸುವುದಿಲ್ಲ. ಜನಸಾಮಾನ್ಯರ ಮೇಲೆ ಆಗಬಹುದಾದ ದುಷ್ಪರಿಣಾಮದ ಬಗ್ಗೆ ಕಾಳಜಿವಹಿಸುತ್ತಿಲ್ಲ. ಭಯೋತ್ಪಾದನೆಯ ವಿಷಯದಲ್ಲಂತೂ ಮುಸ್ಲಿಂ ಯುವಕರೆಲ್ಲರೂ ಭಯೋತ್ಪಾದಕರಾಗುತ್ತಿದ್ದಾರೆ ಎಂಬ ಅಭಿಪ್ರಾಯವನ್ನು ಮೂಡಿಸಲಾಗುತ್ತಿದೆ. ರಾಜ್ಯದಲ್ಲಿ ಇಷ್ಟೊಂದು ಮುಸ್ಲಿಂ ಉಗ್ರರು ಇರುವುದು ನಿಜವೇ ಆದರೆ ಕರ್ನಾಟಕಕ್ಕೆ ಉಳಿಗಾಲವಿಲ್ಲ.

ಮಾಧ್ಯಮಗಳು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಕಡೆಗಣಿಸುತ್ತಿರುವುದು ಅಷ್ಟೇ ಅಪಾಯಕಾರಿಯಾಗಿದೆ. ನಾವು ನಮ್ಮ ಸುತ್ತಲಿರುವವರೆಲ್ಲರನ್ನು ಅನುಮಾನದಿಂದ ನೋಡುವಂತೆ ಮಾಡುವ ಈ ಪ್ರವೃತ್ತಿ ಖಂಡನಾರ್ಹವಾಗಿದೆ. ಬಂಧನದ ಸುದ್ದಿಗಳನ್ನು ಬಿತ್ತರಿಸಲು ಇವರು ತೋರುವ ಆಸಕ್ತಿ ಬಂಧಿತರನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಿದ ಸುದ್ದಿಗಳನ್ನು ಪ್ರಕಟಿಸುವುದರಲ್ಲಿ ಕಾಣುವುದಿಲ್ಲ. ಪೊಲೀಸರಿಂದ ಬಂಧಿಸಲ್ಪಟ್ಟವರೆಲ್ಲ ಅಪರಾಧಿಗಳಲ್ಲ. ಅವರಲ್ಲಿ ಹಲವರು ಅನಂತರ ಬಿಡುಗಡೆಯಾಗುತ್ತಿರುತ್ತಾರೆ. ಆದರೆ ಅವರ ಬಿಡುಗಡೆ ಸುದ್ದಿಯಾಗುವುದೇ ಇಲ್ಲ. ಜನರ ಮನಸ್ಸಿನಲ್ಲಿ ಬಂಧನದ ಸುದ್ದಿ ಮಾತ್ರ ಗಟ್ಟಿಯಾಗಿ ಉಳಿದು ಬಿಡುತ್ತದೆ. ಬಂಧಿತರು ಕೈಗಾ ಅಣು ಸ್ಥಾವರವನ್ನು ಸ್ಫೋಟಿಸುವ ಸಂಚು ಸಹ ಹೂಡಿದ್ದರು ಎಂದು ಸುದ್ದಿ ಸಂಸ್ಥೆಯೊಂದು ವರದಿ ಮಾಡಿತ್ತು. ಇದನ್ನು ರಾಜ್ಯದ ಪೊಲೀಸ್ ಮಹಾನಿರ್ದೇಶಕರೇ ಅಲ್ಲಗಳೆದಿದ್ದಾರೆ. ಇಂತಹ ಊಹಾಪೋಹಗಳನ್ನು ಹರಡಲು ಮಾಧ್ಯಮಗಳೇ ಮುಂದಾದರೆ ಜನತೆ ಸತ್ಯವನ್ನು ಅರಿಯುವುದು ಹೇಗೆ ? ಸಮಾಜದಲ್ಲಿ ಅಭದ್ರತೆ, ಆತಂಕವನ್ನು ಸೃಷ್ಟಿಸುವುದು ಅಕ್ಷಮ್ಯ ಅಪರಾಧವಲ್ಲವೆ ?

ಶಂಕಿತರನ್ನು ಬಂಧಿಸಬಾರದೆಂದು ಹೇಳಲಾಗದು. ವಿಚಾರಣೆಗಾಗಿ ಪೊಲೀಸರು ವಶಕ್ಕೆ ತೆಗೆದುಕೊಳ್ಳಬಹುದು. ಆದರೆ ಬಂಧಿತರ ಬಾಯಿ ಬಿಡಿಸುವ ಹೆಸರಿನಲ್ಲಿ, ಅವರಿಂದ ಅವರನ್ನು ತಪ್ಪೊಪ್ಪಿಗೆ ಹೇಳಿಕೆ ಪಡೆಯುವ ಆತುರದಲ್ಲಿ ಪೊಲೀಸರು ಅತಿರೇಕದ ಕ್ರಮಗಳನ್ನು ಅನುಸರಿಸುತ್ತಾರೆ. ಹೀಗೆ ಪಡೆದ ಹೇಳಿಕೆಗಳ ಕುರಿತಾದ ಸುದ್ದಿಯ ತುಣುಕುಗಳನ್ನು ತಮಗೆ ಬೇಕಾದ ಮಾಧ್ಯಮದವರಿಗೆ ಸೋರಿಬಿಡುತ್ತಾರೆ ಒಂದು ಪ್ರಕರಣ ತನಿಖೆಯ ಹಂತದಲ್ಲಿರುವಾಗ ವಿವರಗಳನ್ನು ಮಾಧ್ಯಮಗಳಲ್ಲಿ ಪ್ರಕಟವಾಗಲು ಬಿಡುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಮಾಧ್ಯಮಗಳಲ್ಲಿ ಪ್ರಕಟವಾಗುವ ವದಂತಿಗಳಿಂದ ಬಂಧಿತರ ಮಾನ ಮರ್ಯಾದೆಗೆ ಧಕ್ಕೆಯಾಗುತ್ತದೆ ಮಾತ್ರವಲ್ಲ ವಿಚಾರಣೆಯ ಮೇಲೆಯೂ ಪರಿಣಾಮ ಬೀರುತ್ತದೆ. ಆ ನಂತರ ಅವರು ನಿರ್ದೋಷಿಗಳೆಂದು ಬಿಡುಗಡೆ ಹೊಂದುವಂತಾದರೂ ಅಷ್ಟರೊಳಗೆ ಅವರಿಗಾದ ಅನ್ಯಾಯ ಸರಿಪಡಿಸಲಿಕ್ಕಾಗುವುದಿಲ್ಲ.

ಭಯೋತ್ಪಾದನೆ ಯಾವ ಕಾರಣಕ್ಕೂ ಸಮರ್ಥನೀಯವಲ್ಲ. ಅದನ್ನು ತಡೆಗಟ್ಟಲು ಪೊಲೀಸ್ ಹಾಗೂ ಗುಪ್ತಚರ ವ್ಯವಸ್ಥೆಯನ್ನು ಬಲಪಡಿಸಬೇಕಾಗಿದೆ. ಅದೇ ಸಮಯದಲ್ಲಿ ಪೊಲೀಸ್ ತನಿಖೆ ಹೆಚ್ಚು ವೈಜ್ಞಾನಿಕವಾಗಿ ನಡೆಯುವಂತಾಗಬೇಕಾಗಿದೆ ಯಾವುದೇ ಒಬ್ಬ ನಿರಪರಾಧಿಗೆ ಶಿಕ್ಷೆಯಾಗದಂತೆ ತಡೆಯಲು ತನಿಖೆ ಹಾಗೂ ವಿಚಾರಣೆಯ ವಿಧಾನದಲ್ಲಿಯೂ ಸುಧಾರಣೆಗಳಾಗಬೇಕಾಗಿದೆ. ●

ಭೂಕಂದಾಯ ತಿದ್ದುಪಡಿ ಮಸೂದೆ ಹಿಂದಿರುಗಿಸಿದ ರಾಜ್ಯಪಾಲರ ಕ್ರಮ ಎಷ್ಟು ಸರಿ?

ಹಳ್ಳಿಗಳಲ್ಲಿನ ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ಕಟ್ಟಿಸಿಕೊಂಡ ಮನೆಗಳನ್ನು ಸಕ್ರಮಗೊಳಿಸುವ ಸಲುವಾಗಿ ರಾಜ್ಯ ಸರ್ಕಾರ ಜಾರಿಗೆ ತರಲು ಉದ್ದೇಶಿಸಿದ್ದ ಕರ್ನಾಟಕ ಭೂ ಕಂದಾಯ ತಿದ್ದುಪಡಿ ಮಸೂದೆ-2012 ಅನ್ನು ಹಿಂದಿರುಗಿಸಿದ ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಅವರ ಕ್ರಮ ಆಕ್ಷೇಪಾರ್ಹವಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ. ಇದರಿಂದ ಗ್ರಾಮೀಣ ಪ್ರದೇಶಗಳ ಸರ್ಕಾರಿ ಭೂಮಿಯಲ್ಲಿ ನೆಲೆಸಿರುವ ವಸತಿರಹಿತ, ನಿವೇಶನರಹಿತ ಬಡವರಿಗೆ ದೊಡ್ಡ ಅನ್ಯಾಯವಾಗಲಿದೆ. ಅನೇಕ ವರ್ಷಗಳಿಂದ ಈ ಬಡವರು ತಮ್ಮ ಅನಧಿಕೃತ ಮನೆಗಳನ್ನು ಸಕ್ರಮಗೊಳಿಸುವಂತೆ ಒತ್ತಾಯಿಸುತ್ತಾ ಬಂದಿದ್ದಾರೆ. ಸೂರಿಲ್ಲದವರಿಗೆ ಸೂರು ನೀಡುವುದು ಸರ್ಕಾರದ ಜವಾಬ್ದಾರಿ. ಇದರಿಂದ ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆಯಾಗುತ್ತದೆ ಎಂಬ ರಾಜ್ಯಪಾಲರ ನಿಲುವು ಪ್ರಶ್ನಾರ್ಹವಾಗಿದೆ.

ವಾಸಕ್ಕೊಂದು ಮನೆ ಇಲ್ಲದವರು, ಸಣ್ಣ ನಿವೇಶನವೊಂದನ್ನು ಕೊಂಡುಕೊಳ್ಳುವ ಸಾಮರ್ಥ್ಯ ಇಲ್ಲದವರು ಸರ್ಕಾರಿ ಜಾಗದಲ್ಲಿ ಮನೆಕಟ್ಟಿಕೊಂಡರೆ ಅದು ಭೂ ಕಬಳಿಕೆ ಆಗಲಾರದು. ಶ್ರೀಮಂತರು, ಭೂಗಳ್ಳರು ಸರ್ಕಾರಿ ಭೂಮಿಯನ್ನು ಕಬಳಿಸುವುದನ್ನು ಮತ್ತು ನಿರ್ಗತಿಕರು ಸರ್ಕಾರಿ ಭೂಮಿಯಲ್ಲಿ ಸೂರೊಂದನ್ನು ನಿರ್ಮಿಸುವುದನ್ನು ಒಂದೇ ಅಳತೆಗೋಲಿನಿಂದ ಅಳೆಯಬಾರದು. ಸರ್ಕಾರಿ ಭೂ ಕಬಳಿಕೆಗೆ ಸಂಬಂಧಿಸಿದಂತೆ ರಚಿಸಲಾಗಿದ್ದ ವಿ. ಬಾಲಸುಬ್ರಮಣಿಯನ್ ಸಮಿತಿ ನೀಡಿದ ವರದಿಯಾಗಲಿ, ಎ.ಟಿ. ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ ನೀಡಿದ ವರದಿಯಾಗಲಿ ಭೂಗಳ್ಳತನ ತಡೆಯಲು ಕಠಿಣಕ್ರಮ ಜರುಗಿಸಬೇಕೆಂದು ಶಿಫಾರಸು ಮಾಡಿವೆ. ಪ್ರಸಕ್ತ ತಿದ್ದುಪಡಿ ಮಸೂದೆಯಲ್ಲಿ ಆ ಅಂಶಗಳನ್ನು ಒಳಪಡಿಸಿ ಭೂಹೀನ, ವಸತಿರಹಿತ ಬಡವರ ಅನಧಿಕೃತ ಮನೆಗಳನ್ನು ಮಾತ್ರ ಸಕ್ರಮಗೊಳಿಸಲು ರಾಜ್ಯಪಾಲರು ಸರ್ಕಾರಕ್ಕೆ ಸೂಚನೆ ನೀಡಬಹುದು. ಇದರ ಜೊತೆಯಲ್ಲಿ ರಾಜ್ಯದಲ್ಲಿ ಇರುವ ನಿವೇಶನ ರಹಿತರು ಮನೆ-ನಿವೇಶನಗಳಿಗಾಗಿ ಸಲ್ಲಿಸಿರುವ ಲಕ್ಷಾಂತರ ಅರ್ಜಿಗಳನ್ನು ಇತ್ಯರ್ಥ ಪಡಿಸಬೇಕೆಂದು ರೈತ ಹಾಗೂ ಕೃಷಿಕೂಲಿಕಾರರ ಸಂಘಗಳು ಸರ್ಕಾರವನ್ನು ಒತ್ತಾಯಿಸಿವೆ. ●

ಸಂತಾಪ

ತಮಿಳುನಾಡಿನ ಶಿವಕಾಶಿಯ ಪಟಾಕಿ ತಯಾರಿಕೆಯ ಕಾರ್ಖಾನೆಯೊಂದರಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ 54 ಜನ ಕಾರ್ಮಿಕರು ಮೃತಪಟ್ಟಿದ್ದು 100 ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆಯ ಬಗ್ಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಮೃತರ ಕುಟುಂಬಗಳಿಗೆ ಹಾಗೂ ಗಾಯಗೊಂಡವರಿಗೆ ಗರಿಷ್ಠ ಪರಿಹಾರ ನೀಡಬೇಕೆಂದು ಒತ್ತಾಯಿಸಿರುವ ಮಂಡಳಿಯು ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾದ ಕಾರ್ಖಾನೆಯ ಮಾಲೀಕನ ವಿರುದ್ಧ ಕಠಿಣ ಕಾನೂನು ಕ್ರಮ ಜರಗಿಸಬೇಕೆಂದು ಆಗ್ರಹಿಸಿದೆ. ಶಿವಕಾಶಿಯಲ್ಲಿ ಮೇಲಿಂದ ಮೇಲೆ ಪಟಾಕಿ ತಯಾರಿಸುವ ಕಾರ್ಖಾನೆಗಳಲ್ಲಿ ಅಗ್ನಿ ಅವಘಡಗಳು ಸಂಭವಿಸುತ್ತಿದ್ದು ಅಗತ್ಯ ಮುನ್ನೆಚ್ಚರಿಕೆಯ ಕ್ರಮಗಳನ್ನು ಜಾರಿಗೊಳಿಸುವಲ್ಲಿ ತಮಿಳುನಾಡು ಸರ್ಕಾರದ ವಿಫಲತೆ ಖಂಡನಾರ್ಹವಾಗಿದೆ. ●

ಖಂಡನೆ : ವಿದ್ಯಾರ್ಥಿನಿಯ ಮೇಲೆ ಎಬಿವಿಪಿ ಹಲ್ಲೆ:

ಮಂಗಳೂರಿನಲ್ಲಿ ಹಿಂದುತ್ವ ಸಂಘಟನೆಯ ಪುಂಡರು ಯುವತಿಯರ ಮೇಲೆ ಹಲ್ಲೆ ಮಾಡಿದ ಪ್ರಕರಣ ಇನ್ನೂ ಹಸಿರಾಗಿರುವಾಗಲೇ ಜಿಲ್ಲೆಯ ಸುಳ್ಯ ತಾಲ್ಲೂಕಿನ ಬೆಳ್ಳಾರೆಯಲ್ಲಿ ಅಲ್ಪಸಂಖ್ಯಾತ ಕೋಮಿಗೆ ಸೇರಿದ ವಿದ್ಯಾರ್ಥಿನಿಯೊಬ್ಬಳ ಮೇಲೆ ಸಂಘ್ ಪರಿವಾರಕ್ಕೆ ಸೇರಿದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಾರ್ಯಕರ್ತರು ಹಲ್ಲೆ ಮಾಡಿ ಅವಳು ತೊಟ್ಟ ಬಟ್ಟೆಗಳನ್ನು ಹರಿದು ಹಾಕಲು ಯತ್ನಿಸಿದ ಅಮಾನುಷ ಕೃತ್ಯವನ್ನು ಭಾರತ ವಿದ್ಯಾರ್ಥಿಫೆಡರೇಷನ್(ಎಸ್‌ಎಫ್‌ಐ) ಬಲವಾಗಿ ಖಂಡಿಸಿದೆ. ಕೇಂದ್ರ ಕಾಂಗ್ರೆಸ್ ಸರ್ಕಾರದ ಕಲ್ಲಿದ್ದಲು ನಿಕ್ಷೇಪ ಹಗರಣವನ್ನು ವಿರೋಧಿಸಿ ಎಬಿವಿಪಿ ನೀಡಿದ ಕಾಲೇಜ್ ಬಂದ್ ಕರೆಯಲ್ಲಿ ಪಾಲ್ಗೊಳ್ಳಲು ಇಷ್ಟಪಡದೆ ತಮ್ಮ ಕ್ಲಾಸ್‌ರೂಂನಲ್ಲಿಯೇ ಉಳಿದಿದ್ದ ವಿದ್ಯಾರ್ಥಿನಿಯರಲ್ಲಿ ಈ ಮುಸ್ಲಿಂ ವಿದ್ಯಾರ್ಥಿನಿಯನ್ನು ಗುರಿಯಾಗಿಸಿಕೊಂಡು ಹಲ್ಲೆ ಮಾಡಲಾಗಿದೆ. ಅವರ ಸಂಕುಚಿತ ವಿಚಾರಗಳೊಂದಿಗೆ ಸಹಮತ ವ್ಯಕ್ತಪಡಿಸಲು ನಿರಾಕರಿಸುವ ಕಾಲೇಜು ಉಪನ್ಯಾಸಕರ ಮೇಲೆ ಹಾಗೂ ಕಾಲೇಜ್ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೇಲೆ ಹಲ್ಲೆ ಮಾಡುವುದು ಎಬಿವಿಪಿ ಸಂಘಟನೆಯಲ್ಲಿ ಬೇರೂರಿರುವ ಪ್ರವೃತ್ತಿ. ಅಲ್ಪಸಂಖ್ಯಾತ ಕೋಮಿಗೆ ಸೇರಿದ ಯುವಕ ಯುವತಿಯರಿಗೆ ಕಿರುಕುಳ ನೀಡುವುದರಲ್ಲಿ ಈ ಪುಂಡರು ವಿಕೃತ ತೃಪ್ತಿ ಪಡೆದುಕೊಳ್ಳುತ್ತಾರೆ. ಸುಳ್ಯದಲ್ಲಿ ನಡೆದಿರುವ ಘಟನೆಯನ್ನು ಸಾರ್ವಜನಿಕರು ತೀವ್ರವಾಗಿ ಖಂಡಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ಎಬಿವಿಪಿ ಕಾರ್ಯಕರ್ತರ ಮೇಲೆ ಹೂಡಲಾಗಿದ 8 ಕ್ರಿಮಿನಲ್ ಕೇಸುಗಳನ್ನು ಬಿಜೆಪಿ ರಾಜ್ಯ ಸರ್ಕಾರ ವಾಪಸ್ ತೆಗೆದು ಕೊಳ್ಳುವ ತೀರ್ಮಾನ ಕೈಗೊಳ್ಳುವ ಮೂಲಕ ಎಬಿವಿಪಿ ಪುಂಡಾಟಿಕೆಗೆ ಸರ್ಕಾರ ಕುಮ್ಮಕ್ಕು ನೀಡುತ್ತಿರುವುದನ್ನು ಸಹ ತೀವ್ರವಾಗಿ ಖಂಡಿಸಬೇಕಾಗಿದೆ. ●

ಭಾರತದ ಪೇಟೆಂಟ್ ಕಾಯಿದೆ ತಿದ್ದುಪಡಿಗೆ ಬಹುರಾಷ್ಟ್ರೀಯ ಕಂಪನಿಗಳ ಒತ್ತಡವೂ ದೇಶೀಯ ಜನರಿಕ್ ಔಷಧಿಗಳನ್ನು ವಿದೇಶಗಳಿಗೆ ಮಾರದಂತೆ ತಂದ ತಡೆಯೂ

ಜನರಿಗೆ ಕಡಿಮೆ ದರದ ಔಷಧ ಸಿಗದಂತೆ ಮಾಡಲು ಎಷ್ಟೊಂದು ಅಡೆ ತಡೆಗಳು– ಕುತಂತ್ರಗಳು !! ಈ ವಿಚಾರದಲ್ಲಿ ಬಹುರಾಷ್ಟ್ರೀಯ ಕಂಪನಿಗಳನ್ನು ಸಾಮರ್ಥ್ಯವನ್ನು ಕೇಳ ಬೇಕೆ ? ಓದಿ ಕತೂಹಲದ ಸಂಗತಿಗಳು. ನಿಮಗಾಗಿ.

ಡಾ॥ ಪ್ರಕಾಶ್ ಸಿ. ರಾವ್

ಭಾರತದಲ್ಲಿ ಬಹುರಾಷ್ಟ್ರೀಯ ಕಂಪನಿಗಳು (ಫೈಝರ್, ಜಿ.ಎಸ್.ಕೆ. ಹಾಗೂ ಅಬಟ್) ತಮ್ಮ ಬ್ರಾಂಡ್ ಔಷಧಿಗಳನ್ನು ಮಾರುತ್ತಿವೆ. ಇನ್ನು ಮುಂದೆ ಈ ಕಂಪನಿಗಳ ವಹಿವಾಟು ಕಡಿಮೆಯಾಗಲಿದೆ. ಅದರ ಬದಲು ಭಾರತದ ಡಾ॥ ರೆಡ್ಡಿ ಲ್ಯಾಬೊರೇಟರೀಸ್, ಸಿಪ್ಲಾ ಕಂಪನಿಗಳು ಈ ಜನರಿಕ್ ಔಷಧಿಗಳನ್ನು ತಯಾರಿಸಲು ಸಜ್ಜಾಗಬೇಕಿದೆ. ಈಗಾಗಲೇ ಹಲವಾರು ಕಂಪನಿಗಳು ಜನರಿಕ್ ಔಷಧಿಗಳನ್ನು ತಯಾರಿಸುತ್ತಿವೆ. ಅವುಗಳಲ್ಲಿ ಗುಜರಾತ್‌ನ 'ಲೋಕಾಸ್ಟ್' (Locost) ಎಂಬುದು ದಶಕಗಳಿಂದ ಜನರಿಕ್ ಔಷಧಿಗಳನ್ನು ತಯಾರಿಸುತ್ತ ಬಂದ ಸಂಸ್ಥೆ.

ಈಗಿನ ದಿನಗಳಲ್ಲಿ ಹಲವಾರು ದೇಶಗಳು ತಮ್ಮ ಔಷಧಿ ವೆಚ್ಚವನ್ನು ಕಡಿಮೆ ಮಾಡಲು ಜನರಿಕ್ ಔಷಧಿಗಳನ್ನು ತಯಾರಿಸಿ ಉಪಯೋಗಿಸುತ್ತ ಬಂದಿದೆ. ಆದರೆ ಜನರಿಕ್ ಔಷಧಿ ಬಳಕೆಗೆ ಹಲವಾರು ಅಡ್ಡಿಗಳಿವೆ.


1. ಕಳಪೆ ಜನರಿಕ್‌ಗಳು
2. ಔಷಧಿ ಕಂಪನಿಗಳು ಜನರಿಕ್ ಔಷಧಿಗಳನ್ನು ತಯಾರಿಸದೇ ಇರುವುದು. ಔಷಧಿ ಅಂಗಡಿಗಳಲ್ಲಿ ಜನರಿಕ್ ಔಷಧಿ ದೊರಕದೇ ಇರುವುದು
3. ವೈದ್ಯರು ಜನರಿಕ್ ಔಷಧಿ ಆದೇಶ ನೀಡದೇ ಇರುವುದು
4. ಜನರಿಗೆ ಹಾಗೂ ವೈದ್ಯರಿಗೆ ಜನರಿಕ್ ಔಷಧಿಗಳ ಬಗ್ಗೆ ಮಾಹಿತಿ ಇಲ್ಲದಿರುವುದು.

ಅಮೇರಿಕಾ, ಬ್ರಿಟನ್ ಹಾಗೂ ಪಶ್ಚಿಮ ಯೂರೋಪಿನ ಬಹುರಾಷ್ಟ್ರೀಯ ಕಂಪನಿಗಳು ಬ್ರಾಂಡ್ ಔಷಧಿಗಳನ್ನು ಭಾರತ ಹಾಗೂ ತೃತೀಯ ಬಡದೇಶಗಳಲ್ಲಿ ಮಾರಿ ಲಾಭಮಾಡುತ್ತಿವೆ. ಆದರೆ ಆ ದೇಶಗಳಲ್ಲಿ ಜನರಿಕ್ ಔಷಧಿ ಉಪಯೋಗವೇ ಬ್ರಾಂಡ್ ಔಷಧಿಗಿಂತ ಹೆಚ್ಚು. ಭಾರತದ ಲೂಪಿನ್ ಲ್ಯಾಬೋರೇಟರೀ, ಸೀರಮ್ ಇನ್‌ಸ್ಟಿಟ್ಯೂಟ್, ಅಮೇರಿಕಾಕ್ಕೆ ಜನರಿಕ್ ಔಷಧಿಗಳನ್ನು ರಫ್ತು ಮಾಡುತ್ತವೆ.

ಅನೇಕ ಬಹುರಾಷ್ಟ್ರೀಯ ಕಂಪನಿಗಳು ಮೊದಲಿಗೆ ಭಾರತದ ಪೇಟೆಂಟ್ ಕಾಯಿದೆಗೆ ತಿದ್ದುಪಡಿ ತರಲು ಒತ್ತಡ ತಂದವು (2005) ಈಗಿನ ದಿನಗಳಲ್ಲಿ ಭಾರತದ ಜನರಿಕ್ ಔಷಧಿಗಳನ್ನು ಬೇರೆ ದೇಶಗಳಿಗೆ ಮಾರದಂತೆ ಒತ್ತಡ ತಂದಿವೆ. ಇದಕ್ಕೆ ವಿಶ್ವ ಆರೋಗ್ಯ ಸಂಸ್ಥೆಯೂ ಧ್ವನಿಗೂಡಿಸಿದೆ. ಜನರಿಕ್ ಔಷಧಿಗಳ ಒಂದು ದೊಡ್ಡ ಸಾಗಾಣಿಕೆಯು (Consignment) ಸರಕನ್ನು ಯುರೋಪಿನ ಬಂದರುಗಳಲ್ಲಿಯೇ ತಡೆಹಿಡಿದು, ಅದು ಪೇಟೆಂಟ್ ಕಾಯಿದೆಯನ್ನು ಉಲ್ಲಂಘಿಸಿದೆಯೆಂದು ಹೇಳಿ ಆ ಔಷಧಿಗಳು ಕಳಪೆ ಔಷಧಿಗಳೆಂದು ಭಾರತಕ್ಕೆ ಕಳುಹಿಸಿದೆ.

ಬ್ರೆಝಿಲ್‌ಗೆ ಭಾರತವು ಕಳುಹಿಸಿದ ಜನರಿಕ್ ಔಷಧಿಗಳನ್ನು 2009ರಲ್ಲಿ, ಬ್ರೆಝಿಲ್‌ಗೆ ಕಳುಹಿಸದೇ ಆಮ್ಸರ್‌ಡ್ಯಾಂಗೆ ಕಳುಹಿಸಿ, ಅಲ್ಲಿ ತಡೆಹಿಡಿದು ತಿರುಗಿ ಭಾರತಕ್ಕೆ ಕಳುಹಿಸಲಾಯಿತು!

ವಿಶ್ವ ವ್ಯಾಪಾರ ಸಂಘಟನೆ ಜನರಿಕ್ ಔಷಧಿಗಳು ಹಲವಾರು ದೇಶಗಳಲ್ಲಿ ಪ್ರಾಮುಖ್ಯತೆ ಪಡೆಯುತ್ತಿವೆ. ಜನರಿಕ್ ಔಷಧಿಗಳನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ರಫ್ತು ಮಾಡಿದಾಗ, ಅದು ವಿಶ್ವ ವ್ಯಾಪಾರ ಸಂಘಟನೆಯ ಮೂಲಕ ಬೇರೆ ದೇಶಕ್ಕೆ ಹೋಗಬೇಕಾಗುತ್ತದೆ. ವಿಶ್ವ ವ್ಯಾಪಾರ ಸಂಘಟನೆ ಒಂದು ಅಂತರಾಷ್ಟ್ರೀಯ ಸಂಸ್ಥೆಯಾಗಿದ್ದು, ಅಲ್ಲಿ ಅದರ ಸದಸ್ಯ ರಾಷ್ಟ್ರಗಳು ವ್ಯಾಪಾರ ಒಪ್ಪಂದಗಳನ್ನು ಹಾಗೂ ವ್ಯಾಪಾರ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ವಿಶ್ವ ವ್ಯಾಪಾರ ಸಂಘಟನೆ ಬಡದೇಶಗಳಲ್ಲಿ ಜನರಿಕ್ ಔಷಧಿಗಳನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ, ತನ್ನ ಕಾನೂನಿನಲ್ಲಿ ತಿದ್ದುಪಡಿ ತರುವುದಾಗಿ ಅದರ ಉಪನಿರ್ದೇಶಕರಾದ ಹರ್ಷವರ್ಧನ್ ಸಿಂಗ್ ಅವರು ಹೇಳಿದ್ದಾರೆ. ಈ ತಿದ್ದುಪಡಿಯಿಂದ ಜನರಿಕ್ ಔಷಧಿಗಳನ್ನು ಬಡದೇಶಗಳಿಗೆ ಸುಲಭವಾಗಿ ರಫ್ತು ಮಾಡಬಹುದಾಗಿದೆ ಹಾಗೂ ಕಡಿಮೆ



ಬೆಲೆಯ ಜನರಿಕ್ ಔಷಧಿಗಳನ್ನು ಆ ದೇಶದ ಜನರಿಗೆ ದೊರಕುವಂತೆ ಮಾಡಬಹುದಾಗಿದೆ. ಈ ತಿದ್ದುಪಡಿ ತರಲು ಇದನ್ನು 150 ಸದಸ್ಯತ್ವ ಹೊಂದಿದ ವಿಶ್ವ ವ್ಯಾಪಾರ ಸಂಘಟನೆಯಲ್ಲಿ ಮಂಡಿಸಿ ಪರವಾನಗಿ ತೆಗೆದುಕೊಳ್ಳಬೇಕಾಗುತ್ತದೆ. ನಂತರ ಕೆಲವು ದೇಶಗಳು, ತಮ್ಮ ದೇಶದ ಸಂಸತ್ತಿನ ಪರವಾನಗಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿಶ್ವ ವ್ಯಾಪಾರ ಸಂಘಟನೆ ಮುಂದಿನ ದಿನಗಳಲ್ಲಿ 'ಜಗತ್ತಿನಲ್ಲಿ ತಯಾರಿಸಿದ್ದು' ಎಂಬ ಪರಿಕಲ್ಪನೆಯನ್ನು ದೇಶಗಳ ಮುಂದಿಡುತ್ತಿದೆ ಎಂಬುದನ್ನು ಹರ್ಷವರ್ಧನ್ ಅವರು ಅಭಿಪ್ರಾಯಪಟ್ಟಿದ್ದಾರೆ. ಈ ವರ್ಷ ವಿಶ್ವ ಆರೋಗ್ಯ ಸಭೆಯಲ್ಲಿ (World Health Assembly) ಭಾರತ ಬ್ರೆಝಿಲ್, ಥೈಲ್ಯಾಂಡ್, ಬ್ರಿಕ್ಸ್ ದೇಶಗಳು, ಸಿಯಾರೋ ದೇಶಗಳು ವಿಶ್ವ ಆರೋಗ್ಯ ಸಂಸ್ಥೆಯನ್ನು ಖಂಡಿಸಿ ವಿಶ್ವ ಆರೋಗ್ಯ ಸಂಸ್ಥೆ, 'ಬೌದ್ಧಿಕ ಆಸ್ತಿ ಹಕ್ಕು ಕಾನೂನು' ಹಾಗೂ ಜನರಿಕ್ ಔಷಧಿಗಳ ಬಗ್ಗೆ ಉಂಟು ಮಾಡಿರುವ ಗೊಂದಲಗಳನ್ನು ನಿವಾರಿಸಿ, ಇನ್ನು ಮುಂದೆ ತನ್ನನ್ನು ಆರೋಗ್ಯ ವಿಷಯಗಳಿಗೆ ಸೀಮಿತಗೊಳಿಸಿಕೊಳ್ಳಬೇಕೆಂದು ಎಚ್ಚರಿಕೆ ನೀಡಿದೆ.

ಜನರಿಕ್ ಔಷಧಿಗಳು ಹಲವಾರು ದಶಕಗಳಿಂದ ನಮ್ಮ ಮಧ್ಯೆ ಇವೆ. ಭಾರತ ಜನರಿಕ್ ಔಷಧಿ ತಯಾರಿಸುವ ದೇಶಗಳ ಮುಖಂಡ. ಭಾರತದ ಜನರಿಕ್ ಔಷಧಿಗಳು ಆಫ್ರಿಕಾ ಹಾಗೂ ಇತರೇ ಮುಂದುವರೆಯುತ್ತಿರುವ 80 ದೇಶಗಳ ಮಾರುಕಟ್ಟೆಗೆ ರಫ್ತಾಗುತ್ತಿದೆ. ಪೇಟೆಂಟ್ ಕಾಯಿದೆಗೆ ತಿದ್ದುಪಡಿ ತರುವಾಗ ವಿಶ್ವ ಆರೋಗ್ಯ ಸಂಸ್ಥೆಯೇ ಭಾರತಕ್ಕೆ ಜನರಿಕ್ ಔಷಧಿಗಳನ್ನು ಇತರೇ ದೇಶಗಳಿಗೆ ನೀಡುವುದನ್ನು ಮುಂದುವರಿಸಲು ಕೇಳಿಕೊಂಡಿತ್ತು.

ಈ ಹಿನ್ನೆಲೆಯಲ್ಲಿ ಭಾರತ ಸರಕಾರ ಜನರಿಕ್ ಔಷಧಿಗಳನ್ನು ಉಚಿತವಾಗಿ ನೀಡುವುದು ಹಾಗೂ 'ರಾಜ್ಯ ಸರ್ಕಾರ ಜನರಿಕ್ ಔಷಧಿ ಮಳಿಗೆಯನ್ನು ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ತೆಗೆಯುವುದು, ಸ್ವಾಗತಾರ್ಹ ಹಾಗೂ ನಿರ್ಣಾಯಕ ಹೆಜ್ಜೆ. ಆನಾರೋಗ್ಯ ಸಾಧನೆಗೆ ಇಂತಹ ಪ್ರಯತ್ನಗಳು ಅತ್ಯಗತ್ಯ. ■

ಹಾರಕನಾಳು ಸರ್ಕಲ್‌ನಲ್ಲಿ ರಸ್ತೆ ತಡೆ

ಹಾರಕನಾಳು ಹರಪನಹಳ್ಳಿ ತಾಲ್ಲೂಕಿನಲ್ಲಿಯೇ ಒಂದು ದೊಡ್ಡ ಗ್ರಾಮ ಪಂಚಾಯತಿ ಆಗಿದ್ದು ಸುಮಾರು 30 ಸಾವಿರ ಜನಸಂಖ್ಯೆಯನ್ನು ಹೊಂದಿದೆ. ತಾಲೂಕು ಕೇಂದ್ರದಿಂದ 25 ಕಿ.ಮೀ ದೂರದಲ್ಲಿರುವ ಈ ಗ್ರಾಮ ಹಾಗೂ ಸುತ್ತಲಿನ ಇತರ ಗ್ರಾಮಗಳ ಗ್ರಾಮಸ್ಥರು ಇತ್ತೀಚೆಗೆ ಹಾರಕನಾಳು ಸರ್ಕಲ್‌ನಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಸುಮಾರು 4 ಗಂಟೆಗಳ ಕಾಲ ರಸ್ತೆ ತಡೆ ನಡೆಸಿ ತಮ್ಮ ಕೆಲವು ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನಸೆಳೆದರು.

ಈ ಸಂದರ್ಭದಲ್ಲಿ ಸಂಘದ ತಾಲೂಕು ಅಧ್ಯಕ್ಷ ಹಾಲೇಶ್ ನಾಯ್ಕ್ ಮಾತನಾಡಿ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಸ್‌ಬಿಎಂ ಬ್ಯಾಂಕ್ ಶಾಖೆಯನ್ನು ಬೇರೆಡೆಗೆ ಸ್ಥಳಾಂತರ ಮಾಡಲಾಗಿದ್ದು ಹಾರಕನಾಳು ಸೇರಿದಂತೆ ಸುತ್ತ ಮುತ್ತಲಿನ ಜನಕ್ಕೆ ತೊಂದರೆಯಾಗಿದೆ ಎಂದು ದೂರಿದರು. ಹಾರಕನಾಳು ಗ್ರಾಮದಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಶಾಖೆಯನ್ನು ಆರಂಭಮಾಡಬೇಕು, ಗ್ರಾಮದಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸುತ್ತಲಿನ ಹಳ್ಳಿಗಳ ಜನರು ಬಂದು ಹೋಗಲು ಅನುಕೂಲವಾಗುವಂತೆ ರಾಜ್ಯ ರಸ್ತೆ ಸಾರಿಗೆ



ಸಂಸ್ಥೆಯಿಂದ ಬಸ್ ಸೌಲಭ್ಯ ಒದಗಿಸಬೇಕು. ಚೆನ್ನಹಳ್ಳಿ, ಹಾರಕನಾಳು ಸಣ್ಣ ತಾಂಡಾ, ಈಶಾಪುರ ಮತ್ತು ಕನ್ನಾಯಕನಹಳ್ಳಿಯಲ್ಲಿ ಬಸ್ ನಿಲ್ದಾಣಗಳನ್ನು ನಿರ್ಮಾಣ ಮಾಡಬೇಕು, ಹಾರಕನಾಳು ಗ್ರಾಮದಲ್ಲಿರುವ ಎಸ್.ಸಿ. ಮತ್ತು ಎಸ್.ಟಿ ವಿದ್ಯಾರ್ಥಿ ಹಾಸ್ಟೆಲ್‌ಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು, ಹಾರಕನಾಳು ಗ್ರಾಮವನ್ನು ಹೋಬಳಿಯಾಗಿ ಘೋಷಿಸಬೇಕು, ನೆಮ್ಮದಿ ಕೇಂದ್ರವನ್ನು ತೆರೆಯಬೇಕು ಬರಗಾಲದ ಹಿನ್ನೆಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಮಾಡಿ ವರ್ಷದಲ್ಲಿ ಒಬ್ಬರಿಗೆ 200 ದಿನಗಳ ಕೆಲಸ ಕೊಡಬೇಕು, ಕುಡಿಯುವ ನೀರಿಗಾಗಿ ಕೊಳವೆ ಭಾವಿಗಳನ್ನು ತೊಡಬೇಕು ಹಾಗೂ ಸರಿಯಾಗಿ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಕೆ. ಮಲ್ಲಿನಾಥ ಹಾಗೂ ಸಾರಿಗೆ ಅಧಿಕಾರಿಗಳು ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದರು. "ಹಾರಕನಾಳು ಮತ್ತು ಇತ್ತರ ಗ್ರಾಮಗಳ ಜನರ ಸಮಸ್ಯೆಗಳನ್ನು ಗಮನಿಸಲಾಗಿದೆ. ಅಗತ್ಯವಾಗಿ ಬೇಕಾದ ಸೌಕರ್ಯಗಳನ್ನು ಕೂಡಲೇ ಒದಗಿಸುವ ಪ್ರಯತ್ನ ಮಾಡುತ್ತೇನೆ" ಎಂದು ತಹಶೀಲ್ದಾರ್ ಭರವಸೆ ನೀಡಿದ ಬಳಿಕ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳಲಾಯಿತು.

ಕೂಲಿಕಾರರ ಸಂಘದ ಮುಖಂಡರಾದ ಕೆ.ಟಿ. ರಾಜಪ್ಪ, ಸೇವಾ ನಾಯ್ಕ್, ರಮೇಶ್ ನಾಯ್ಕ್, ಜಗದೀಶ್ ನಾಯ್ಕ್ ಮೊದಲಾದವರು ಪ್ರತಿಭಟನೆಯ ನೇತೃತ್ವವಹಿಸಿದ್ದರು.

ಎಲ್.ಬಿ. ಹಾಲೇಶ್ ನಾಯ್ಕ್

ಬೆಂಗಳೂರು ಮಹಾನಗರದಲ್ಲಿ ಯುವ ಜನರ ಬೇಗುದಿಗಳು

ಯುವಜನರ ಬದುಕಿನ ಬೇಗುದಿಗಳಿಗೆ ನಾನಾ ಮುಖಗಳಿವೆ. ಮೂಲಭೂತ ಸಮಸ್ಯೆ ಹೆಚ್ಚು ಕಡಿಮೆ ಒಂದೇ ಆದರೂ ಸ್ವರೂಪ ಮತ್ತು ತೀವ್ರತೆಯಲ್ಲಿ ಜಾಗದಿಂದ ಜಾಗಕ್ಕೆ ಬೇರೆಯಾಗುತ್ತವೆ. ಬೆಂಗಳೂರಿನಂತಹ ಮಹಾನಗರದಲ್ಲಿ ಯುವಜನರ ಬದುಕು ಬವಣೆ ಏನಿದೆ ? ಹೇಗಿದೆ? ಓದಿ.

ಬಿ. ರಾಜಶೇಖರ ಮೂರ್ತಿ

ಒಂದು ಕಾಲದಲ್ಲಿ 'ಬೆಂದಕಾಳೂರು' ಎನಿಸಿಕೊಂಡಿತ್ತೆನ್ನಲಾದ ಬೆಂಗಳೂರು ಮಹಾನಗರ ಇಂದು ನಾನಾ ಬೆಳವಣಿಗೆಗಳನ್ನು ಕಂಡಿದೆ. ನಾನಾ ಸಮುದಾಯ ನಾನಾ ಬೇಗುದಿ ಸಂಕಟಗಳನ್ನು ಒಡಲೊಳಗೆ ಹೊತ್ತು ಕೊಂಡಿದ್ದರೂ ಪ್ರಸ್ತುತ 'ಮಾಹಿತಿ ತಂತ್ರಜ್ಞಾನ'ದ ರಾಜಧಾನಿ ಸಿಲಿಕಾನ್ ಸಿಟಿ ಎಂದೆಲ್ಲಾ 'ಖ್ಯಾತಿ'ಯನ್ನೂ ಗಳಿಸಿ 'ಹೊಳೆ' ಯುತ್ತಿರುವ ನಗರವಾಗಿದೆ.

ವಲಸೆ ಮತ್ತು ವೇಗದ ಬೆಳವಣಿಗೆ

ಈ ನಗರ ಈಗಲೂ ಶರವೇಗದಲ್ಲಿ ಬೆಳೆಯುತ್ತಿದೆ. ಬೆಂಗಳೂರು ನಗರದಲ್ಲಿ 95.88 ಲಕ್ಷ ಜನಸಂಖ್ಯೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 9.87 ಲಕ್ಷ ಸೇರಿ 1.0575ಕೋಟಿ ಜನಸಂಖ್ಯೆ ಇದ್ದು ಇದು ದಿನೇ ದಿನೇ ಹೆಚ್ಚುತ್ತಿದೆ. ಇದಕ್ಕೆ ಕಾರಣ ಜನ ಸಂಖ್ಯೆಯ ಸಹಜ ಬೆಳವಣಿಗೆ ಅಲ್ಲ. ಬದಲಿಗೆ ಬದುಕನ್ನು ಅರಿಸಿ ಬರುತ್ತಿರುವ ರಾಜ್ಯದ ಒಳಗಿನ ಮತ್ತು ಹೊರಗಿನ ವಲಸಿಗರಿಗೆ ಪ್ರಧಾನವಾಗಿ ಬೆಂಗಳೂರು ಒಂದು ಆಶ್ರಯ-ಬದುಕು ನೀಡುವ ಕೇಂದ್ರವಾಗಿ ಕಾಣುತ್ತಿರುವುದು. ಉತ್ತರ ಭಾರತದಿಂದ ಮತ್ತು ಉತ್ತರ ಕರ್ನಾಟಕ ದಿಂದ ಬರುವ ರೈಲುಗಳಲ್ಲಿ ಮತ್ತು ಬಸ್ಸುಗಳಲ್ಲಿ ಕಡುಬಡ ಜನರು ಮತ್ತು ಕೆಳ ಮಧ್ಯಮ ವರ್ಗದ ಯುವಕರು ಮುಖ್ಯವಾಗಿ ಉದ್ಯೋಗದ ಅವಲಂಬನೆಗಾಗಿ ಮತ್ತು ಒಂದು ವಿಭಾಗದ ಯುವಜನತೆ ವಿದ್ಯಾರ್ಜನೆಗಾಗಿ ಬೆಂಗಳೂರಿಗೆ ಬರುತ್ತಿದ್ದಾರೆ. ನಮ್ಮ ಉತ್ತರ ಕರ್ನಾಟಕದ ದುಡಿಮೆಗಾರರು ಪ್ರತಿದಿನ ಮಕ್ಕಳು-ಮರಿ ಮತ್ತು ತಮ್ಮ ಗಂಟು ಮೂಟೆಗಳನ್ನು ಕಟ್ಟಿಕೊಂಡು ಬರುವುದನ್ನು ಕೆಂಪೇಗೌಡ ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಲ್ಲಿ ಕಾಣಬಹುದು. ಬೆಂಗಳೂರಿನ ಒಟ್ಟು ಜನಸಂಖ್ಯೆಯ ಬೆಳವಣಿಗೆಗೆ ಉದ್ಯೋಗ ಅರಸಿ ಬರುವವರ ವಲಸೆಯೂ ಕಾರಣವಾಗಿದೆ. ಹೀಗೆ ಪ್ರತಿ ಚದರ ಕಿ.ಮಿ. ವ್ಯಾಪ್ತಿ ಜನಸಾಂದ್ರತೆ ಅಂದರೆ ವಾಸಿಸುವ ಜನರ ಸಂಖ್ಯೆ ರಾಷ್ಟ್ರೀಯ ಮಟ್ಟದಲ್ಲಿ ಸರಾಸರಿ 382 ಇದ್ದರೆ, ರಾಜ್ಯದಲ್ಲಿ ಈ ಪ್ರಮಾಣ 319 ಇದೆ. ಆದರೆ ಬೆಂಗಳೂರಿನಲ್ಲಿ ಪ್ರತಿ ಚದರ ಕಿ.ಮಿ. ವ್ಯಾಪ್ತಿಯಲ್ಲಿ ಸರಾಸರಿ 4,378 ಜನ ವಾಸವಿದ್ದಾರೆ. ಹೀಗಾಗಿ ಜನಸಂಖ್ಯೆಯ ಸಾಂದ್ರತೆಯೂ ಈಗ ಶೇ.47ನ್ನು ಮೀರಿದೆ.

ಶ್ರೀಮಂತರು ಕೋಟ್ಯಾಧಿಪತಿಗಳ ಊರು

ಈ ಮಟ್ಟಿಗೆ ಇರುವ ಜನಸಂಖ್ಯೆ ಜೊತೆಗೆ ಅಗರ್ಭ ಶ್ರೀಮಂತರನ್ನು ಹೊಂದಿರುವ ನಗರಗಳಲ್ಲಿ ಒಂದಾಗಿದೆ. ದೇಶದಲ್ಲಿ 35ಲಕ್ಷ ದಶಲಕ್ಷಾಧಿಪತಿ ಕುಟುಂಬಗಳಲ್ಲಿ 2 ಲಕ್ಷ 5 ಸಾವಿರ ಕುಟುಂಬಗಳು ಬೆಂಗಳೂರಿನಲ್ಲೇ ವಾಸಿಸುತ್ತಿವೆ. ಬೆಂಗಳೂರು ನಗರವು ರಾಷ್ಟ್ರದ ಮೂರನೇ ಅತಿ ಶ್ರೀಮಂತ ನಗರವಾಗಿದೆ.



ನಾಲ್ಕನೇ ದೊಡ್ಡ ಗ್ರಾಹಕ ಸರಕುಗಳ ಮಾರುಕಟ್ಟೆಯ ಕೇಂದ್ರವಾಗಿ ಮಾರ್ಪಟ್ಟಿದೆ ಎಂಬುದಕ್ಕೆ ಚೆನ್ನೈ, ಹೈದರಾಬಾದ್ ಮತ್ತು ಕೇರಳದ ತಿರುವನಂತಪುರ ಯಾಕೆ ಮುಂಬೈ ನಗರದ ಮಾಲ್ ಗಳಿಗೆ ಸವಾಲು ಹಾಕುವಂತಹ ರೀತಿಯಲ್ಲಿ ಮಾಲುಗಳು ನಗರಾದ್ಯಂತ ವಿಸ್ತರಿಸಿಕೊಳ್ಳುತ್ತಿರುವುದೇ ಸಾಕ್ಷಿ.

'ಬಂಡವಾಳದ ಆಕರ್ಷಣೆ'ಯ ಕೇಂದ್ರ ಮತ್ತು ಹೆಚ್ಚುತ್ತಿರುವ ಭೂಮಿ ದಾಹ

ಇವುಗಳ ಜೊತೆಗೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಹಾಗೂ ಬೆಂಗಳೂರಿನ ಸೆರಗಿನ ಜಿಲ್ಲೆಗಳಾದ ಕೋಲಾರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳ ಲಕ್ಷಾಂತರ ಎಕರೆ ಕೃಷಿ ಭೂಮಿಯನ್ನು ಬಾಚಿಕೊಂಡು ವಿಶ್ವದಲ್ಲೇ ಅತಿ ಹೆಚ್ಚಿನ ಬಂಡವಾಳ ಹೂಡಿಸುತ್ತೇವೆಂದು ಖಾಸಗಿ ಕಾರ್ಪೋರೇಟ್ ಕಂಪನಿಗಳಿಗೆ ಪರಭಾರೆ ಮಾಡಲಾಗುತ್ತಿದೆ. ಏರೋಸ್ಪೇಸ್-ಏರ್ ಕ್ರಾಪ್ಟ್ ತಂತ್ರಜ್ಞಾನ ಪಾರ್ಕ್, ಐಟಿ ಮತ್ತು ಐಟಿಇಎಸ್ ಪಾರ್ಕ್‌ಗಳು, ದೇವನಹಳ್ಳಿ ಬಿಸಿನೆಸ್ ಪಾರ್ಕ್, ಮುದ್ದೇನಹಳ್ಳಿ ಐಐಟಿ, ದೇವನಹಳ್ಳಿ ಬಳಿ ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಟೆಕ್ನಾಲಜಿ, 12 ಸಾವಿರ ಎಕರೆಯಲ್ಲಿ ರಾಷ್ಟ್ರದ ಅತಿ ದೊಡ್ಡ ಮಾಹಿತಿ ತಂತ್ರಜ್ಞಾನ ಪ್ರದೇಶ. ಹೀಗೆ ಬೆಂಗಳೂರು ನಗರದಲ್ಲಿ 1,00,000 ಕೋಟಿಯಷ್ಟು ಬಂಡವಾಳ ಹೂಡಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ಇನ್ನು ವಿಶ್ವ ಬಂಡವಾಳ ಹೂಡಿಕೆಯ 6.5 ಲಕ್ಷ ಕೋಟಿ ಬಂಡವಾಳವೂ ಬೆಂಗಳೂರಿಗೆ ಬರಲಿದೆ ಪ್ರಚಾರಗಳಿವೆ. ಹಾಲಿಯಿದ್ದ ಕೈಗಾರಿಕೆ ಪ್ರದೇಶಗಳಲ್ಲಿ ಸೇವಾ ವಲಯದ ಹೆಸರಿನಲ್ಲಿ ಮಾಲುಗಳೂ, ಮಲ್ಟಿಪ್ಲೆಕ್ಸ್‌ಗಳು ಏಳುತ್ತಿವೆ. ಈ ಎಲ್ಲಾವೂ ಬೆಂಗಳೂರು ಉದ್ಧಾರಕ್ಕಾಗಿ ಎಂದು ರೈತರನ್ನು ಬಲವಂತವಾಗಿ ಒಕ್ಕಲೆಬ್ಬಿಸಲಾಗುತ್ತಿದೆ. ಹೀಗಾಗಿ ಕರ್ನಾಟಕವೆಂದರೆ ಬೆಂಗಳೂರು ಎಂಬಂತಾಗಿದೆ.

ಒಂದು ತುಂಡು 'ಸೈಟು'

ಬಡವರ ಕನಸಿನ 'ಗಂಟು'

ಬಿ.ಡಿ.ಎ. ಸಂಸ್ಥೆಯ 30/40 ಅಡಿ ಅಳತೆಯ ಸೈಟ್‌ಗಳೂ ಕೂಡ ಮಧ್ಯಮ ವರ್ಗದ ಜನರು ಗಿಟ್ಟಿಸಿಕೊಳ್ಳಲು ಆಗದಾಗಿದೆ. ಬಿ.ಡಿ.ಎ. ಸೈಟಿಗಿಂತ ದೊಡ್ಡ ದೊಡ್ಡ ರಿಯಲ್ ಎಸ್ಟೇಟ್ ದಂಧೆಕೋರರ ಸ್ಪರ್ಧೆಗಳಲ್ಲಿರುವ ಅಪಾರ್ಟ್‌ಮೆಂಟ್‌ಗಳಲ್ಲಿನ ಮನೆಗಳನ್ನು ಮಾತ್ರ ಕೊಳ್ಳುವಂತೆ ಮತ್ತು ಅಲ್ಲಿ ಮಾತ್ರ ಅವಕಾಶ ಇರುವಂತೆ ನೋಡಿಕೊಳ್ಳಲಾಗುತ್ತಿದೆ. ಇಲ್ಲಿ ಲಕ್ಷ ಮತ್ತು ಡಾಲರ್‌ಗಳ ಲೆಕ್ಕಚಾರ ಮಾತ್ರ ನಡೆಯುತ್ತಿದೆ.

ಶಿಕ್ಷಣ ವ್ಯಾಪಾರದಲ್ಲಿ ಬೆಂಗಳೂರು ವಿಶ್ವದಲ್ಲೇ ಕುಖ್ಯಾತಿಯನ್ನು ಪಡೆದಿದೆ. ಖಾಸಗಿ ಶಿಕ್ಷಣ ಉದ್ಯಮಿಗಳೇ ಶಿಕ್ಷಣದ ನೀತಿ ನಿರೂಪಕ ಅಂಗಗಳನ್ನು ನಿಯಂತ್ರಿಸುತ್ತಾರೆ. ಅದೇ ರೀತಿಯಲ್ಲಿ ಯೋಗದ ಹೆಸರಿನಲ್ಲಿ ಅಂತರಾಷ್ಟ್ರೀಯ ಕೇಂದ್ರಗಳು ಮತ್ತು ಅಂತರಾಷ್ಟ್ರೀಯ ದೈವೋದ್ಯಮಿಗಳ ಮಾರ್ಗದರ್ಶನದಲ್ಲಿ ದೇವೋತ್ಸವಗಳು.

ಇಂತಹ ಮಹಾ ಬೆಳವಣಿಗೆಯನ್ನು ಕಾಣುತ್ತಿರುವ ಮಾಯಾ ನಗರಿ ಬೆಂಗಳೂರು ನಮ್ಮ ಸಾಮಾನ್ಯ ಯುವಜನರನ್ನು ಎಂತಹ ಸ್ಥಿತಿಗೆ ತಂದಿಟ್ಟಿದೆ ಎಂಬುದನ್ನು ನೋಡಬೇಕಿದೆ.

ತಮ್ಮ ಬಡಾವಣೆಯಲ್ಲಿ ಆಟದ ಮೈದಾನವಿಲ್ಲ. ಸರ್ಕಾರಿ ಶಾಲಾ ಕಾಲೇಜುಗಳಿಲ್ಲ. ಇದ್ದರೂ ಮೂಲಭೂತ ಸೌಲಭ್ಯಗಳಿಲ್ಲ. ನಿವೇಶನದ ಕೊರತೆ ಇದೆ. ಅತ್ಯಂತ ಕಿಷ್ಕಿಂದೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಯುವಕ ಮತ್ತು ಯುವತಿಯರ ಮದುವೆಯಾಗಿರುತ್ತಾರೆ. ಆದರೆ ಆ ಒಂದೇ ಮನೆಯಲ್ಲಿ ಎರಡು ಮೂರು ಸಂಸಾರಗಳು ವಾಸಿಸುವ ಪರಿಸ್ಥಿತಿ ಇದೆ.

ಇಕ್ಕಟ್ಟಿನ ರಸ್ತೆಗಳು. ಒಳ ಚರಂಡಿಯ ಅವ್ಯವಸ್ಥೆ. ರೇಶನ್ ಕಾರ್ಡ್, ವಿಧವಾ ವೇತನ ಮತ್ತು ವೃದ್ಧಾಪ್ಯ ವೇತನ ಹೀಗೆ ಬಡವರಿಗೆ ಸಿಗಲು ನೂರೆಂಟು ಅಡೆ ತಡೆಗಳಿವೆ. ಯುವಜನತೆಗೆ ಸರ್ಕಾರದಿಂದ ಇರುವ ಸೌಲಭ್ಯಗಳ ಬಗ್ಗೆ ಅವರಿಗೆ ಅರಿವೇ ಇಲ್ಲ.

ಬದುಕು....ಬಲು ದುಬಾರಿ

ಇನ್ನು ದಿನೇ ದಿನೇ ಏರುತ್ತಿರುವ ಆಹಾರ ಧಾನ್ಯಗಳ ಬೆಲೆ ಏರಿಕೆ. ಪೆಟ್ರೋಲ್ - ಡೀಸೆಲ್ ದರ ಏರಿಕೆ, ಕುಡಿಯುವ ನೀರಿನ ಖಾಸಗೀಕರಣ. ವಿದ್ಯುತ್ ಅಭಾವ ಮತ್ತು ದರ ಏರಿಕೆ. ಪ್ರಯಾಣ ದರ ಏರಿಕೆ. ದುಬಾರಿ ಆಸ್ಪತ್ರೆ ಖರ್ಚುಗಳು ಮತ್ತು ಶಿಕ್ಷಣ ವ್ಯಾಪಾರ, ವ್ಯಾಪಕ ಭ್ರಷ್ಟಾಚಾರ ಇತ್ಯಾದಿ ಹೀಗೆ ಬದುಕಿನ ನೂರೆಂಟು ಜಂಜಡಗಳು. ಸಮಸ್ಯೆಗಳು ಅವುಗಳ ಕಾರಣಗಳ ಕುರಿತು ಯೋಚಿಸಲು ಸಾಧ್ಯವಾಗಲಾರದ ಸಾಮಾಜಿಕ ಪರಿಸರ. ಟಿವಿ ಪತ್ರಿಕೆಗಳಲ್ಲಿ ಯುವಜನರಿಗೆ 'ಮನರಂಜನೆ'ಯ ಮಹಾಪೂರ. ಅಲ್ಲಿ ರಾಜಕೀಯ ಸುದ್ದಿಗೂ ಮನರಂಜನೆಯ ರೂಪ. ಜ್ಯೋತಿಷ್ಯ, ಭವಿಷ್ಯ...ಹೀಗೂ ಉಂಟೆ...ಕ್ರೈಂ ಡೈರಿ, ಸತ್ಯ ಕತೆಗಳ... ಗಳ ನಿತ್ಯ ಕಾಟ.

ಇನ್ನು ಶಿಕ್ಷಣದ ಪರಿಸ್ಥಿತಿಗೆ ಬಂದರೆ ಮಧ್ಯಮ ವರ್ಗದ ಮೇಲ್ ಮಧ್ಯಮ ವರ್ಗದ ಯುವಜನ ಮಾತ್ರ ಉದ್ಯೋಗಾಧಾರಿತ ಶಿಕ್ಷಣವನ್ನು 'ಉತ್ತಮ ಮತ್ತು ಗುಣ ಮಟ್ಟ'ದ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿದೆ. ಇನ್ನುಳಿದಂತೆ ಬಡ ಯುವಜನರು ಕಾರ್ಪೋರೇಶನ್ ಮತ್ತು ಸರ್ಕಾರಿ ಶಾಲಾ-ಕಾಲೇಜುಗಳು ಹಾಗೂ ಸಾಧಾರಣ ಖಾಸಗಿ

ಪುಟ 10 ಕ್ಕೆ

ಹೋಂ ಸ್ಟೇ ದಾಳಿ: ಎರಡು ಪ್ರತಿಭಟನೆಗಳು

ಕಡಲತಡಿ

ವರದಿ : ವಾ.ಉ.

ಸಂಘ ಪರಿವಾರಕ್ಕೆ ಸೇರಿದ 'ಹಿಂದೂ ಜಾಗರಣ ವೇದಿಕೆ'ಯ ಗೂಂಡಾಗಳು ಕಳೆದ ಜುಲಾಯಿ28,2012 ರಂದು ಮಂಗಳೂರಿನ ಹೋಂ ಸ್ಟೇಯಲ್ಲಿ ಜನ್ಮ ದಿನದ ಪಾರ್ಟಿಯೊಂದರ ಮೇಲೆ ದಾಳಿ ಮಾಡಿ, ಯುವತಿಯರನ್ನೊಳಗೊಂಡು ಯುವಜನರ ಮೇಲೆ ಹಲ್ಲೆ, ಯುವತಿಯರಿಗೆ ಅವಮಾನಕಾರಿ ಕಿರುಕುಳ ನೀಡಿದುದರ ವಿರುದ್ಧವಾಗಿ ರಾಜ್ಯದಾದ್ಯಂತ ವಿವಿಧ ಪ್ರಜ್ಞಾವಂತ ಗುಂಪುಗಳು ಪ್ರತಿಭಟನೆಯನ್ನು ನಡೆಸಿವೆ. ಮಂಗಳೂರಿನಲ್ಲಿ ಕೆಲವು ಪ್ರತಿಭಟನೆಗಳು ಈಗಾಗಲೇ ನಡೆದಿದ್ದು, ಇತ್ತೀಚೆಗಿನ 2 ಪ್ರತಿಭಟನೆಗಳಲ್ಲಿ ಮೊದಲನೆಯದು ವಿದ್ಯಾರ್ಥಿಗಳ ಹಾಗೂ ಯುವಜನರ ಹಲವು ಸಂಘಟನೆಗಳು ಒಟ್ಟಾಗಿ ನಡೆಸಿದ್ದು. ಎರಡನೆಯದ್ದು ಜಾತ್ಯಾತೀತ ರಾಜಕೀಯ ಪಕ್ಷಗಳು ಹಾಗೂ ವಿಚಾರವಂತ ನಾಗರಿಕರ ಸಂಯುಕ್ತ ವೇದಿಕೆ ನಡೆಸಿದ್ದು.

ಸಮಾನ ಮನಸ್ಕ ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳಿಂದ ಪ್ರತಿಭಟನೆ

ಎಸ್ಎಫ್ಐ, ಡಿವೈಎಫ್ಐ, ಎನ್ಎಸ್ಯುಐ, ಯುವ ಕಾಂಗ್ರೆಸ್, ಎಐಎಸ್ಎಫ್, ಎಐವೈಎಫ್, ಯುವ ಜನತಾದಳಗಳು ಒಟ್ಟಾಗಿ ಸಪ್ಟೆಂಬರ್ 1 2012 ರಂದು ಮಂಗಳೂರಿನ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದವು.

ಮಂಗಳೂರಿನ ಜ್ಯೋತಿ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಅದಕ್ಕೂ ಮೊದಲು ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಸುಮಾರು ಏಳುನೂರು ಮಂದಿ ವಿದ್ಯಾರ್ಥಿಗಳು ಹಾಗೂ ಯುವಜನರು ಭಾಗವಹಿಸಿದ್ದ ಈ ಪ್ರತಿಭಟನೆಯಲ್ಲಿ ಎಸ್ಎಫ್ಐ ಹಾಗೂ ಡಿವೈಎಫ್ಐ ನಂದ ಹೆಚ್ಚು ಮಂದಿ ವಿದ್ಯಾರ್ಥಿ ಯುವಜನರು ಭಾಗವಹಿಸಿದ್ದರು.

ಡಿವೈಎಫ್ಐನಿಂದ ಮುನೀರ್ ಕಾಟಿಪಳ್ಳ, ಯುವ ಕಾಂಗ್ರೆಸಿನ ಮಿಥುನ್ ರೈ, ಯುವ ಜನತಾದಳದ ಯೋಗೀಶ್ ಶೆಟ್ಟಿ ಮತ್ತು ಎಐವೈಎಫ್‌ನ ಸತೀಶ್ ಕುಮಾರ್ ಬಂಟ್ವಾಳ ಮಾತನಾಡಿದರು.

ಎಸ್ಎಫ್ಐನ ನಿತಿನ್ ಕುತ್ತಾರ್, ರಜಾಕ್ ಮೊಂಟೆಪದವು, ಡಿವೈಎಫ್ಐನ ದಯಾನಂದ ಶೆಟ್ಟಿ, ಬಿ.ಕೆ.ಇಮ್ತಿಯಾಜ್, ಸಂತೋಷ್ ಕುಮಾರ್ ಬಜಾಲ್ ಮೊದಲಾದವರು ನೇತೃತ್ವ ವಹಿಸಿದ್ದರು.



ಕರಾವಳಿ ಸೌಹಾರ್ದ ಸಂಘರ್ಷ ಸಮಿತಿಯಿಂದ ಪ್ರತಿಭಟನೆ:

ಸಿಪಿಐ, ಸಿಪಿಐ(ಎಂ), ಕಾಂಗ್ರೆಸ್ ಮತ್ತು ಜನತಾದಳ(ಎಸ್) ಪಕ್ಷಗಳು ಗಣ್ಯ ನಾಗರಿಕರ ಭಾಗವಹಿಸುವಿಕೆಯೊಂದಿಗೆ ಹೋಮ್ ಸ್ಟೇ ದಾಳಿ ಪ್ರಕರಣದ ಹಿನ್ನೆಲೆಯಲ್ಲಿ "ಸೌಹಾರ್ದಕ್ಕಾಗಿ ಸಂಘರ್ಷ" ಎಂಬ ಘೋಷಣೆಯನ್ನು ಮುಂದಿಟ್ಟು "ಕರಾವಳಿ ಸೌಹಾರ್ದ ಸಂಘರ್ಷ ಸಮಿತಿ" ಎಂಬ ವೇದಿಕೆಯನ್ನು ರಚಿಸಿಕೊಂಡಿದೆ. ಈ ಎಲ್ಲ ಪಕ್ಷಗಳು ಸದ್ರಿ ಪ್ರಕರಣದ ಹಿನ್ನೆಲೆಯಲ್ಲಿ ಪ್ರತ್ಯ-ಪ್ರತ್ಯೇಕವಾಗಿಯೇ ಪ್ರತಿಭಟನಾ ಕಾರ್ಯಕ್ರಮಗಳನ್ನು ಆಯೋಜಿಸಿದ್ದರೂ, ವಿಚಾರವಂತ ಗಣ್ಯ ನಾಗರಿಕರನ್ನು ಒಳಗೊಂಡು ಸಂಯುಕ್ತವಾಗಿ ಬಲವಾದ ಪ್ರತಿಭಟನೆಯೊಂದನ್ನು ಸಂಘಟಿಸಬೇಕು ಎಂದು ಸಭೆ ಸೇರಿ ಚರ್ಚಿಸಿದವು. ಅದರಂತೆ ರಚಿತವಾದ ಈ ಸಮಿತಿಯಲ್ಲಿ ನಾಲ್ಕು ಜಾತ್ಯಾತೀತ ಪಕ್ಷಗಳ ಪ್ರತಿನಿಧಿಗಳಲ್ಲದೆ ಗಣ್ಯ ನಾಗರಿಕರೂ ಒಳಗೊಂಡಿದ್ದಾರೆ.

ಸಪ್ಟೆಂಬರ್ 4 ರಂದು ಮಂಗಳೂರಿನ ಜಿಲ್ಲಾಧಿಕಾರಿ ಕಚೇರಿಯ ಎದುರು ಪ್ರತಿಭಟನಾ ಸಭೆ ನಡೆಯಿತು. ಅದಕ್ಕೂ ಮೊದಲು ನಗರದ ಜ್ಯೋತಿ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಸಾವಿರಕ್ಕೂ ಮೀರಿ ಸಾರ್ವಜನಿಕರು ಭಾಗವಹಿಸಿದ್ದರು.

ಸೌಹಾರ್ದ ಸಂಘರ್ಷ ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿಪಿಐ(ಎಂ) ನ ದ.ಕ.ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ ಮಾತನಾಡಿ, "ಸಂಘ ಪರಿವಾರ ನಡೆಸುತ್ತಿರುವ ದೌರ್ಜನ್ಯದ ಬಗ್ಗೆ ಕರಾವಳಿಯ ಜನರಲ್ಲಿ ಆಕ್ರೋಶ ಮಡುಗಟ್ಟಿದೆ. ಹೋಂ ಸ್ಟೇ ದಾಳಿ ವಿರುದ್ಧ ರಾಜ್ಯಾದ್ಯಂತ ಆಕ್ರೋಶ ವ್ಯಕ್ತವಾಗುತ್ತಿರುವುದರ ಮಧ್ಯೆಯೇ, ಸಂಘ ಪರಿವಾರಕ್ಕೆ ಸೇರಿದ ವಿದ್ಯಾರ್ಥಿ ಪರಿಷತ್ತಿನ ಪುಂಡರು ಬೆಂಗಳೂರಿನಿಂದ ಮಂಗಳೂರಿಗೆ ರೈಲಿನಲ್ಲಿ ಬರುತ್ತಿದ್ದ ಉತ್ತರ ಭಾರತದ ಬಡ ಕಾರ್ಮಿಕರನ್ನು ಮಂಡ್ಯದಲ್ಲಿ ಇಳಿಸಿ ಸಿಕ್ಕಾಪಟ್ಟೆ ಹಲ್ಲೆ ನಡೆಸಿದ್ದಾರೆ. ಶಾಂತಿ ಪ್ರಿಯರು ಸುಮ್ಮನಿರಲು ಸಾಧ್ಯವಿಲ್ಲ" ಎಂದರು.



"ಗುಜರಾತ್ ಹಿಂಸಾಕಾಂಡದ ಇಬ್ಬರು ಪ್ರಮುಖರಿಗೆ ಇದೀಗ ಜೀವಾವಧಿ ಶಿಕ್ಷೆಯಾಗಿದೆ. ಪ್ರಜಾಪ್ರಭುತ್ವದ ಮೇಲೆ ಫ್ಯಾಸಿಸ್ಟರ ದಾಳಿಯನ್ನು ನ್ಯಾಯಾಂಗ ತಡೆಯುತ್ತಿದೆ ಎಂಬ ವಿಶ್ವಾಸ ಮೂಡಿದೆ. ಹೋಂ ಸ್ಟೇ ದಾಳಿಕೋರರ ಮೇಲೂ ಗೂಂಡಾ ಕಾಯಿದೆಯನ್ವಯ ಕ್ರಮ ಕೈಗೊಳ್ಳಬೇಕು" ಎಂದು ಬಿ.ಮಾಧವ ಆಗ್ರಹಿಸಿದರು.

ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾಜಿ ಸಚಿವರು-ಹಾಲಿ ಶಾಸಕರೂ ಆದ ರಮಾನಾಥ ರೈ, ಮಾಜಿ ಸಚಿವರಾದ ಅಮರನಾಥ ಶೆಟ್ಟಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಪಿ.ಸಂಜೀವ, ಸಾಹಿತಿ ಚಂದ್ರಕಲಾ ನಂದಾವರ ಮಾತನಾಡಿದರು. ಹಿರಿಯ ಸಾಹಿತಿ ಸಾರಾ ಅಬುಬಾಕರ್, ಸಿಪಿಐ(ಎಂ)ನ ಹಿರಿಯ ಮುಖಂಡ ಕೆ.ಆರ್.ಶ್ರೀಯಾನ್ ಮತ್ತಿತರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಮಿತಿಯ ಖಜಾಂಚಿ ಕೆ.ಯಾದವ ಶೆಟ್ಟಿ ಸ್ವಾಗತಿಸಿದರು.

ಜಾತ್ಯಾತೀತ ಶಕ್ತಿಗಳ ಈ ಸಂಯುಕ್ತ ಪ್ರತಿಭಟನೆ ಇತ್ತೀಚೆಗಿನ ದಿನಗಳಲ್ಲಿ ಒಂದು ಮುಖ್ಯವಾದ ಕಾರ್ಯಕ್ರಮವಾಗಿ ಮೂಡಿ ಬಂದಿದ್ದು, ಮಾಧ್ಯಮಗಳು ಕೂಡಾ ಹೆಚ್ಚಿನ ಪ್ರಚಾರ ನೀಡಿವೆ.

ಜೀವ ವಿಮಾ ಮಹಿಳಾ ಪ್ರತಿನಿಧಿಗಳ ರಾಜ್ಯ ಮಟ್ಟದ ಸಮಾವೇಶ

ಭಾರತೀಯ ಜೀವ ವಿಮಾ ಮಹಿಳಾ ಪ್ರತಿನಿಧಿಗಳ ರಾಜ್ಯ ಮಟ್ಟದ ಪ್ರಥಮ ಸಮಾವೇಶ ಸಪ್ಟೆಂಬರ್ 3 ರಂದು ಮಂಗಳೂರಿನ ಪುರಭವನದಲ್ಲಿ ನಡೆಯಿತು. ಅಖಿಲ ಭಾರತ ವಿಮಾ ನೌಕರರ ಸಂಘಟನೆಯ ರಾಜ್ಯ ಸಮಿತಿ ಉಪಾಧ್ಯಕ್ಷರಾದ ಎಸ್.ಕೆ.ಗೀತಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.



ದೇಶದ ಜನತೆಗೆ ವಿಮೆಯ ಭದ್ರತೆಯನ್ನು ಒದಗಿಸುವ ಜೀವ ವಿಮಾ ಪ್ರತಿನಿಧಿಗಳಿಗೆ ಇಂದು ಭದ್ರತೆಯ ಅಗತ್ಯವಿದ್ದು, ಈ ಕ್ಷೇತ್ರದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಮಹಿಳೆಯರು ಸಂಘಟಿತರಾಗಿ ಹೋರಾಟ ನಡೆಸುವ ಅನಿವಾರ್ಯತೆ ಇದೆ. ಜಾಗತೀಕರಣ, ಉದಾರೀಕರಣದ ಭರದಲ್ಲಿ ಕಾನೂನು ಕೂಡಾ ಮಹಿಳೆಗೆ ನೈಜ ಸಮಾನತೆಯನ್ನು ಒದಗಿಸುವಲ್ಲಿ ಸೋತಿದ್ದು, ದೋಷ ಪೂರಿತ ವ್ಯವಸ್ಥೆಯ ವಿರುದ್ಧ ಮಹಿಳೆ ಧ್ವನಿ ಎತ್ತಬೇಕಾದ ಅಗತ್ಯವಿದೆ ಎಂದು ಅವರು ಕರೆ ನೀಡಿದರು.

ದೇಶದ ಆರ್ಥಿಕತೆಗೆ ಬೆನ್ನೆಲುಬಾಗಿರುವ ಭಾರತೀಯ ಜೀವ ವಿಮಾ ನಿಗಮವನ್ನು ಅಭಿವೃದ್ಧಿಯ ಹೆಸರಿನಲ್ಲಿ ಸರಕಾರ ಖಾಸಗೀಕರಣಗೊಳಿಸಲು ಪ್ರಯತ್ನಿಸುತ್ತಿರುವುದು ದುರಂತ ಎಂದು ಅವರು ನುಡಿದರು.

ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಬಿ.ಮಾಧವ ಅವರು, ಎಲ್ಐಸಿ ಏಜಂಟ್ಸ್ ಆರ್ಗನೈಸೇಶನ್ ಆಫ್ ಇಂಡಿಯಾ (ಲಿಕಾಯ್) ಸಂಘಟನೆಯನ್ನು ಸಿಐಟಿಯು ಸಂಘಟಿಸಿದ್ದು, ಅದರ ಧೋರಣೆಗನುಸಾರವಾಗಿ ಇದೀಗ ಮಹಿಳಾ ಪ್ರತಿನಿಧಿಗಳನ್ನು ಕೂಡಾ ಸಂಘಟಿಸಲಾಗುತ್ತಿದೆ ಎಂದು ನುಡಿದರು.

ಉಡುಪಿ ವಿಮಾ ನೌಕರರ ಮುಂದಾಳು ಯು.ಗುರುದತ್, ಲಿಕಾಯ್ ಅಖಿಲ ಭಾರತ ಉಪಾಧ್ಯಕ್ಷ ಜೋಸೆಫ್, ದಕ್ಷಿಣ ವಲಯ ಕಾರ್ಯದರ್ಶಿ ಎಲ್.ಮಂಜುನಾಥ್, ರಾಜ್ಯ ಸಮಿತಿ ಕಾರ್ಯಾಧ್ಯಕ್ಷ ಎಫ್.ಎಸ್.ಸಿಂದಗಿ ಮೊದಲಾದವರು ಸಮಾವೇಶದ ಉದ್ಘಾಟನಾ



ಸಮಾರಂಭದಲ್ಲಿ ಅತಿಥಿಗಳಾಗಿ ಮಾತನಾಡಿದರು. ಲಿಕಾಯ್ ರಾಜ್ಯ ಉಪಾಧ್ಯಕ್ಷೆ ಎ.ಪ್ರತಿಭಾ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಮಾವೇಶದ ಸ್ವಾಗತ ಸಮಿತಿ ಗೌರವಾಧ್ಯಕ್ಷೆ ಮಂಗಳೂರು ಮನಪಾ ಸಿಪಿಐ(ಎಂ) ಕಾರ್ಪರೇಟರ್ ಜಯಂತಿ ಬಿ.ಶೆಟ್ಟಿ ಸ್ವಾಗತಿಸಿದರು. ಲಿಕಾಯ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಮೇಶ್ ಕುಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಸಮಾವೇಶದ ಪ್ರತಿನಿಧಿ ಅಧಿವೇಶನದಲ್ಲಿ ಮಹಿಳಾ ವಿಮಾ ಪ್ರತಿನಿಧಿಗಳ ಬೇಡಿಕೆಗಳನ್ನು ರೂಪಿಸಿ ನಿರ್ಣಯ ಕೈಗೊಳ್ಳಲಾಯಿತು. ಹಾಗೂ ರಾಜ್ಯ ಮಟ್ಟದ ಮಹಿಳಾ ವಿಮಾ ಪ್ರತಿನಿಧಿಗಳ ಒಂದು ಸಮಿತಿಯನ್ನು ರಚಿಸಲಾಯಿತು.

ನಾಲ್ಕು ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ■

ಜನಶಕ್ತಿ
ಕನ್ನಡ ವಾರಪತ್ರಿಕೆ

ಶೋಮ್ ಸಮಿತಿ ಶಿಫಾರಸುಗಳು:

ವಿದೇಶಿ ಸಟ್ಟಾಕೋರರನ್ನು ಒಲೈಸುವ, ಅಸಹ್ಯ ಪ್ರಯತ್ನ

ವಿದೇಶಿ ಹೂಡಿಕೆದಾರರು ತೆರಿಗೆ ತಪ್ಪಿಸುವುದನ್ನು ತಪ್ಪಿಸಲು ಜಿಎಎಆರ್ ನಿಯಮವನ್ನು ತರುವ ಆಶಯ ತನಗಿದೆ ಎಂದು ಹಿಂದಿನ ಹಣಕಾಸು ಮಂತ್ರಿಗಳು ಸಾರಿದ್ದರು. ಅದರ ವಿರುದ್ಧ ಬಹುರಾಷ್ಟ್ರೀಯ ಕಂಪನಿಗಳು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಎಬ್ಬಿಸಿದ ಹುಯಿಲಿಗೆ ಹೆದರಿಕೊಂಡು, ಅವರ ನಿರ್ಗಮನದ ನಂತರ, ಪ್ರಧಾನಿಗಳು ನೇಮಿಸಿದ ಶೋಮ್ ಸಮಿತಿಯಿಂದ ಪಡೆದುಕೊಂಡಿರುವ ಶಿಫಾರಸುಗಳು ಮನಮೋಹನ ಸಿಂಗ್ ಸರಕಾರದ ಯೋಚನಾ ವೈಖರಿ ಎಷ್ಟು ಅಸಂಬದ್ಧವಾಗಿದೆ ಎಂಬುದನ್ನು ತೋರಿಸುತ್ತಿವೆ. ಒಬ್ಬ ಪಕ್ಕಾ ಬೂರ್ಜ್ವಾ ಸಿದ್ಧಾಂತಿಗೂ ವಿಲಕ್ಷಣವಾಗಿ ಕಾಣುವ ಪರಿಸ್ಥಿತಿಯಿದು. ಆದರೆ ವಿದೇಶಿ ಸಟ್ಟಾಕೋರರನ್ನು ತುಷ್ಟೀಕರಿಸುವ ಇಂತಹ ವಿಕಟ, ಅಸಹ್ಯ ಪ್ರಯತ್ನಗಳ ಈ ಕಥೆ ಇಲ್ಲಿಗೇ ಕೊನೆಗೊಳ್ಳುವಂತೆ ಕಾಣುತ್ತಿಲ್ಲ.


ಸೀತಾರಾಂ ಯೆಚೂರಿ

2012-13ರ ಬಜೆಟನ್ನು ಮಂಡಿಸುತ್ತ ಆಗಿನ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿಯವರು 'ತೆರಿಗೆ ತಪ್ಪಿಸುವ ಆಕ್ರಮಣಕಾರಿ ಸ್ಕೀಮು'ಗಳನ್ನು ಎದುರಿಸಲು ಒಂದು 'ಸಾರ್ವತ್ರಿಕ ತೆರಿಗೆ ತಪ್ಪಿಸುವಿಕೆ-ವಿರೋಧಿ ನಿಯಮ' (ಜಿಎಎಆರ್)ವನ್ನು ತರುವ ಆಶಯ ತನಗಿದೆ ಎಂದು ಸಾರಿದ್ದರು. ಏನಿದು ಜಿಎಎಆರ್? ಇದರ ಅರ್ಥ, ಒಂದು ವ್ಯವಹಾರ ಕಾನೂನು ಪ್ರಕಾರ ಊರ್ಜಿತವಾಗಿ ಕಂಡು ಬಂದರೂ, ಅದನ್ನು ಕೇವಲ ತೆರಿಗೆ ತಪ್ಪಿಸುವುದಕ್ಕಾಗಿಯೇ ನಡೆಸಲಾಗಿದ್ದರೆ, ಆಗ ಭಾರತದ ತೆರಿಗೆ ಅಧಿಕಾರಿಗಳು ಸಂಬಂಧಪಟ್ಟ ಸಂಸ್ಥೆಗೆ ತೆರಿಗೆ ವಿನಾಯತಿ ಸೌಲಭ್ಯವನ್ನು ನಿರಾಕರಿಸಬಹುದು. ದೇಶ ಅಪಾರ ಪ್ರಮಾಣದಲ್ಲಿ ತೆರಿಗೆ ಆದಾಯವನ್ನು ಕಳಕೊಳ್ಳುತ್ತಿದೆ ಯಾದ್ದರಿಂದಷ್ಟೇ ಈ ಜಿಎಎಆರ್ ಅಗತ್ಯವಾಗಿತ್ತು ಎಂದೇನಲ್ಲ: ಬಹುರಾಷ್ಟ್ರೀಯ ಕಂಪನಿಗಳು ಈ ದೇಶದ ತೆರಿಗೆ ಆಡಳಿತವನ್ನು ರಾಜಾರೋಷವಾಗಿ ಉಪೇಕ್ಷಿಸಬಹುದು ಎಂಬುದು ಸಾಮಾನ್ಯವಾಗಿ 'ಬಾಳೆಹಣ್ಣು ಗಣತಂತ್ರಗಳು" ಎಂಬ ಲೇವಡಿಗೊಳಗಾಗಿರುವ ದೇಶಗಳಿಗಷ್ಟೇ ಅಂಟಿದ್ದ ಕುಖ್ಯಾತಿಯಾಗಿತ್ತು. ಅಂತಹ ಕುಖ್ಯಾತಿ ಭಾರತಕ್ಕೆ ಅಂಟಿಕೊಳ್ಳುವುದನ್ನು ನಿವಾರಿಸಲು ಕೂಡ ಇದು ಅಗತ್ಯವಾಗಿತ್ತು. ಭಾರತಕ್ಕೆ ಹರಿದು ಬರುವ ಬಹುಪಾಲು ವಿದೇಶಿ ಬಂಡವಾಳ ಮಾರಿಶಸ್ ಮೂಲಕವೇ ಬರುತ್ತಿದೆ. ಅದು 'ತೆರಿಗೆಗಳ ಮುಕ್ತಿಧಾಮ' ಎನಿಸಿಕೊಂಡ ಒಂದು ಸ್ಥಳ, ಅಲ್ಲದೆ ಅದರೊಂದಿಗೆ ಭಾರತ ಒಂದು 'ದುಪ್ಪಟ್ಟು ತೆರಿಗೆ ತಪ್ಪಿಸುವಿಕೆಯ ಒಪ್ಪಂದ'ವನ್ನು ಮಾಡಿಕೊಂಡಿದೆ. ಅದರ ಪ್ರಕಾರ ವಾಸ ಇರುವ ದೇಶದಲ್ಲಿ ಮಾತ್ರ ತೆರಿಗೆ ತೆರಬೇಕು, ಕಾರ್ಯಾಚರಣೆ ನಡೆಸುವ ದೇಶದಲ್ಲಿ ತೆರಬೇಕಾಗಿಲ್ಲ, ಅಂದರೆ ಮಾರಿಶಸ್‌ನ ಮೂಲಕ ಬರುವ ವಿದೇಶಿ ನೇರ ಹೂಡಿಕೆ(ಎಫ್‌ಡಿಐ) ಗಳಿಗೆ ಅಥವ ವಿದೇಶಿ ಸಾಂಸ್ಥಿಕ ಹೂಡಿಕೆ (ಎಫ್‌ಐಐ)ಗಳಿಗೆ ಭಾರತದಲ್ಲಿ ಸಿಗುವ ಪ್ರತಿಫಲಗಳ ಮೇಲೆ ಭಾರತದಲ್ಲಿ ತೆರಿಗೆ ತೆರಬೇಕಾಗಿಲ್ಲ!

ಭಾರತೀಯ ಸುಪ್ರಿಂ ಕೋರ್ಟ್ ಕೂಡ ಇಂತಹ ದುಷ್ಕೃತ್ಯದ ಬಗ್ಗೆ ಮೆದು ಧೋರಣೆ ತೋರಿದೆ. 2003ರಲ್ಲಿ ಈ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರ ಪೀಠ, ಈ ಮಾರಿಶಸ್ ಮಾರ್ಗದ ಅಂಗೀಕಾರ 'ತೆರಿಗೆ ಯೋಜನೆ'ಯ ಒಂದು ಕಾನೂನುಬದ್ಧ ಕ್ರಮ ಎಂದು ಹೇಳಿತ್ತು! ಇತ್ತೀಚೆಗೆ, ಹೆಚ್‌ಟಿಐಎಲ್ ಭಾರತದ ಒಂದು ಕಂಪನಿಯ (ಹಚ್‌ಎಸ್ಸಾರ್ ಲಿ.) ಶೇ 67 ರಷ್ಟು ಶೇರುಗಳನ್ನು ವೊಡಾಫೋನ್‌ಗೆ ಮಾರಾಟ ಮಾಡಿದಾಗ ಮತ್ತು ಭಾರತದ ತೆರಿಗೆ ಅಧಿಕಾರಿಗಳು ಮಾರಾಟದ ಮೇಲೆ ಬಂಡವಾಳ ಗಳಿಕೆ ತೆರಿಗೆಯನ್ನು ತೆರಬೇಕು(ಅದು ಅದನ್ನು ಹೆಚ್‌ಟಿಐಎಲ್‌ಗೆ ವರ್ಗಾಯಿಸಬಹುದು) ಎಂದು ಕೇಳಿದಾಗ ವೊಡಾಫೋನ್, ತಾನು ತೆರಿಗೆ ತೆರಬೇಕಾಗಿಲ್ಲ, ಏಕೆಂದರೆ ಆ ಶೇರುಗಳನ್ನು ಕೇಮನ್ ದ್ವೀಪದಲ್ಲಿನ ಒಂದು ಕಂಪನಿಯಿಂದ ಖರೀದಿಸಿದ್ದೇನೆ ಎಂದು ವಾದ ಹೂಡಿತು. ಸುಪ್ರಿಂ ಕೋರ್ಟ್ ಅದರ ವಾದವನ್ನು ಎತ್ತಿ ಹಿಡಿಯಿತು.

'ಸ್ಲಾಟ್ ಮೆಶಿನ್' ಸಮಿತಿ

ನಿರೀಕ್ಷಿಸಿದಂತೆ, ಮುಖರ್ಜಿಯವರ ಭಾಷಣದ ವಿರುದ್ಧ ಬಹುರಾಷ್ಟ್ರೀಯ ಕಂಪನಿಗಳು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು



ಹುಯಿಲೆಬ್ಬಿಸಿದರು. ಅದು ಎಷ್ಟಿತ್ತೆಂದರೆ, ಸ್ವತಃ ಮುಖರ್ಜಿಯವರೇ ಹೆದರಿಕೊಂಡು, ಜಿಎಎಆರ್ ಎಪ್ರಿಲ್ 1, 2013 ರಿಂದಷ್ಟೇ ಜಾರಿಗೆ ಬರುತ್ತದೆ ಎಂದು ಪ್ರಕಟಿಸಿದರು. ಅವರು ಹೊರಟು ಹೋದ ನಂತರ, ಹೊಸ ಹಣಕಾಸು ಮಂತ್ರಿ ಚಿದಂಬರಂ ಈ ಪ್ರಸ್ತಾವವನ್ನು ತಡೆ ಹಿಡಿದರು. ಅತ್ತ ಪ್ರಧಾನ ಮಂತ್ರಿ ಮನಮೋಹನ ಸಿಂಗ್ ಇನ್ನೊಂದು 'ಸ್ಲಾಟ್ ಮೆಶಿನ್' ಸಮಿತಿ (ಅಂದರೆ ತಮಗೆ ಬೇಕಾದ ವರದಿಯನ್ನು ಕೊಡುವ ಸಮಿತಿ)ಯನ್ನು ಜಿಎಎಆರ್ ಆರಂಭಿಸುವ ಕುರಿತು ಪರಿಶೀಲಿಸಲೆಂದು ನೇಮಿಸಿದರು. ಪಾರ್ಥಸಾರಥಿ ಶೋಮ್, ಒಬ್ಬ ಮಾಜಿ ಐಎಂಎಫ್ ನೌಕರ, ಇದರ ಅಧ್ಯಕ್ಷರು. ಇವರು ಸದ್ಯಕ್ಕೆ ದೇಶದ ಅತ್ಯಂತ ಪ್ರತ್ಯಕ್ಷ ನವ-ಉದಾರವಾದಿ ಸಂಸ್ಥೆಯಾದ ಐಸಿಆರ್‌ಐಇಆರ್‌ನ ನಿರ್ದೇಶಕರು.

ಶೋಮ್ ಸಮಿತಿ ಒಂದು ನಿರೀಕ್ಷಿತ ವರದಿಯನ್ನು ತಯಾರಿಸಿದ್ದು, ಅದನ್ನು ವಾಲ್ ಸ್ಟ್ರೀಟ್ ಜರ್ನಲ್ ಮತ್ತು ಇತರ ಹಣಕಾಸು ಬಂಡವಾಳದ ತುತ್ತೂರಿಗಳು ಹಾಡಿ ಹೊಗಳಿವೆ.

ಇದು ಜಿಎಎಆರ್ ಅನ್ನು, ಮುಖರ್ಜಿಯವರು ವಿಧಿಸಿದ್ದ ಗಡುವುಗಿಂತಲೂ ಮೂರು ವರ್ಷಗಳ ಆಚೆಯವರೆಗೆ, ಅಂದರೆ ಎಪ್ರಿಲ್ 1, 2016 ರ ವರೆಗೆ ಅಮಾನತ್ತಿನಲ್ಲಿಡಬೇಕು ಎಂದು ಶಿಫಾರಸು ಮಾಡಿದೆ. ಇದಕ್ಕೆ ಕೊಟ್ಟಿರುವ ನೆಪವೆಂದರೆ, ಇದನ್ನು 'ಬುದ್ಧಿವಂತಿಕೆ'ಯಿಂದ ಅನ್ವಯಿಸಬೇಕಾಗಿದೆ ಮತ್ತು ಅದಕ್ಕೆ ಬೇಕಾದ ಬುದ್ಧಿವಂತಿಕೆಯನ್ನು ಗಳಿಸಲು ಭಾರತೀಯ ತೆರಿಗೆ ಅಧಿಕಾರಿಗಳಿಗೆ ಅಷ್ಟೊಂದು ಸಮಯ ಬೇಕಾಗುತ್ತದೆ.

ಶೋಮ್ ಸಮಿತಿ ಅಷ್ಟಕ್ಕೇ ನಿಂತಿಲ್ಲ. ಜಿಎಎಆರ್ ನ್ನು ತೆರಿಗೆ ಬಾಧ್ಯತೆ 3 ಕೋಟಿ ರೂ.ಗಳನ್ನು ಮೀರಿದ ಸಂದರ್ಭದಲ್ಲಿ ಮಾತ್ರ, ಅಂದರೆ ತೆರಿಗೆ ತೆರಬೇಕಾದ ಲಾಭದ ಪ್ರಮಾಣ 10 ಕೋಟಿ ರೂ. ದಾಟಿದಾಗ ಮಾತ್ರವೇ ಅನ್ವಯಿಸಬೇಕು ಎಂದು ಕೂಡ ಶಿಫಾರಸು ಮಾಡಿದೆ. ಈ ತರ್ಕದ ಪ್ರಕಾರ, ಲಾಭಗಳನ್ನು 'ವರ್ಗಾವಣೆ ಬೆಲೆ ನಿರ್ಧಾರದ' ಮೂಲಕ ಹಂಚಿದ್ದರೆ, ಆಗ ಜಿಎಎಆರ್ ನ್ನು ಅನ್ವಯಿಸುವ ಸಂದರ್ಭವೇ ಇರುವುದಿಲ್ಲ. ಅದೇ ರೀತಿ, ಹೆಚ್‌ಇಎಲ್ ನ ಶೇರುಗಳನ್ನು ಹೆಚ್‌ಟಿಐಎಲ್ ಕಂಪನಿ ಒಟ್ಟಿಗೇ ಮಾರದೆ, ಒಂದು ಅವಧಿಯಲ್ಲಿ ಸ್ವಲ್ಪ-ಸ್ವಲ್ಪವೇ ಮಾರಿದ್ದರೆ, ಅದು ಸಂಪೂರ್ಣವಾಗಿ ಜಿಎಎಆರ್ ನಿಂದ ಪಾರಾದಂತೆಯೇ.

ಇನ್ನಷ್ಟು ಅಸಹ್ಯಕರ ಕ್ರಮಗಳು

ಆದರೆ ಶೋಮ್‌ರವರು ಇಲ್ಲಿಗೂ ನಿಲ್ಲುವುದಿಲ್ಲ, ಒಟ್ಟಾರೆಯಾಗಿ ಬಂಡವಾಳ ಗಳಿಕೆ ತೆರಿಗೆಯನ್ನೇ ರದ್ದು ಮಾಡಬೇಕು ಎಂದು ಪ್ರತಿಪಾದಿಸುತ್ತಾರೆ! ಮನಮೋಹನ್ ಸಿಂಗ್ ಸರಕಾರ ಹೇಗೂ 'ದೀರ್ಘಾವಧಿ ಬಂಡವಾಳ ಗಳಿಕೆ' ಎಂದು ಕರೆಯುವ(ಅಂದರೆ ಒಂದು ಕನಿಷ್ಟ ಅವಧಿಯವರೆಗೆ ಉಳಿಸಿಕೊಂಡಿರುವ) ಸೆಕ್ಯುರಿಟಿಗಳಿಗಂತೂ ತೆರಿಗೆಯನ್ನು ರದ್ದು ಮಾಡಿದೆ, ಇನ್ನು 'ಅಲ್ಪಾವಧಿ ಬಂಡವಾಳ ಗಳಿಕೆ'ಯ ಮೇಲೂ ಹಗುರವಾದ, ಕೇವಲ 10ಶೇ. ತೆರಿಗೆ ಹಾಕಿದೆ. ಈಗ ಈ ತೆರಿಗೆಯನ್ನೇ ಸಂಪೂರ್ಣವಾಗಿ ತೆಗೆದು ಹಾಕುವ ವಿಚಾರ ಬಂದಿದೆ. ಇದಂತೂ ಹಗರಣಕಾರಿ. ಏಕೆಂದರೆ ಪಕ್ಕಾ ಬೂರ್ಜ್ವಾ ಸಿದ್ಧಾಂತಿಗಳು ಕೂಡ 'ಉದ್ದಿಮೆ' ಮತ್ತು 'ಸಟ್ಟಾ'ದ ನಡುವೆ ವ್ಯತ್ಯಾಸ ಕಾಣುತ್ತಾರೆ; 'ಉದ್ದಿಮೆ' ಎಂಬುದು 'ಲಾಭ'ಗಳಿಸುತ್ತದೆ, 'ಸಟ್ಟಾ' ವ್ಯವಹಾರ 'ಬಂಡವಾಳ ಗಳಿಕೆ' ಮಾಡುತ್ತದೆ. ಅವರು ಉದ್ದಿಮೆಯನ್ನು ಹೊಗಳಿದರೆ, ಸಟ್ಟಾ ಅಥವ ಜೂಜುಗಾರಿಕೆಯನ್ನು ತೆಗಳುತ್ತಾರೆ. ಆದರೆ ಭಾರತದಲ್ಲಿ, ಇನ್ನು ಮುಂದೆ ಲಾಭಗಳ ಮೇಲೆ ತೆರಿಗೆಯಿದ್ದರೆ, ಬಂಡವಾಳ ಗಳಿಕೆಯ ಮೇಲೆ ತೆರಿಗೆ ಇರುವುದಿಲ್ಲ. ಅಂದರೆ 'ಉದ್ದಿಮೆ'ಗೆ ದಂಡ, 'ಸಟ್ಟಾಕೋರತನ'ಕ್ಕೆ ಪ್ರೋತ್ಸಾಹ! ಒಬ್ಬ ಪಕ್ಕಾ ಬೂರ್ಜ್ವಾ ಸಿದ್ಧಾಂತಿಗೆ ಕೂಡ ಇದು ಅತ್ಯಂತ ವಿಲಕ್ಷಣವಾಗಿ ಕಾಣುವ ಒಂದು ಪರಿಸ್ಥಿತಿ.

ಆದರೆ ಇದು ಮನಮೋಹನ ಸಿಂಗ್ ಸರಕಾರದ ಯೋಚನಾ ವೈಖರಿ ಎಷ್ಟು ಅಸಂಬದ್ಧವಾಗಿದೆ ಎಂಬುದನ್ನು ತೋರಿಸುತ್ತದೆ. ಅದು ಇನ್ನೊಂದು ಶೇರು ಮಾರುಕಟ್ಟೆ 'ಗುಳ್ಳೆ'ಯನ್ನು ಆರಂಭಿಸಲು ಕಾತುರವಾಗಿದೆ; ಅದರಿಂದ ಬೆಳವಣಿಗೆಗೆ ಉತ್ತೇಜನೆ ಸಿಗಬಹುದು ಎಂಬುದು ಅದರ ಯೋಚನೆ. ಆದ್ದರಿಂದಲೇ, ಎಷ್ಟೇ ವಿಲಕ್ಷಣವಾಗಿ ಕಂಡುಬಂದರೂ, ಅದು ದೇಶದೊಳಕ್ಕೆ ಸಟ್ಟಾಕೋರ ಹಣಕಾಸು ಬಂಡವಾಳವನ್ನು ಆಕರ್ಷಿಸಲು ಸರ್ವಪ್ರಯತ್ನ ನಡೆಸ ಬಯಸುತ್ತದೆ. ಇಂತಹ ಪ್ರತಿಯೊಂದು ಪ್ರಯತ್ನಕ್ಕೆ ಕಾನೂನುಬದ್ಧತೆಯ ವೇಷ ತೊಡಿಸಲು 'ಸ್ಲಾಟ್ ಮೆಶಿನ್' ಸಮಿತಿಗಳನ್ನು ನೇಮಿಸುತ್ತದೆ. ಅಂತಹ ಪ್ರಯತ್ನ ಎಷ್ಟೇ ಅಸಂಬದ್ಧ ಮತ್ತು ಅಸಹ್ಯವಾಗಿ ಕಂಡರೇನಂತೆ! ಆದರೆ ಈ ಕಥೆ ಯಾವುದೇ ಕಾರಣಕ್ಕೆ ಇಷ್ಟಕ್ಕೇ ಕೊನೆಗೊಳ್ಳುವುದಿಲ್ಲ. ಪ್ರಸಕ್ತ ಬಂಡವಾಳಶಾಹಿ ಬಿಕ್ಕಟ್ಟಿನ ಸಂದರ್ಭದಲ್ಲಿ ಈ ಪ್ರಯತ್ನಗಳ ಫಲ ಸೊನ್ನೆಯೇ; ಹಾಗಾಗಿ, ಮನಮೋಹನ ಸಿಂಗ್ ಸರಕಾರದ ಕಡೆಯಿಂದ ವಿದೇಶಿ ಸಟ್ಟಾಕೋರರನ್ನು ತುಷ್ಟೀಕರಿಸಲು ಇನ್ನೂ ಹೆಚ್ಚು ಹತಾಶ, ನಿಂದನೀಯ ಕ್ರಮಗಳನ್ನು ಕಾಣಲಿದ್ದೇವೆ.

('ಪೀಪಲ್ಸ್ ಡೆಮಾಕ್ರೆಸಿ' ವಾರ ಪತ್ರಿಕೆಯ ಸೆಪ್ಟೆಂಬರ್ 05, 2012 ರ ಸಂಪಾದಕೀಯ)

ಮನುಸ್ಮೃತಿ 9/15

ವ್ಯಭಿಚಾರ ಜೂಜು ಕೋರ ಷಂಡ ಹೆಂಡ
ಕುಡುಕ ನಾದರು ಕೂಡ ಪರದೈವ ಗಂಡ
ಇಂತವನ ಸೇವೆಯನು ಮಾಡುತ್ತ ಹೆಣ್ಣು
ಬಾಳನ್ನು ಸವೆಸುವುದು ಒರಸುತ್ತ ಕಣ್ಣು.
– ವಿಡಂಬಾರಿ

> ಜಗದಗಲಕ್ಕೂ ಯುವಜನತೆಯ ಕೋಪ ಆಕ್ರೋಶ ಭುಗಿಲೆದ್ದಿದೆ. ಹಿಂದೆಂದೂ ಕಾಣದ ಆರ್ಥಿಕ ಬಿಕ್ಕಟ್ಟು ನಿರುದ್ಯೋಗ ಹೆಚ್ಚಿನ ದೇಶಗಳಲ್ಲಿ ಯುವಜನತೆಯ ಭವಿಷ್ಯವನ್ನು ಕತ್ತಲು ಮಾಡಿದೆ. ಈ ದುಸ್ಥಿತಿಯ ವಿರುದ್ಧ ಅವರು ಬಂಡಾಯ ಎದ್ದಿದ್ದಾರೆ.

ಎಸ್.ಕೆ.ವಸಂತರಾಜ

ಜಗದಗಲಕ್ಕೂ ಯುವಜನತೆಯ ಕೋಪ ಆಕ್ರೋಶ ಭುಗಿಲೆದ್ದಿದೆ. ಹಿಂದೆಂದೂ ಕಾಣದ ಆರ್ಥಿಕ ಬಿಕ್ಕಟ್ಟು ನಿರುದ್ಯೋಗ ಹೆಚ್ಚಿನ ದೇಶಗಳಲ್ಲಿ ಯುವಜನತೆಯ ಭವಿಷ್ಯವನ್ನು ಕತ್ತಲು ಮಾಡಿದೆ. ಈ ದುಸ್ಥಿತಿಯ ವಿರುದ್ಧ ಅವರು ಬಂಡಾಯ ಎದ್ದಿದ್ದಾರೆ. 'ಅರಬ್ ವಸಂತ', ಯುರೋ ಪ್ರದೇಶದ ಮುಷ್ಕರಗಳೂ ದಂಗೆಗಳು ಮತ್ತು 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಯುವ ಜನತೆಯ ಬಂಡಾಯದ ರೂಪಗಳೇ. ಯುವಜನತೆಯ ಸ್ಥಿತಿ ಮತ್ತು ಬಂಡಾಯದ ಒಂದು ಸಣ್ಣ ಚಿತ್ರಣ ಇಲ್ಲಿದೆ.



ಜಾಗತಿಕ ಯುವ ನಿರುದ್ಯೋಗ ಕಡಿಮೆಯಾಗುವ ಲಕ್ಷಣಗಳಿಲ್ಲ

ಇತ್ತೀಚೆಗೆ ಐ.ಎಲ್.ಒ. (ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ) ಬಿಡುಗಡೆ ಮಾಡಿದ ಮುಂದಿನ ಐದು ವರ್ಷಗಳ ಉದ್ಯೋಗ ಸ್ಥಿತಿಯ ಮುನ್ನೋಟ ಬಗೆಗಿನ ಅಧ್ಯಯನ ಒಂದರಲ್ಲಿ, ಜಾಗತಿಕ ಯುವ ನಿರುದ್ಯೋಗ ಹೆಚ್ಚಿನ ಪ್ರದೇಶಗಳಲ್ಲಿ ಕಡಿಮೆಯಾಗುವುದಿಲ್ಲ. ಬದಲಾಗಿ ಗಮನಾರ್ಹವಾಗಿ ಹೆಚ್ಚಾಗಲಿದೆ. ಯುರೋ ಬಿಕ್ಕಟ್ಟು ಇತರ ಪ್ರದೇಶಗಳಿಗೂ ಹರಡುವುದರಿಂದ ಇದು ಆಗಲಿದೆ ಎಂದಿದೆ. ಈಗಿನ ಮತ್ತು ಮುಂದಿನ ಒಟ್ಟು ಪರಿಸ್ಥಿತಿಯನ್ನು ಈ ಮತ್ತು ಇತರ ಇಂತಹ ಅಧ್ಯಯನಗಳು ಹೀಗೆ ಗ್ರಹಿಸಿವೆ:

* ಅಭಿವೃದ್ಧ ದೇಶಗಳ ಯುವ ನಿರುದ್ಯೋಗ 2008 ರಲ್ಲಿ ಶೇ. 13 ಇದ್ದಿದ್ದು ಈಗ ಶೇ.18 ಕ್ಕೇರಿದೆ. ಗ್ರೀಸ್, ಸ್ಪೈನುಗಳಲ್ಲಿ ಇದು ಶೇ. 50 ದಾಟಿ ಸ್ಫೋಟಕ ಪರಿಸ್ಥಿತಿ ಉಂಟು ಮಾಡಿದೆ. ಉತ್ತರ ಆಫ್ರಿಕಾ (ಶೇ. 26.4) ಮತ್ತು ಮಧ್ಯಪೂರ್ವ ಏಶ್ಯಾ (ಶೇ.27.5) ಅತ್ಯಂತ ಹೆಚ್ಚು ಯುವ ನಿರುದ್ಯೋಗ ಇರುವ ಪ್ರದೇಶಗಳು

* ಯಾವುದೇ ಪ್ರದೇಶದಲ್ಲೂ ಯುವ ನಿರುದ್ಯೋಗ 2008 ಮೊದಲಿನ ಮಟ್ಟಕ್ಕೂ ಹೋಗದು. ಅಭಿವೃದ್ಧ ದೇಶಗಳ ಗುಂಪು ಬಿಟ್ಟು ಬೇರೆ (ಅದೂ ಬಹಳ ಚಿಕ್ಕ ಇಳಿಕೆ) ಯಾವುದೇ ಗುಂಪು/ಪ್ರದೇಶಗಳಲ್ಲಿ ಈಗಿನ ಮಟ್ಟಕ್ಕಿಂತ ಯುವ ನಿರುದ್ಯೋಗ ಕಡಿಮೆಯಾಗದು

* ಯುವಜನ ನಿರುದ್ಯೋಗಿಯಾಗುವ ಸಾಧ್ಯತೆ ಇತರ ವಯಸ್ಕರಿಗಿಂತ ಮೂರು ಪಟ್ಟು ಹೆಚ್ಚು. ಈ ದೊಡ್ಡ ಪ್ರಮಾಣದ ಯುವ ನಿರುದ್ಯೋಗದ ಅರ್ಥ ಎಂದರೆ ಒಂದು ಇಡೀ ಪೀಳಿಗೆಯೇ ಕಳೆದು ಹೋದಂತೆ ಎಂದು ಹಲವು ಪರಿಣತರು ಅಭಿಪ್ರಾಯ ಪಡುತ್ತಿದ್ದಾರೆ.

* ಸುಮಾರು ಅರ್ಧಕ್ಕೂ ಹೆಚ್ಚು ಅಮೆರಿಕನ್ ಯುವಜನ ತಮ್ಮ ಜೀವನ ಮಟ್ಟ ತಮ್ಮ ಪಾಲಕರದ್ದಕ್ಕಿಂತ ಕೆಟ್ಟದಿರುತ್ತದೆ ಎಂದು ನಿರೀಕ್ಷಿಸುತ್ತಾರೆ. ಬ್ರಿಟನಿನಲ್ಲಿ ಯುವಜನ ಕಳೆದ 20 ವರ್ಷಗಳಲ್ಲೇ ಅತ್ಯಂತ ಕೆಟ್ಟ ನಿರುದ್ಯೋಗ ಪರಿಸ್ಥಿತಿ ಎದುರಿಸುತ್ತಿದ್ದಾರೆ.

* ಶಿಕ್ಷಣ ಅದರಲ್ಲೂ ಉನ್ನತ ಶಿಕ್ಷಣಗಳ ಫೀಸು ಮುಗಿಲು ಮುಟ್ಟಿದೆ. ಕಳೆದ 10 ವರ್ಷಗಳಲ್ಲಿ ಅಮೆರಿಕನ್ ಉನ್ನತ ಶಿಕ್ಷಣದ ಫೀಸು 4 ಪಟ್ಟು ಹೆಚ್ಚಿದೆ. ಇನ್ನು 4 ವರ್ಷಗಳಲ್ಲಿ ಈಗಿನ ಮಟ್ಟದ 2 ಪಟ್ಟು ಆಗಲಿದೆಯಂತೆ. ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಲ ಕೊಡಲಾಗದವರ ಸಂಖ್ಯೆ ಶೇ. 31 ರಷ್ಟು ಹೆಚ್ಚಿದೆ. ಅದು ಕ್ರೆಡಿಟ್ ಕಾರ್ಡ್ ಸಾಲದ ಪ್ರಮಾಣಕ್ಕಿಂತ ಹೆಚ್ಚಾಗಿದೆ.



* ಹೆಚ್ಚಿನ ಅಭಿವೃದ್ಧ ದೇಶಗಳಲ್ಲಿ ನಿರುದ್ಯೋಗ ಭತ್ಯೆ ಮುಂತಾದ ಸಾಮಾಜಿಕ ಭದ್ರತಾ ಕ್ರಮಗಳಿವೆ. ಆದರೆ 2008 ರ ಬಿಕ್ಕಟ್ಟನ್ನು ಸೃಷ್ಟಿಸಿದ ಬ್ಯಾಂಕಿನ ಹೆಗ್ಗಣಗಳಿಗೆ ಅದರ ಪರಿಹಾರಕ್ಕೆ ಆ ದೇಶಗಳ ಸರ್ಕಾರದ ಬಜೆಟುಗಳು ಬಲಿಯಾಗಿ, ಇಂತಹ ಕ್ರಮಗಳನ್ನು (ಪ್ರಮಾಣ, ಹೊಸ ಶರತ್ತುಗಳು, ಅವಧಿ ಮುಂತಾದವುಗಳಲ್ಲಿ) ತೀವ್ರ ಕಡಿತ ಮಾಡಲಾಗುತ್ತಿವೆ. ಅಮೆರಿಕದಲ್ಲಿ ಹಲವು ರಾಜ್ಯಗಳಲ್ಲಿ ನಿರುದ್ಯೋಗ ಭತ್ಯೆ ಕೊಡುವ ಗರಿಷ್ಟ ಅವಧಿಯಲ್ಲಿ ತೀವ್ರ ಕಡಿತ ಮಾಡಿದ್ದರಿಂದ ಒಂದೇ ವಾರದಲ್ಲಿ ಎರಡು ಲಕ್ಷ ಜನ ನಿರುದ್ಯೋಗ ಭತ್ಯೆ ಕಳೆದುಕೊಂಡರು. ಯುರೋಪಿನ ಹಲವು ದೇಶಗಳಲ್ಲೂ ಈ ರೀತಿಯ ತೀವ್ರ ಕಡಿತಗಳನ್ನು ಮಾಡಲಾಗುತ್ತಿದೆ

* ಅದೇ ಸಮಯದಲ್ಲಿ ಹೆಚ್ಚಿನ ಅಭಿವೃದ್ಧಿಶೀಲ ದೇಶಗಳಲ್ಲಿ ಯಾವುದೇ ರೀತಿಯ ನಿರುದ್ಯೋಗ ಭತ್ಯೆ ಮುಂತಾದ ಸಾಮಾಜಿಕ ಭದ್ರತಾ ಕ್ರಮಗಳಿಲ್ಲದೆ ಅವರ ಸ್ಥಿತಿ ಇನ್ನಷ್ಟು ದುರ್ಭರವಾಗಿದೆ.

* ಯುವಜನರ (ಒಂದು ಪೀಳಿಗೆ ಕಳೆದು ಹೋಗುವ) ಈ ಭೀಕರ ದುಸ್ಥಿತಿಯನ್ನು ತಡೆಯಲು ಉದ್ಯೋಗ ಅವಕಾಶ ಹೆಚ್ಚಿಸಲು ತೀವ್ರ ಪ್ರಯತ್ನ ಮಾಡಬೇಕು. ನಿರುದ್ಯೋಗ ಭತ್ಯೆ ಮುಂತಾದ ಸಾಮಾಜಿಕ ಭದ್ರತಾ ಕ್ರಮಗಳನ್ನು ಅಂಗೀಕರಿಸಬೇಕು. ಬೇರೆ ದಾರಿ ಇಲ್ಲ. ಇದಕ್ಕಾಗಿ ಜಿಡಿಪಿಯ ಶೇ. 0.5 ಮೀಸಲಿಟ್ಟರೂ ಸಾಕು. 1988 ರಲ್ಲಿ ತಾನು ಪ್ರಸ್ತಾವಿಸಿದ ನಿರುದ್ಯೋಗ ಪರಿಹಾರಗಳಿಗೆ ಸಂಬಂಧಿಸಿದ ಎಲ್ಲಾ ದೇಶಗಳೂ ಕಾರ್ಯಪ್ರವೃತ್ತರಾಗಬೇಕು ಎಂದು ಐ.ಎಲ್.ಒ. ಹೇಳಿದೆ.

ಯುವಜನರ ಬಂಡಾಯ

ಕಳೆದ ಒಂದು ವರ್ಷ ಇಂತಹ ದುಸ್ಥಿತಿಯ ವಿರುದ್ಧ ಯುವಜನರು ವಿರುದ್ಧ ಬಂಡೆದ್ದಿದ್ದಾರೆ. ಯುದ್ಧವನ್ನೇ ಸಾರಿದ್ದಾರೆ. ಜಗತ್ತನ್ನು ಅಲ್ಲಾಡಿಸಿದ ಪ್ರಸಿದ್ಧವಾದ ಅರಬ್ ವಸಂತ, ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ ಚಳುವಳಿಗಳಲ್ಲದೆ, ಯುರೋಪಿನ ಭಾರೀ ವಿದ್ಯಾರ್ಥಿ, ಕಾರ್ಮಿಕ ವರ್ಗದ ಮಹಾಮುಷ್ಕರಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ಇದರ ಕೆಲವು ಆಯಾಮಗಳು ಇಲ್ಲಿವೆ:



* 'ಅರಬ್ ವಸಂತ' ದ ಕಿಡಿ ಟುನಿಶಿಯಾದಲ್ಲಿ ಆರಂಭವಾಗಿದ್ದು ಒಬ್ಬ ಯುವಕ ಪೋಲಿಸ್ ಜುಲುಮೆಯ ವಿರುದ್ಧ ಪ್ರತಿಭಟಿಸಿ ಆತ್ಮಾಹುತಿ ಮಾಡಿಕೊಂಡಾಗ. ಹಲವು ವರ್ಷಗಳಿಂದ ನಿರಂಕುಶ ಆಡಳಿತ ನಡೆಸಿದ್ದ ದೇಶದ ಸರ್ವಾಧಿಕಾರಿ ಕೆಲವೇ ದಿನಗಳಲ್ಲಿ ಓಡಿ ಹೋಗಬೇಕಾಯಿತು.

* ಟುನಿಶಿಯಾದ ಘಟನೆಗಳು ಈಜಿಪ್ಟಿನಲ್ಲಿ ಬಂಡಾಯದ ಬೆಂಕಿ ಹಚ್ಚಿದವು. ಈಜಿಪ್ಟಿನಲ್ಲಿ ಕೆಲವು ದಶಕಗಳಿಂದ ಬೇರೂರಿದ್ದ ಸರ್ವಾಧಿಕಾರಿ ಮಿಲಿಟರಿ ಆಡಳಿತದ ವಿರುದ್ಧ 'ತಾಹ್ರಿರ್ ಚೌಕ'ದ ಧರಣಿ ಆರಂಭವಾಯಿತು. ಸರ್ವಾಧಿಕಾರಿ ಮತ್ತು ಮಿಲಿಟರಿ ಸರ್ಕಾರ ತೊಲಗಬೇಕು. ಮಿಲಿಟರಿ ದಮನ, ಧಾರ್ಮಿಕ ಗಲಭೆ ಮುಂತಾದ ಸರ್ಕಾರದ ಸೂತ್ರಗಳಿಗೆ ಜನ ಜಗ್ಗಲಿಲ್ಲ. ಕೊನೆಗೂ ಸರ್ವಾಧಿಕಾರಿ ಮತ್ತು ಕೆಲವು ಪ್ರಮುಖ ಅಧಿಕಾರಸ್ಥರು ರಾಜೀನಾಮೆ ಕೊಡಬೇಕಾಯಿತು. ಮಧ್ಯಂತರ ಮಿಲಿಟರಿ ಸರ್ಕಾರ ವಿಳಂಬ ನೀತಿ ಚಲಾಯಿಸಲು ಪ್ರಯತ್ನಿಸಿದಾಗ ಇನ್ನೊಂದು ಸುತ್ತಿನ 'ತಾಹ್ರಿರ್ ಚೌಕ'ದ ಧರಣಿ ನಡೆಯಿತು. ಕೊನೆಗೂ ಚುನಾವಣೆ ನಡೆದು ಹಳೆಯ ಆಡಳಿತದ ಪ್ರತಿನಿಧಿ ಸೋತ. ಚುನಾಯಿತ ಅಧ್ಯಕ್ಷ ಮತ್ತು ಪಾರ್ಲಿಮೆಂಟು ಕೆಲಸ ಮಾಡುತ್ತಿದೆ. ಮೂಲಭೂತವಾದಿಗಳು ಅಧಿಕಾರಕ್ಕೆ ಬಂದರೂ ಪ್ರಜಾಪ್ರಭುತ್ವ ಸ್ಥಾಪಿತವಾಗಿದೆ. 'ತಾಹ್ರಿರ್ ಚೌಕ'ದ ಚಳುವಳಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಯುವಜನರು ಭಾಗವಹಿಸಿದರು.

* 'ಅರಬ್ ವಸಂತ' ದ ಬಿಸಿ – ಯೆಮೆನ್, ಬಹ್ರೈನ್, ಸಿರಿಯಾ, ಲಿಬ್ಯಾ, ಇಸ್ರೇಲ್ ಮುಂತಾದ ದೇಶಗಳಲ್ಲೂ ತಟ್ಟಿತು. ಸೌದಿ ಅರೇಬಿಯಾ ಸಹ ಅದರ ತಾಪದಿಂದ ದೂರವಿರಲಾಗಲಿಲ್ಲ. ಆದರೆ ಇಷ್ಟು ಹೊತ್ತಿಗೆ ಅಮೆರಿಕ ಮತ್ತು ಅದರ ಸ್ಥಳೀಯ ಬಾಲ ಬಡುಕರು ಎಚ್ಚೆತ್ತು ಈ ಚಳುವಳಿಯನ್ನು ತಮಗೆ ಪರವಾಗಿ ತಿರುಗಿಸಿದರು. ಬಹ್ರೈನ್ ಮತ್ತು ಸೌದಿ ಅರೇಬಿಯಾದಲ್ಲಿ ಅಮೆರಿಕ ತನ್ನ ಮಿಲಿಟರಿ ಬಲ ಬಳಸಿ ಚಳುವಳಿಯನ್ನು ತುಳಿಯಿತು. ಸಿರಿಯಾ, ಲಿಬ್ಯಾ ಗಳಲ್ಲಿ ತಮ್ಮ ವಿರೋಧಿ ಸರ್ಕಾರ ಉರುಳಿಸಲು ಪ್ರಯತ್ನಿಸಿದರು. ಲಿಬ್ಯಾದಲ್ಲಿ ಅಮೆರಿನ್ ಕೈಗೊಂಬೆ ಸರ್ಕಾರ ರಚಿಸಲು ಸಾಧ್ಯವಾಗಿದೆ. ಸಿರಿಯಾದಲ್ಲಿ ಅದಕ್ಕೆ ತೀವ್ರ ಪ್ರಯತ್ನಗಳು ನಡೆದಿವೆ.

* 2008ರ ಬಿಕ್ಕಟ್ಟನ್ನು ಸೃಷ್ಟಿಸಿದ ಬ್ಯಾಂಕುಗಳಿಗೆ ಭಾರಿ ಬೇಲೌಟ್ ಮತ್ತು ಜನತೆಗೆ ಕಲ್ಯಾಣ ಯೋಜನೆಗಳಲ್ಲಿ ಕಡಿತ ಅಮೆರಿಕದ ಯುವಜರನ್ನು ರೊಚ್ಚಿಗೆಬ್ಬಿಸಿತು. ಅವರು 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಚಳುವಳಿ ಆರಂಭಿಸಿದರು. ಅವರೂ ವಾಲ್ ಸ್ಟ್ರೀಟ್ ಅಲ್ಲದೆ 'ತಾಹ್ರಿರ್ ಚೌಕ'ದಂತಹ ಪ್ರಮುಖ ನಗರ ಚೌಕಗಳಲ್ಲಿ ಸತತ ಧರಣಿ ಹೂಡಿದರು. ಇದು ಮಿಂಚಿನ ವೇಗದಲ್ಲಿ 82 ದೇಶಗಳು ಮತ್ತು

ಪುಟ 14ಕ್ಕೆ

ಸಶಕ್ತಿಕರಣ ಎಂದರೆ ಯುವಜನರ ಸರ್ವತೋಮುಖ ಅಭಿವೃದ್ಧಿ

ಎಸ್.ವೈ.ಗುರುಶಾಂತ

ಚಲನಶೀಲ ಸಮಾಜದ ಚೈತನ್ಯದಾಯಕ ಒಂದು ಶಕ್ತಿಯೆಂದರೆ ಅದು ಯುವಜನ. ಯುವಜನರ ಸ್ಥಿತಿ ಗತಿಗಳು ಯಾವುದೇ ದೇಶದ ಪರಿಸ್ಥಿತಿಯನ್ನು ಸಾರಿ ಹೇಳುತ್ತವೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಯುವಜನತೆಯ ಅಗಾಧ ಶಕ್ತಿಯನ್ನು ಸಂಪೂರ್ಣವಾಗಿ ಬಳಸಿದರೆ. ಯುವಜನ ಸುಸ್ಥಿತಿಯಲ್ಲಿದ್ದಾರೆ ಅದು ದೇಶದ ಶಕ್ತಿಯನ್ನು, ಬೆಳವಣಿಗೆಯನ್ನು ತೋರಿಸುತ್ತದೆ. ಸಕ್ತಿಶಾಲಿದೇಶಕ್ಕೆ ಸದೃಡ ಯುವ ಜನರ ಪರಿಶ್ರಮ ಅತ್ಯಗತ್ಯ, ಹಾಗಾದಾಗ ದಾಪುಗಾಲಿನ ಪ್ರಗತಿಯು ಸಾಧ್ಯ.

ಯುವಜನತೆ ಶ್ರಮಜೀವಿಗಳ ಸಮೂಹದಲ್ಲಿನ ಒಂದು ಗಣನೀಯ ವಿಭಾಗ, ಹಾಗೇ ಹಲವು ವರ್ಗ ವಿಭಾಗಗಳಲ್ಲಿರುವ ಸಮೂಹ. ದೇಶದ ಅಮೂಲ್ಯ ಮಾನವ ಸಂಪತ್ತಿಗಿರುವ ಈ ವಿಭಾಗವನ್ನು ಈ ವಿಭಾಗವನ್ನು ನಾವು, ನಮ್ಮ ದೇಶ ಎಷ್ಟು ಬೆಳಸಿದೆ, ಬೆಳಸುತ್ತಿದೆ ? ವಿಶ್ವ ಬ್ಯಾಂಕಿನ ಒಂದು ಅಧ್ಯಯನದಂತೆ ಆಫ್ರಿಕಾ ದೇಶದ ಒಟ್ಟು ಜನಸಂಖ್ಯೆಯ ಶೇ 60 ರಷ್ಟು ಜನ ನಿರುದ್ಯೋಗಿಗಳು ಎಂಬುದು ನಿರಾಕರಿಸಲ್ಪಟ್ಟ ಶ್ರಮ ! ಇಂತಹ ನಿರಾಕರಣೆಗಳಿಂದ ಆಫ್ರಿಕಾ ದೇಶಗಳೆಂದರೆ ಕಿತ್ತು ತಿನ್ನುವ ಬಡತನ, ದಾರಿದ್ರ್ಯತನ ಅನಕ್ಷರತೆ, ಅನಾರೋಗ್ಯ, ರೋಗ ರುಜಿನಗಳು, ವಸತಿ ಹೀನತೆ, ಆಫ್ರಿಕಾ ಎಂದರೆ ಕಣ್ಣಿಗೆ ಕಟ್ಟುವ ದಾರುಣ ಚಿತ್ರಗಳು, ಎಷ್ಟೆಲ್ಲಾ ! ಇಂತಹ ಒಂದು ಸಮಾಜ ಆಂತರಿಕ ಕಲಹ, ಹಿಂಸೆ - ಅಪರಾಧಗಳಿಂದ ಮುಕ್ತವಾಗಿರಲಾದರೂ ಹೇಗೆ ಸಾಧ್ಯ ? ಇದು ಒಂದು ಪ್ರದೇಶ, ದೇಶಗಳ ಕಥೆಯಲ್ಲ, ಪ್ರಾಕೃತಿಕ ಸಂಪತ್ತಿನೊಂದಿಗೆ, ಮನಾವ ಸಂಪತ್ತನ್ನು ಬಳಿಸದೇ ಹೋದಾಗ, ಸಮಾನತೆಯ ಆಶಯವೇ ಇಲ್ಲವಾದಾಗ ಕಂಡು ಬರುವ ದುರಂತಗಳ ಸರಣಿ ಎಲ್ಲೆಲ್ಲೂ ! ನಮ್ಮ ದೇಶ, ಭಾರತದ ಸ್ಥಿತಿಯಾದರೂ ಏನು? ನಿಜ ಭಾರತವೀಗ 'ಯುವ ಭಾರತ', 'ತರುಣ ಭಾರತ' ! 15 ರಿಂದ 25 ವಯೋಮಾನದಲ್ಲಿರುವವರ ಸಂಖ್ಯೆ ಶೇ 52.5 ಇದು ಉಜ್ವಲ ಭವಿಷ್ಯವನ್ನು ಸಂಕೇತಿಸುವ ಸಮರ್ಥಿಸುವ ಶಕ್ತಿಶಾಲಿ ಅಂಶ. ಇದನ್ನು ಸಮರ್ಥವಾಗಿ ಬಳಸದೇ ಹೋದರೆ. ಹಿಂದೆ ಭಾರತ ರತ್ನ ಡಾ॥ ಎಂ. ವಿಶ್ವೇಶ್ವರಯ್ಯನವರು ಹಾಗೇ ಧುಮ್ಮಿಕ್ಕಿ ಹರಿದು ಹೋಗುತ್ತಿದ್ದು ಕಾವೇರಿಯನ್ನು ನೋಡ ಉದ್ಘರಿಸಿದ್ದರಲ್ಲಿ 'ವಾಟ್ಸ್ ಎ ಗ್ರೇಟ್ ವೇಸ್ಟ್' (ಓಹ್ ಎಂತಹ ಅಪಾರ ಹಾನಿ.. ! ಎಂತಹ ಅಪಾರ ಹಾನಿ') ಎಂದು. ಇದು ಯುವಜನರ ವಿಷಯದಲ್ಲಿ ಅನ್ವಯಿಸುತ್ತವೆ. ಆದರೆ





ಇಂತಹದ್ದೊಂದು ಉದ್ಧಾರ, ಕಳಕಳಿ ಮತ್ತು ಕಾರ್ಯ ಯೋಜನೆಯ ತಹತಹಿಕೆ ಇರುವ ಆಳುವವರಾದರೂ ಎಲ್ಲಿ ? ಶೋಷಣೆ, ಲಾಭ, ಹೀರುವ ಸರಕುಗಳೆಂದೇ ಶ್ರಮ ಸ್ಪರ್ಧೆಯ ವಸ್ತುಗಳೆಂದೇ ಭಾವಿಸುವ ಅವರು ಯುವನಜನರನ್ನು ಬಳಸಿ ಬಿಸಾಡುವ ಬಾಳೆಲೆಗಳಂತೆಯೇ ನೋಡುವರಲ್ಲಿ. ಸ್ವಾತಂತ್ರ್ಯ ಗಳಿಸಿದ ಭಾರತ ಹಲುವು ಕ್ಷೇತ್ರಗಳಲ್ಲಿ ಅಪಾರ ಸಾಧನೆಗಳನು ಮಾಡಿದೆ ನಿಜ. ಆದರೆ ಇಂದಿಗೂ ತಮ್ಮ ಕಲಿಕೆ ಸಾಮರ್ಥ್ಯಕ್ಕೆ ಅನುಗುಣವಾದ ಒಂದು ಉದ್ಯೋಗ ಸಿಗಬೇಕೆಂದು (ನಿರು)ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾವಣೆ ಮಾಡಿ ಕಾಯ್ದವರು 4.65 ಕೋಟಿ ಜನರು. ನೊಂದಾಯಿಸಿದ ಅರೆ ಉದ್ಯೋಗ್ಗಿ ಗಳಾಗಿ, ಅನಕ್ಷರ ರಾಗಿಯೂ ಗ್ರಾಮಾಂತರಗಳಲ್ಲಿರುವವರ ಸಂಖ್ಯೆ 20 ಕೋಟಿಯನ್ನು ಮೀರಲಿದೆ. ಅನಕ್ಷರಸ್ಥರು 36 ಕೋಟಿ. ಅಪೌಷ್ಟಿಕತೆಯಿಂದ ನರಳುವವರು ಕೋಟಿ ಕೋಟಿ ಯುವಜನ. ಇದು ಸದಾ ಬೆಳೆಯುವ ಸಂಖ್ಯೆಯೇ ಹೊರತು ಕುಗ್ಗಿದ್ದೇ ಇಲ್ಲ ! ಇಷ್ಟು ಸಾಕಲ್ಲವೇ ನಮ್ಮ ದೇಶದ ಸ್ಥಿತಿ-ಗತಿ ಸಾರಲು ! ನಮ್ಮಲ್ಲಿ ಸಂಪನ್ಮೂಲವಿಲ್ಲ ಎಂದಲ್ಲಿ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉತ್ಪಾದನೆ ಎಂಬುದು ಲಾಭ ಗಳಿಕೆಯ ಉದ್ದೇಶಕ್ಕಾಗಿಯೇ ಹೊರತು ಮಾನವಕಲ್ಯಾಣಕ್ಕಾಗಿ ಅಲ್ಲ. ಹೀಗಾಗಿ ನಿರುದ್ಯೋಗಿಗಳ ರಿಜರ್ವ್ ಸೈನ್ಯ ಅವರ ಹಿತಗಳಿಗೆ ಅಗತ್ಯವೆಂದೇ ಭಾವಿಸಲಾಗಿದೆ. ಅದಕ್ಕೆ ತಕ್ಕಂತೆ ನೀತಿ ಅನುಸರಿಸಲಾಗುತ್ತಿದೆ. ಆದರೆ ಇಂದಿನ, ಹಿಂದಿನ ಸರ್ಕಾರಗಳ, ಯುವಜನರ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಲೇ ಬಂದಿವೆ. ಏನೂ ಮಾಡದ ಅವರೇ 'ಯುವಜನರ ಸಶಕ್ತೀಕರಣ'ದ ಬಗ್ಗೆ

ಪುಟ 14ಕ್ಕೆ







ಮಂಗಳೂರಿನಲ್ಲಿ ಡಿವೈಎಫ್ಐ ಯುವತಿಯರ ಉಪಸಮಿತಿಯಿಂದ ರಕ್ತದಾನ ಶಿಬಿರ



ಬೆಂಗಳೂರು ನಗರದಲ್ಲಿ ಬೈಕ್ ರ್ಯಾಲಿ



ಸಾರ್ವಜನಿಕರಿಂದ ನಿಧಿ ಸಂಗ್ರಹ

ಬೆಂಗಳೂರು ಮಹಾನಗರದಲ್ಲಿ ಯುವ ಜನರ ಬೇಗುದಿಗಳು

ಪುಟ 5 ರಿಂದ

ಶಿಕ್ಷಣ ಸಂಸ್ಥೆಗಳಲ್ಲಿ ಓದುವ ಮಕ್ಕಳು ಇಂದಿನ ಜಾಗತಿಕ ಸ್ಪರ್ಧಾ ಪ್ರಪಂಚದಲ್ಲಿ ಮೇಲುಗೈ ಸಾಧಿಸಲು ಆಗುತ್ತಿಲ್ಲ. ಹೀಗಾಗಿ ಅಸಂಘಟಿತ ವಲಯದ ಕ್ಷೇತ್ರಗಳಲ್ಲಿ ಹೆಚ್ಚೆಚ್ಚು ಕೆಲಸಗಳಿಗೆ ಬಹುತೇಕ ಯುವಜನತೆ ಅವಲಂಬನೆ ಯಾಗಿದೆ. ಆದರೆ ಈ ಹಿಂದೆ ಬೆಂಗಳೂರಿನಲ್ಲಿ ಇದ್ದಂತೆ ಸಾರ್ವಜನಿಕ ಉದ್ಯಮಗಳು ಈಗಿಲ್ಲದೆ ಮತ್ತು ಉದ್ಯೋಗ ಸೃಷ್ಟಿಸುವ ಸಾರ್ವಜನಿಕ ಉದ್ಯಮಗಳನ್ನು ಆಳುವಸರ್ಕಾರಗಳು ಆರಂಭಿಸದಿರುವುದರಿಂದ ನಿರುದ್ಯೋಗದ ಭೂತ ತಾಂಡವವಾಡುತ್ತಿದೆ. ಇಂತಹ ಸಂದರ್ಭದಲ್ಲಿ ಉದ್ಯೋಗ ಅರಸಿ ವಲಸೆ ಬರುವ ಮತ್ತು ಬಂದು ನೆಲೆಸಿರುವವರನ್ನು ತೋರಿಸಿ ಇವರಿಂದಲೇ ನಮಗೆ ಉದ್ಯೋಗವಿಲ್ಲ ಎಂದು ಅವರ ಮತ್ತು ಸ್ಥಳೀಯರ ನಡುವೆ ದ್ವೇಷ-ಗಲಭೆಗಳನ್ನು ಸೃಷ್ಟಿಸಲಾಗುತ್ತದೆ.

ದುಡಿಯುವ ಯುವಜನರ ಪಡಿಪಾಟಲು

ಹೀಗೆ ಬೆಂಗಳೂರಿನ ಯುವಜನತೆಯಲ್ಲಿ 5-6 ಲಕ್ಷ ಮಾತ್ರ ಉತ್ತಮ ಶಿಕ್ಷಣ ಪಡೆದು ಉತ್ತಮ ಕೆಲಸದಲ್ಲಿದ್ದರೆ ಸುಮಾರು 40 ಲಕ್ಷಕ್ಕೂ ಮೀರಿ ಅರೆ ವಿದ್ಯಾವಂತರಾಗಿ ಆಟೋ-ಟ್ಯಾಕ್ಸಿ, ವ್ಯಾನ್- ಟ್ರಕ್ ಡ್ರೈವರ್‌ಗಳಾಗಿ ಬೆಂಗಳೂರನ್ನು ಸ್ವಚ್ಛಗೊಳಿಸುವವರಾಗಿ ಬೆಳ್ಳಂ ಬೆಳಿಗ್ಗೆ ಎದ್ದು ಹಾಲು-ತರಕಾರಿ, ಹಣ್ಣು ಹಂಪಲುಗಳನ್ನು ಬೆಂಗಳೂರಿನ 'ಸುಖ ಜೀವಿ'ಗಳಿಗೆ ಸರಬರಾಜು ಮಾಡುವವರಾಗಿ. ಚಳಿ ಮಳೆ ಎನ್ನದೆ ದಿನ ಪತ್ರಿಕೆಯನ್ನು ಮನೆಗೇಯುವವರಾಗಿ. ಮನೆ ಗೆಲಸ ಮಾಡುವವರಾಗಿ, ಮಾಲ್‌ಗಳನ್ನು ಮೇಲೆತ್ತುವ ಕಟ್ಟಡ ಕಾರ್ಮಿಕರಾಗಿ, ಬಿ.ಎಂ.ಟಿ.ಸಿ. ಬಸ್ಸಿನಲ್ಲಿ, ವಿಪರೀತ ಟ್ರಾಫಿಕ್‌ನಲ್ಲಿ 2-3 ಗಂಟೆಗಳ ಕಾಲ ನಿಂತು ನೇತಾಡಿ 20-30 ಕೀ.ಮೀ. ಬೆಂಗಳೂರಿನಲ್ಲೇ ದೂರದಲ್ಲಿ ದೊರೆಯುವ ಕೆಲಸಕ್ಕಾಗಿ ಪ್ರಯಾಣ ಬೆಳೆಸುವವರಾಗಿ ಅಕ್ಷರಶಹ ತಮ್ಮ ಬದುಕು ಸವೆಸುವವರಾಗಿದ್ದಾರೆ.

ತಳ್ಳುವ ಗಾಡಿಗಳಲ್ಲಿ ತಮ್ಮ ಕರುಳ ಕುಡಿಯ ಜೊತೆ ಸಂಸಾರ ನೂಕುವವರು. ಪ್ರೆಸ್‌ಗಳಲ್ಲಿ ಮೈಯೆಲ್ಲಾ ಮಸಿ ಮಾಡಿಕೊಳ್ಳುವವರು. ಬಾಡಿಗೆಯ ಮನೆಯಲ್ಲಿರುತ್ತಾ ಮನೆಯಿಂದ ಮನೆಗೆ ಎತ್ತಂಗಡಿಯಾಗುವವರು. ಇಹಲೋಕದಲ್ಲೇ 'ನರಕ ಯಾತನೆ' ಎಂದರೆ ಏನೆಂದು ಮನಗಾಣುವ ದುಡಿಯುವ ವರ್ಗದ ಜನ ಇವರು. ಹೇಗೋ ಸ್ವಂತದೊಂದು ಸೈಟು ಅದರಲ್ಲಿ ಒಂದೆರಡು ಸಣ್ಣ ಮನೆ ಇದ್ದು ಕೂಡ ಅದನ್ನು ಉಳಿಸಿಕೊಳ್ಳಲು ಆಗದೆ ಒದ್ದಾಡುವ ಅಥವಾ ಮಾರಿ ಕೊಳ್ಳಲು ಆಗದೇ ನರಳಾಡುವವರಿಗೂ ಕಮ್ಮಿ ಏನಿಲ್ಲ. ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಲು ಆಗಲಿಲ್ಲವಲ್ಲ ಎಂದು ಪರಿತಪಿಸುವವರು. ಪುರುಷ ಪ್ರಧಾನ ವ್ಯವಸ್ಥೆಯಿಂದ ಎಲ್ಲಾ ರೀತಿಯಿಂದ ದಿನಾಲೂ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗೆ ಒಳಗಾಗುವ ಯುವತಿಯರು. ಅತ್ಯಂತ ಹೆಚ್ಚಿನ ರೀತಿಯಲ್ಲಿ ಅನ್ಯಾಯಕ್ಕೆ ತುತ್ತಾದ ದಲಿತ-ಹಿಂದುಳಿದ ಯುವಜನತೆ ಇದನ್ನೂ ಮೀರಿದ ಸಂಕಷ್ಟಗಳ ಸರಪಳಿ. ಬೆಂಗಳೂರು ಮಹಾನಗರದ ನೂರಾರು ಸ್ಲಂಗಳಲ್ಲಿ ವಾಸಿಸುವ ಜನರು ಮತ್ತು ಯುವಜನರ ಬದುಕಿನ ದಾರುಣ ಪರಿಸ್ಥಿತಿಗಳನ್ನು ಬಣ್ಣಿಸಲು ಪದಗಳು ಸಾಲದು. ನಿರುದ್ಯೋಗಿ ಯುವಜನರ ಪಾಡು ಒಂದು ರೀತಿಯದ್ದಾದರೆ ದುಡಿಯುವ ವರ್ಗದ ಭಾಗವಾಗಿ ಬೆಂಗಳೂರನ್ನು ಕಟ್ಟುವ ಕಾಯಕದಲ್ಲಿರುವ ಯುವಜನರ ಬದುಕು ಕೂಡ ಅಭದ್ರತೆ ಆತಂಕದಿಂದಲೇ ಕೂಡಿದೆ.

ಇವೆಲ್ಲವುಗಳ ನಡುವೆ ದಿನ ಬೆಳಗೆದ್ದರೆ ಚಿನ್ನ ಬೆಳ್ಳಿ ದರೋಡೆ, ಜೋಡಿ ಕೊಲೆ.. ವೃದ್ಧರ ಕೊಲೆ... ರೌಡಿ ಕೊಲೆ... ಕಾರ್ಪೋರೇಟರ್ ಕೊಲೆ... ಆಸ್ತಿಗಾಗಿ ತಂದೆ ಕೊಲೆ... ತಾಯಿ ಕೊಲೆ... ಸಂಬಂಧಿಕರ ಕೊಲೆ... ಎಂಬ ಸುದ್ದಿಗಳು ಜನರನ್ನು ಬೆಚ್ಚಿ ಬೀಳಿಸುತ್ತಿವೆ. ಈ ಬಹಳಷ್ಟು ಪ್ರಕರಣಗಳಲ್ಲಿ ಯುವಜನರು ಒಂದೋ ಬಲಿಪಶುಗಳು ಅಥವಾ ಅಪರಾಧಿ ಸ್ಥಾನದಲ್ಲಿರುವುದು ಕಂಡು ಬರುತ್ತದೆ. ಸಮಸ್ಯೆಯ ಆಳವನ್ನು ಹೊಕ್ಕು ಸರಿಯಾಗಿ ನೋಡಿದರೆ ಕಾಡು ಪ್ರಾಣಿಗಳಂತೆ ಕಚ್ಚಾಡುವ, ಕಡಿದಾಡುವ ಬಡಿದಾಡುವ ಮನಸ್ಥಿತಿಗೆ ಯುಜನರನ್ನು ತಳ್ಳಿದ ವ್ಯವಸ್ಥೆ ಇಲ್ಲಿ ನಿಜವಾದ ಅಪರಾಧಿ. ಈ ವ್ಯವಸ್ಥೆಯನ್ನು ಪೋಷಿಸಿಕೊಂಡು-ಸಂರಕ್ಷಿಸಿಕೊಂಡು ಹೋಗಲು ಹೆಣಗುತ್ತಾ ಅದನ್ನು ನಿಯಂತಿಸುತ್ತಿರುವವರು ಅಪರಾಧಿಗಳು.... ಯುವಜನ ಸೇರಿದಂತೆ ಸಾಮಾನ್ಯ ಜನರು ಈ ಕ್ರೂರ ವ್ಯವಸ್ಥೆಯ ಬಲಿಬಶುಗಳು ಎಂಬುದು ಗೊತ್ತಾಗುತ್ತದೆ. ಇಂತಹ ಸ್ಥಿತಿಯನ್ನು ಬದಲಿಸುವುದು ಹೇಗೆ ಎಂಬುದೇ ಇಂದಿನ ಜನಪರ ಪ್ರಜಾಸತ್ತಾತ್ಮಕ ಯುವಜನಾಂದೋಲನದ ಮುಂದಿರುವ ಸವಾಲು. ಯುವಜನ ಸಂಘಟನೆಯ ಮುಂದಿರುವ ಸವಾಲು.

ಸದಾಶಿವ ಆಯೋಗದ ವರದಿ; ವಿವಾದ

ಪರಿಶಿಷ್ಟ ಜಾತಿ ಸಮುದಾಯಗಳಿಗೆ ಒಳಮೀಸಲಾತಿ ಕಲ್ಪಿಸುವ ಕುರಿತು ಸರ್ಕಾರಕ್ಕೆ ಸಲಹೆ ನೀಡಲು 2005 ರಲ್ಲಿ ರಚನೆಯಾಗಿದ್ದ ನ್ಯಾಯಮೂರ್ತಿ ಎ.ಜೆ.ಸದಾಶಿವ ಏಕಸದಸ್ಯ ಆಯೋಗ ಕಳೆದ ಜೂನ್ ತಿಂಗಳಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ವರದಿಯ ಪರವಾಗಿ ಹಾಗೂ ವಿರುದ್ಧವಾಗಿ ರಾಜ್ಯದೆಲ್ಲೆಡೆ ದಲಿತ ಸಮುದಾಯಗಳಿಗೆ ಸೇರಿದ ಬಂಧುಗಳು ಹೋರಾಟಗಳನ್ನು ನಡೆಸುತ್ತಿರುವುದು ಆತಂಕದ ಬೆಳವಣಿಯಾಗಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಅಭಿಪ್ರಾಯಟ್ಟಿದೆ.

ಸಂವಿಧಾನದ ಪ್ರಕಾರ ಪರಿಶಿಷ್ಟ ಜಾತಿಗಳಿಗೆ ಈಗ ನೀಡಲಾಗುತ್ತಿರುವ ಶೇ 15ರಷ್ಟು ಮೀಸಲಾತಿಯನ್ನು ವಿವಿಧ ಪರಿಶಿಷ್ಟ ಉಪಜಾತಿಗಳ ನಡುವೆ ಹೇಗೆ ಮರುಹಂಚಿಕೆ ಮಾಡಬಹುದು ಎಂಬುದನ್ನು ಸರ್ಕಾರಕ್ಕೆ ಶಿಫಾರಸು ಮಾಡಲು ಸದಾಶಿವ ಆಯೋಗ ರಚನೆಯಾಗಿತ್ತು. 7 ವರ್ಷಗಳ ನಂತರ ಆಯೋಗ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ವರದಿಯನ್ನು ಸರ್ಕಾರ ಇದುವರೆಗೂ ಸದನದಲ್ಲಿ ಮಂಡಿಸಿಲ್ಲ. ಅದನ್ನು ಚರ್ಚಿಸದೆ ಸರ್ಕಾರ ಅದನ್ನು ಒಪ್ಪಿಕೊಳ್ಳಲೂ ಸಾಧ್ಯವಿಲ್ಲ. ಅದನ್ನು ಅಂಗೀಕರಿಸಿ ಜಾರಿಗೊಳಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ಹಿಂದೆ ಆಂಧ್ರ ಪ್ರದೇಶ ಸರ್ಕಾರ ಕೂಡ ವಿವಿಧ ಉಪಜಾತಿಗಳಿಗೆ ಒಳಮೀಸಲಾತಿ ಜಾರಿಮಾಡಲು ಮುಂದಾದಾಗ ಅಂತಹ ನಿರ್ಧಾರ ಕೈಗೊಳ್ಳುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಏನಿದ್ದರೂ ರಾಜ್ಯ ಸರ್ಕಾರ ಒಳಮೀಸಲಾತಿ ವರ್ಗೀಕರಣ ಮಾಡುವಂತೆ ಪಾರ್ಲಿಮೆಂಟಿಗೆ ಶಿಫಾರಸು ಮಾಡಬೇಕಾಗುತ್ತದೆ.

ಪರಿಶಿಷ್ಟ ಸಮುದಾಯಕ್ಕೆ ಸೇರಿದ ಉಪಜಾತಿಗಳಿಗೆ ಒಳಮೀಸಲಾತಿ ಕಲ್ಪಿಸುವ ವಿಚಾರವನ್ನು ತಾತ್ವಿಕವಾಗಿ ಸಿಪಿಐ(ಎಂ) ಒಪ್ಪುತ್ತದೆ. ಒಳಮೀಸಲಾತಿಯನ್ನು ಕಲ್ಪಿಸುವಾಗ ಉಪಜಾತಿಗಳ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಜನಸಂಖ್ಯೆಯನ್ನು ನಿಖರವಾಗಿ ಕಂಡುಕೊಳ್ಳಲು ಸರಿಯಾದ ವಿಧಾನವನ್ನು ಅನುಸರಿಸ ಬೇಕಾಗುತ್ತದೆ. ನ್ಯಾಯಮೂರ್ತಿ ಎ.ಜೆ. ಸದಾಶಿವ ಅವರೇ ಒಪ್ಪಿಕೊಂಡಿರುವಂತೆ ಬಹಳಷ್ಟು ಜನ ಸಮಾಜದಲ್ಲಿ ತಾವು ಅನುಭವಿಸುತ್ತಿರುವ ಅವಮಾನಕ್ಕೆ ಹೆದರಿ ತಮ್ಮ ಜಾತಿಯನ್ನು ನಮೂದಿಸಲು ಹಿಂಜರಿಯುತ್ತಾರೆ. ಇಷ್ಟೊಂದು ಮಹತ್ವದ ಗಣತಿ ನಡೆಸುವಾಗ ಸಂಬಂಧಪಟ್ಟವರಿಗೆ ಅದರ ಮಾಹಿತಿ ಹಾಗೂ ಮಹತ್ವವನ್ನು ಸಮರ್ಪಕವಾಗಿ ತಿಳಿಯಪಡಿಸಬೇಕು. ದಲಿತ ಸಮುದಾಯಗಳ ಜನಗಣತಿ ನಡೆದಾಗ ಎಷ್ಟೋ ಮಂದಿ ದಲಿತರು ಹೊಟ್ಟೆ ಪಾಡಿಗಾಗಿ ವಲಸೆ ಹೋಗಿರುತ್ತಾರೆ.

ಜನಸಂಖ್ಯೆಯೊಂದನ್ನೇ ಮಾನದಂಡವಾಗಿ ಪರಿಗಣಿಸಲಾಗದು. ಪ್ರತಿಯೊಂದು ಉಪಜಾತಿಯ ಜನಗಳ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಹಿಂದುಳಿಯುವಿಕೆಯನ್ನು ವೈಜ್ಞಾನಿಕವಾಗಿ ಪರಿಗಣಿಸಿ ಒಳಮೀಸಲಾತಿಯ ಮರುವಿಂಗಡನೆ ಮಾಡಬೇಕಾಗಿದೆ. ಪ್ರಸಕ್ತ ಸದಾಶಿವ ಆಯೋಗದ ವರದಿ ಇಡಿಯಾಗಿ ಸಾರ್ವಜನಿಕರ ಕೈಗೆ ದೊರಕಿಲ್ಲ. ಅದರ ಕೆಲವು ವಿವರಗಳಷ್ಟೇ ಸೋರಿಕೆಯಾಗಿವೆ. ಬಿಜೆಪಿ ರಾಜ್ಯ ಸರ್ಕಾರ ಮುಂಬರುವ ಚುನಾವಣೆಯಲ್ಲಿ ಇದರ ಲಾಭ ಪಡೆಯಲು ಆತುರವಾಗಿರುವಂತೆ ಕಾಣುತ್ತದೆ. ರಾಜ್ಯದ ದಲಿತರನ್ನು ಒಡೆಯುವ, ಪರಸ್ಪರ ಎತ್ತಿಕಟ್ಟುವ ಈ ಹುನ್ನಾರವನ್ನು ನಮ್ಮ ದಲಿತ ಬಂಧುಗಳು ಅರ್ಥಮಾಡಿಕೊಂಡು ಸಂಯಮದಿಂದ ನಡೆದುಕೊಳ್ಳುವುದು ಅಗತ್ಯವಿದೆ. ವರದಿಯನ್ನು ವಿವರವಾಗಿ ಅಧ್ಯಯನ ಮಾಡಿದ ನಂತರವಷ್ಟೇ ಅದರ ಬಗ್ಗೆ ಒಂದು ತೀರ್ಮಾನಕ್ಕೆ ಬರಬಹುದೆಂದು ಸಿಪಿಐ(ಎಂ) ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದ್ದು ದಲಿತರ ಐಕ್ಯತೆಗೆ ಧಕ್ಕೆ ತರುವ ಪ್ರಯತ್ನಗಳನ್ನು ಪ್ರೋತ್ಸಾಹಿಸಬಾರದೆಂದು ಸಿಪಿಐ(ಎಂ) ಮನವಿ ಮಾಡಿದೆ.

ಡಿವೈಎಫ್ಐ ಅಖಿಲ ಭಾರತ ಸಮ್ಮೇಳನ - ವಿವಿಧ ಕಲಾಪಗಳು

ಸಮ್ಮೇಳನಕ್ಕೆ ಸಾಥ ನೀಡುವ ಆವರಣದ ಚಟುವಟಿಕೆಗಳು

- 09.09.2012 - ಸ್ವಯಂ ಸೇವಕರ ಪಥ ಸಂಚಲನ
- 10.09.2012 - ನಾಡಿನ ಖ್ಯಾತ ಚಿತ್ರಕಾರರಿಂದ ವರ್ಣ ಸಂಭ್ರಮ. ಕಲಾಶಿಬಿರ
- 11.09.2012 - ವಿವಿಧ ವಸ್ತು ಪ್ರದರ್ಶನಗಳು
  - ಪುಸ್ತಕ
  - ಫೋಟೋ
  - ಜಾಗತೀಕರಣದ ವಿರುದ್ಧದ ಹೋರಾಟದ ವಸ್ತು ಪ್ರದರ್ಶನ
  - ವಿವಿಧ ಕ್ಷೇತ್ರಗಳ ಸಾಧಕರಿಗೆ ಯುವ ಗೌರವ.
- 12.09.2012 - ಶ್ಯಾಮ್ ಬೆನಗಲ್ ಜೊತೆ ಮಾತುಕತೆ
- 13.09.2012 - ಭವ್ಯ ಭೂಮಿ - ಸಾಂಸ್ಕೃತಿಕ ಕಾರ್ಯಕ್ರಮ

ವೈಜಯಂತಿ ಕಾಶಿ ತಂಡ

ಜನಶಕ್ತಿ
ಕನ್ನಡ ವಾರಪತ್ರಿಕೆ

ದೈತ್ಯ ಕಲ್ಲಿದ್ದಲ ಹಗರಣ– ಖಾಸಗೀಕರಣದ ಕಹಿ ಪ್ರತಿಫಲ

ಪ್ರಕಾಶ್ ಕಾರಟ್

ದೇಶದ ಅಪಾರ ಕಲ್ಲಿದ್ದಲು ಸಂಪತ್ತಿನ ದೊಡ್ಡ ಭೂ ಪ್ರದೇಶಗಳನ್ನು ಖಾಸಗಿ ಕಂಪನಿಗಳಿಗೆ ನೀಡುವುದರ ಮೂಲಕ ಅವರು ಅಗ್ಗಾಧ ಲಾಭ ಮಾಡಲು ಅನುವು ಮಾಡಿಕೊಟ್ಟಿರುವುದನ್ನು ಕಂಟ್ರೋಲರ್ ಅಂಡ್ ಅಡಿಟರ್ ಜನರಲ್ (ಸಿಎಜಿ) ವರದಿಯ ಪ್ರಕಾರ, ಇಷ್ಟು ಅಗಾಧ ಪ್ರಮಾಣದ ಕಲ್ಲಿದ್ದಲ ಸಂಪತ್ತನ್ನು ಖಾಸಗಿಯವರಿಗೆ ನೀಡಿದ್ದರಿಂದಾಗಿ ಈ ಕಂಪನಿಗಳಿಗೆ 1.86 ಲಕ್ಷ ಕೋಟಿ ರೂಪಾಯಿಯ ಲಾಭ ದಕ್ಕುವ ಸಾಧ್ಯತೆ ಇದೆ.

ಧೊಡ್ಡ ಬಂಡವಾಳದಾರರು ಮತ್ತು ಕಾರ್ಪೊರೇಟ್ ಕಂಪನಿಗಳು ದೇಶದ ಸಂಪತ್ತನ್ನು ಲೂಟಿ ಮಾಡಲು ಅನುಕೂಲ ಮಾಡಿಕೊಡುವ ಯುಪಿಎ ಸರ್ಕಾರದ ನೀತಿಗಳ ಭಾಗವಾಗಿ ಈ ಕಲ್ಲಿದ್ದಲ ಸಂಪತ್ತನ್ನು ನೀಡಲಾಗಿದೆ. ನೈಸರ್ಗಿಕ ಅನಿಲ, ಭೂಮಿ ಹಾಗೂ ಎರಡನೇ ತಲೆಮಾರಿನ ತರಂಗಾಂತರ ನೀಡುವಾಗ ನಡೆದದ್ದೂ ಇದೆ.

ಹೀಗಿದ್ದಾಗ್ಯೂ, ಕಲ್ಲಿದ್ದಲಿನಂತಹ ನೈಸರ್ಗಿಕ ಸಂಪತ್ತನ್ನು ಖಾಸಗೀಕರಿಸಲು 1991ರ ನಂತರ ಸತತವಾಗಿ ಆಳ್ವಿಕೆ ನಡೆಸಿದ ಎಲ್ಲಾ ಸರ್ಕಾರಗಳು ಒತ್ತು ನೀಡಿರುವುದನ್ನು ಸಿಎಜಿ ವರದಿಯು ಪ್ರಸ್ತಾಪಿಸಿಲ್ಲ. 2006–2007 ರಿಂದ 2010–2011ರ ಅವಧಿಯಲ್ಲಿನ ನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಿದೆ ಮತ್ತು 2004ರ ನಂತರದಲ್ಲಿ ಕಲ್ಲಿದ್ದಲು ಸಚಿವಾಲಯವು ಹಂಚಿಕೆ ಮಾಡಿರುವುದನ್ನು ಪರಿಶೋಧಿಸಿದೆ.

ಕಲ್ಲಿದ್ದಲ ವಿಷಯದಲ್ಲಿ, ಎನ್.ಡಿ.ಎ. ಮತ್ತು ಯು.ಪಿ.ಎ. ಎರಡೂ ಸರ್ಕಾರಗಳು ಹಲವು ಕಷ್ಟಗಳನ್ನು ಎದುರಿಸಿದವು. ಕಲ್ಲಿದ್ದಲು ಗಣಿಗಳನ್ನು 1972–73 ರಲ್ಲಿ ರಾಷ್ಟ್ರೀಕರಿಸಲಾಗಿದೆ. 1973 ರಲ್ಲಿ ಕಲ್ಲಿದ್ದಲು ಗಣಿಗಳ (ರಾಷ್ಟ್ರೀಕರಣ) ಕಾಯಿದೆ ಅಂಗೀಕೃತವಾಯಿತು. ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಸರ್ಕಾರಗಳು ಎಷ್ಟೇ ಪ್ರಯತ್ನ ಪಟ್ಟರೂ, ಕಲ್ಲಿದ್ದಲು ಗಣಿಗಾರಿಕೆಯಲ್ಲಿ ಖಾಸಗಿ ವಲಯದವರ ಪ್ರವೇಶಕ್ಕೆ ಅನುವು ಮಾಡಿಕೊಡಲು ಕಾಯಿದೆಯನ್ನು ತಿದ್ದುಪಡಿಮಾಡಲು ಸಾಧ್ಯವಾಗಲಿಲ್ಲ. ಖಾಸಗಿಯವರ ಪ್ರವೇಶಕ್ಕೆ ದಾರಿಮಾಡಿಕೊಡಲು ಕಲ್ಲಿದ್ದಲು ರಾಷ್ಟ್ರೀಕರಣ ತಿದ್ದುಪಡಿ ಕಾಯಿದೆಯನ್ನು ಎನ್.ಡಿ.ಎ. ಸರ್ಕಾರವು 2000ರಲ್ಲೇ ಸಂಸತ್ತಿನಲ್ಲಿ ಮಂಡಿಸಿತು. ಆದರೆ ಅದು ಇಲ್ಲಿಯವರೆಗೂ ಅಂಗೀಕಾರವಾಗಲಿಲ್ಲ. ಕಲ್ಲಿದ್ದಲು ಕಾರ್ಮಿಕರ ಸಂಘ ಹಾಗೂ ದೇಶದ ಇಡೀ ಕಾರ್ಮಿಕ ಚಳವಳಿಯು ಕಲ್ಲಿದ್ದಲು ಗಣಿಗಾರಿಕೆಯ ಖಾಸಗೀಕರಣವನ್ನು ದೃಢಸಂಕಲ್ಪ ಮಾಡಿ ಒಕ್ಕೊರಲಿನಿಂದ ವಿರೋಧಿಸಿತು. ಖಾಸಗೀಕರಣ ಪ್ರಯತ್ನದ ವಿರುದ್ಧ ಕಲ್ಲಿದ್ದಲು ಕಾರ್ಮಿಕರು ಹಲವಾರು ಮುಷ್ಕರಗಳನ್ನು ನಡೆಸಿದರು.

ಈ ಅಡ್ಡಿಯನ್ನು ನಿವಾರಿಸಲು 'ಇಡಿಯಾಗಿ ಗಣಿಗಳನ್ನೇ' ಹಂಚಿಕೆ ಮಾಡುವ ದಾರಿ ಹುಡುಕಿಕೊಳ್ಳಲಾಯಿತು. ಮುಖ್ಯ ಕಾಯಿದೆಗೆ ತಿದ್ದುಪಡಿಗಳನ್ನು ತರುವ ಮೂಲಕ 1993 ಮತ್ತು 1996ರಲ್ಲಿ ವಿದ್ಯುತ್ ಉತ್ಪಾದನೆ ಮತ್ತು ಸಿಮೆಂಟ್ ಉತ್ಪಾದನೆಯಲ್ಲಿ ತೊಡಗಿರುವ ಕಂಪನಿಗಳು 'ಇಡಿಯಾಗಿ ಗಣಿಗಳನ್ನು' ಹೊಂದಲು ಅನುಮತಿ ನೀಡಲಾಯಿತು. ಕಬ್ಬಿಣ ಮತ್ತು ಉಕ್ಕು ಉತ್ಪಾದಿಸುವವರ ಅನುಕೂಲಕ್ಕಾಗಿ 'ಇಡಿಯಾಗಿ ಗಣಿಗಳನ್ನು' ಹೊಂದಲು ಅನುವು ಮಾಡಿಕೊಡುವ, ಅದಾಗಲೇ 1976ರಲ್ಲೇ ಕಾಯಿದೆಯಾಗಿದ್ದ ಕರಾರುಗಳ ಜತೆಯಲ್ಲೇ ಇದನ್ನೂ ನೀಡಲಾಯಿತು.

ಇಡಿಯಾಗಿ ಗಣಿಗಳನ್ನು ಹಂಚಿಕೆ ಮಾಡುವ ಮಾರ್ಗದರ್ಶಿ ಸೂತ್ರವು ಅಂತಿಮ ಬಳಕೆದಾರರಿಗೆ–ಉಕ್ಕು ಅಥವಾ ವಿದ್ಯುತ್ ಉತ್ಪಾದಕರಿಗೆ– ಹಂಚಿಕೆ ಮಾಡಬಹುದು ಎಂದು ಮೊದಲು ತಿಳಿಸಿತ್ತು. ಆದರೆ ಇದನ್ನು 2006ರಲ್ಲಿ ದುರ್ಬಲಗೊಳಿಸಲಾಯಿತು. ಈಗ ಅಂತಿಮ ಬಳಕೆದಾರರಿಗೆ ಕಲ್ಲಿದ್ದಲು ಪೂರೈಕೆ ಮಾಡಲು ಗುತ್ತಿಗೆ ಪಡೆದ ಗಣಿ ಕಂಪನಿಗೂ ಇಡಿಯಾಗಿ ಕಲ್ಲಿದ್ದಲನ್ನು ಹಂಚಿಕೆ ಮಾಡಬಹುದು.

ಸಚಿವಾಲಯ ರಚಿಸಿರುವ ತಪಾಸಣಾ ಸಮಿತಿಯು ಕಲ್ಲಿದ್ದಲ ದೊಡ್ಡ ಭೂಪ್ರದೇಶಗಳನ್ನು ಈ ರೀತಿಯಲ್ಲಿ ಹಂಚಿಕೆ ಮಾಡಿದೆ, ಅವುಗಳಲ್ಲಿ ಅನೇಕರು ಗಣಿಗಾರಿಕೆಯನ್ನೇ ಮಾಡಿಲ್ಲ ಅಥವಾ ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂಬುದು ಕಂಡುಬಂದಿದೆ. ಕೆಲವು ಹಂಚಿಕೆಗಳನ್ನು ಸಿಬಿಐ ಈಗಾಗಲೇ ತನಿಖೆಗೆ ಒಳಪಡಿಸಿದೆ ಹಾಗೂ ವಂಚನೆಯ ಮತ್ತು ಇತರೆ ಅಪರಾಧಗಳ ಮೊಕದ್ದಮೆಗಳನ್ನು ಸದ್ಯದಲ್ಲಿಯೇ ಹೂಡುವ ಸಾಧ್ಯತೆ ಇದೆ.

ಕಲ್ಲಿದ್ದಲ ದೊಡ್ಡ ಭೂಪ್ರದೇಶವನ್ನು ವಹಿಸಿಕೊಡುವ ಪ್ರಕ್ರಿಯೆಗೆ ಚಾಲನೆ ಸಿಕ್ಕಿದ್ದೇ 2000 ದಲ್ಲಿ. ಇದಕ್ಕಾಗಿ ಅವರು ಮುಂದಿಟ್ಟ ಪ್ರಮುಖ ವಾದವೆಂದರೆ ವಿದ್ಯುತ್ ಉತ್ಪಾದನೆ ಹಾಗೂ ಮತ್ತಿತರ ಉದ್ದೇಶಗಳಿಗೆ ಅಗತ್ಯವಿರುವ ಕಲ್ಲಿದ್ದಲಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಕೋಲ್ ಇಂಡಿಯಾ ಲಿ. (ಸಿಐಎಲ್)ಗೆ ಆಗಲೀ ಅಥವಾ ಇನ್ನಿತರ ಸಹ ಸಂಸ್ಥೆಗಳಿಗಾಗಲೀ ಸಾಧ್ಯವಿಲ್ಲ. ಕಲ್ಲಿದ್ದಲು ಉತ್ಪಾದನಾ ಗುರಿ ತಲುಪುವಲ್ಲಿನ ವಿಳಂಬದ ಅಡ್ಡಿ ಆತಂಕಗಳು ಉಕ್ಕು, ಸಿಮೆಂಟ್ ಮತ್ತಿತರ ಉದ್ದಿಮೆಗಳ ಅಭಿವೃದ್ಧಿಗೆ ತೊಡಕುಂಟು ಮಾಡಿವೆ. ಈ ನೆಪವೊಡ್ಡಿ ಸಾರ್ವಜನಿಕ ಕಲ್ಲಿದ್ದಲು ಉದ್ದಿಮೆಯನ್ನು ವ್ಯವಸ್ಥಿತವಾಗಿ ಹಾಳುಗೆಡವಲಾಗಿದೆ ಹಾಗೂ ಹದಗೆಡಿಸಲಾಗಿದೆ. ಸಿಐಎಲ್ ಸಂಸ್ಥೆಯ ದಕ್ಷತೆ ಹೆಚ್ಚಿಸುವ ಕ್ರಮ ಕೈಗೊಂಡು ಮತ್ತು ಕಲ್ಲಿದ್ದಲು ವಲಯದಲ್ಲಿರುವ ಕುಂದುಕೊರತೆಗಳನ್ನು, ಭ್ರಷ್ಟ ಹಾಗೂ ವ್ಯರ್ಥ ಖರ್ಚುಗಳನ್ನು ಸರಿಪಡಿಸುವ ಬದಲು ಕಾಂಗ್ರೆಸ್ ಹಾಗೂ ಬಿಜೆಪಿ ಎರಡೂ ಪಕ್ಷಗಳ ಸರ್ಕಾರಗಳು ಖಾಸಗಿ ವಲಯದ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟು ಅವು ಅಭಿವೃದ್ಧಿ ಹೊಂದಲು ಬೇಕಾದ ವಾತಾವರಣವನ್ನು ಸೃಷ್ಟಿ ಮಾಡಿದವು. ಕಲ್ಲಿದ್ದಲು ಗಣಿಗಾರಿಕೆಯ ಖಾಸಗೀಕರಣ ಎಷ್ಟು ಕುತರ್ಕದ್ದು ಎನ್ನುವ ಸತ್ಯವನ್ನು ಸಿಎಜಿ ವರದಿ ಬಹಿರಂಗಗೊಳಿಸಿದೆ. ಆ ವರದಿಯ ಪ್ರಕಾರ, ಹನ್ನೊಂದನೇ ಪಂಚವಾರ್ಷಿಕ ಅವಧಿ(2010–11 ರ ತನಕ)ಯಲ್ಲಿ 86 ಕಲ್ಲಿದ್ದಲು ಪ್ರದೇಶಗಳಿಂದ 73 ಮಿಲಿಯನ್ ಟನ್ ಉತ್ಪಾದನೆಯ ಗುರಿ ಹೊಂದಲಾಗಿತ್ತು. ಅದಕ್ಕೆ ಬದಲಾಗಿ, ಕೇವಲ 28 ಪ್ರದೇಶಗಳು(ಅವುಗಳಲ್ಲಿ ಕೇವಲ 15 ಮಾತ್ರ ಖಾಸಗಿ ವಲಯದವರಿಗೆ ಹಂಚಿಕೆಯಾಗಿದೆ) ಮಾತ್ರ 2010–11ರ ಅವಧಿಯಲ್ಲಿ 34.64 ಮಿಲಿಯನ್ ಟನ್ ಉತ್ಪಾದನೆ ಮಾಡಿವೆ. ಇದು ಕಲ್ಲಿದ್ದಲು ಪ್ರದೇಶಗಳ ಕಲ್ಲಿದ್ದಲು ಉತ್ಪಾದನಾ ಗುರಿಗಿಂತ ಶೇಕಡಾ 52.55 ರಷ್ಟು ಕಡಿಮೆ. 68 ಪ್ರದೇಶಗಳಲ್ಲಿ ಉತ್ಪಾದನೆಯೇ ಪ್ರಾರಂಭವಾಗಿಲ್ಲ.



ಸಿಐಎಲ್ ಅನ್ನು ದುರ್ಬಲಗೊಳಿಸಲು ಹಾಗೂ ಸಾರ್ವಜನಿಕ ಕ್ಷೇತ್ರದ ಕಲ್ಲಿದ್ದಲು ಉದ್ದಿಮೆ ವಿಸ್ತಾರಗೊಳ್ಳದಂತೆ ಕಲ್ಲಿದ್ದಲು ಪ್ರದೇಶಗಳ ಹಂಚಿಕಾ ನೀತಿಯನ್ನು ಕಲ್ಲಿದ್ದಲು ಸಚಿವಾಲಯವು ಕಾರ್ಯತಃ ಬಳಸಿಕೊಂಡಿತು. ಸಿಐಎಲ್‌ನ ಆಕ್ಷೇಪಣೆಯ ಹೊರತಾಗಿಯೂ ಸಚಿವಾಲಯವು ತನ್ನ ವ್ಯಾಪ್ತಿಯಲ್ಲಿನ ಕಲ್ಲಿದ್ದಲು ಪ್ರದೇಶಗಳ ಮೀಸಲನ್ನು ಕಿತ್ತು ಹಾಕಿತು. 49,790 ಮಿಲಿಯನ್ ಟನ್ ಸಂಚಯಿತ ಕಲ್ಲಿದ್ದಲನ್ನು ಹೊಂದಿರುವ 116 ಪ್ರದೇಶಗಳನ್ನು ತನಗೇ ಹಂಚಿಕೆ ಮಾಡಬೇಕೆಂದು ಸಿಐಎಲ್ ಹೇಳಿದ್ದರೂ ಅದಕ್ಕೆ ಸಚಿವಾಲಯವು ಸ್ಪಂದಿಸಲಿಲ್ಲ. ಇದು ಸಿಐಎಲ್‌ನ ಉತ್ಪಾದನಾ ಯೋಜನೆಗಳ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಸಿಎಜಿ ವರದಿ ಟಿಪ್ಪಣಿಮಾಡಿದೆ.

ಸಂಸತ್ತಿನಲ್ಲಿ ಪ್ರಧಾನ ಮಂತ್ರಿಗಳ ಹೇಳಿಕೆಯು ಸಮರ್ಥಿಸಲಾಗದ್ದನ್ನು ಸಮರ್ಥಿಸಿಕೊಳ್ಳುವ ನಿರ್ಲಜ್ಜ ಪ್ರಯತ್ನವಾಗಿದೆ. ಪ್ರಧಾನ ಮಂತ್ರಿಗಳ ಕಣ್ಗಾವಲಿನಲ್ಲಿ ಮತ್ತು ಕಲ್ಲಿದ್ದಲು ಸಚಿವಾಲಯದ ಇಬ್ಬರು ರಾಜ್ಯ ಸಚಿವರ ಅಡಿಯಲ್ಲಿ ಕಲ್ಲಿದ್ದಲು ಪ್ರದೇಶವನ್ನು ಹಂಚಿಕೆ ಮಾಡುವ ಭ್ರಷ್ಟ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವ ಯೋಜಿತ ಪ್ರಯತ್ನ ನಡೆದಿದೆ. ತೀರ ಇತ್ತೀಚೆಗೆ 2010ರಲ್ಲಿ, ಹೆಚ್ಚುವರಿ ಕಲ್ಲಿದ್ದಲ ಗಣಿಗಾರಿಕೆಯನ್ನು ನಿಷೇಧ ಮಾಡಿದ್ದ ಮತ್ತು ಹೆಚ್ಚುವರಿ ಕಲ್ಲಿದ್ದಲನ್ನು ಸಿಐಎಲ್ ಗೆ ನೀಡಬೇಕೆಂದು ಹೊರಡಿಸಿದ್ದ ಕಲ್ಲಿದ್ದಲು ಸಚಿವಾಲಯದ ನಿರ್ದೇಶನವನ್ನು ಪ್ರಧಾನ ಮಂತ್ರಿಗಳ ಸಚಿವಾಲಯ ಮಧ್ಯಪ್ರವೇಶಿಸಿ ತಡೆಹಿಡಿದಿದೆ. ಹೆಚ್ಚುವರಿ ಕಲ್ಲಿದ್ದಲನ್ನು ಬಳಸಿಕೊಳ್ಳಲು ಬಯಸಿದ್ದ ಕಂಪನಿಗಳನ್ನು ಪ್ರಧಾನ ಮಂತ್ರಿಗಳ ಸಚಿವಾಲಯ ಬೆಂಬಲಿಸಿತ್ತು. (ಸಸಾನ್ ವಿದ್ಯುತ್ ಯೋಜನೆಗಾಗಿ ಹಂಚಿಕೆಯಾಗಿದ್ದ ಕಲ್ಲಿದ್ದಲು ಪ್ರದೇಶದಿಂದ ಹೆಚ್ಚುವರಿ ಕಲ್ಲಿದ್ದಲನ್ನು ಬಳಸಲು ರಿಲಯನ್ಸ್ ಪವರ್ ಲಿ. ಗೆ ಅವಕಾಶ ಮಾಡಿಕೊಟ್ಟ ಸರ್ಕಾರದ ಕ್ರಮವನ್ನು ಮತ್ತೊಂದು ಸಿಎಜಿ ವರದಿಯು ಟೀಕಿಸಿ ದೋಷಾರೋಪಣೆ ಹೊರಿಸಿತ್ತು.) ಈ ದೊಡ್ಡಮಟ್ಟದ ಭ್ರಷ್ಟಾಚಾರದಿಂದ ಯುಪಿಎ ಸರ್ಕಾರವಾಗಲೀ ಅಥವಾ ಕಾಂಗ್ರೆಸ್ ಪಕ್ಷವಾಗಲೀ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಕನ್ನಡಕ್ಕೆ : **ತಡಗಳಲೆ ಸುರೇಂದ್ರರಾವ್**

ಮುಂದುವರೆಯುವುದು.....

ಕರ್ನಾಟಕದಲ್ಲಿ ಅಪೌಷ್ಠಿಕತೆ: ಆಳುವವರು ಮನಗಾಣದ ಭೀಕರ ಮುಖ

ಭಾಗ – 2

ಎಸ್ ವರಲಕ್ಷ್ಮಿ

40 ವರ್ಷಗಳ ಹಿಂದೆ ಯೋಜನಾ ಆಯೋಗವು "ಒಬ್ಬ ವ್ಯಕ್ತಿಗೆ ಊಟ ಮಾಡಲು ಸಾಕಷ್ಟು ಆಹಾರವಿದ್ದು ಇತರ ಆಹಾರೇತರ ಅವಶ್ಯಕತೆಗಳನ್ನು ಸಹ ಪೂರೈಸಿಕೊಳ್ಳುವ ಸಾಮರ್ಥ್ಯ ಇದ್ದರೆ ಆತನು ಬಡವನಲ್ಲ ಎಂದು ತೀರ್ಮಾನಿಸುವ ಆಧಾರದಲ್ಲಿ ಬಡತನವನ್ನು ವ್ಯಾಖ್ಯಾನಿಸಿತ್ತು.

1973–74 ನೇ ವರ್ಷದಲ್ಲಿ ಮೊಟ್ಟ ಮೊದಲ ಸರಿಯಾದ ಬಡತನದ ಅಂದಾಜು ಮಾಡಲಾಗಿದ್ದು ಗ್ರಾಮೀಣ/ನಗರ ಬಡತನ ರೇಖೆ ನಿರ್ಧರಿಸುವ ಆಧಾರ ದಿನಕ್ಕೆ 2200/2100 ಕ್ಯಾಲೋರಿ ಆಹಾರ ಸೇವನೆಗೆ ಅಗತ್ಯವಾದ ಮೊತ್ತ, ಅದಯ ಮಾಸಿಕ ರೂ 49(ಗ್ರಾಮೀಣ) ನಗರದಲ್ಲಿ ರೂ. 56.6 ಎಂದಾಗಿತ್ತು. ಇದರ ಕೆಳಗೆ ಇರುವವರು ಬಡವರು ಎಂದು ಗುರ್ತಿಸಲಾಗಿತ್ತು.



ಆದ್ರೆ ಇದರ ನಂತರ ಈ ವ್ಯಾಖ್ಯಾನವನ್ನು ಬಳಸಲೇ ಇಲ್ಲ. ಮತ್ತು ಮೂಲ ಬಡತನ ರೇಖೆಗಳನ್ನು ಬೆಲೆ ಸೂಚ್ಯಂಕದ ಆಧಾರದಲ್ಲಿ ಕೇವಲ ಸಮಕಾಲೀನಗೊಳಿಸುತ್ತ ಬರಲಾಯಿತು. ದೀರ್ಘಾವಧಿಗಳಿಗೆ ಬಳಸಲಾದ ಬೆಲೆ ಸೂಚ್ಯಂಕಗಳು ಜೀವನ ವೆಚ್ಚಗಳ ಏರಿಕೆಯನ್ನು ಸರಿಯಾಗಿ ಅಳೆಯಲಿಲ್ಲ. ಪ್ರತಿಯೊಂದು ಹೊಸ ಅಧಿಕೃತ ಬಡತನ ರೇಖೆಯು ಅದರ ಹಿಂದಿನ ರೇಖೆಗಿಂತ ಹೆಚ್ಚೆಚ್ಚು ಕಡಿಮೆ ಅಂದಾಜು ಮಾಡಲ್ಪಡುತ್ತಾ ಶಕ್ತಿ ಹಾಗೂ ಪ್ರೋಟೀನ್ ಸೇವನೆಯನ್ನು ಕಡಿಮೆ ಮಾಡಲು ಕಾರಣವಾಯಿತು.

ಪೌಷ್ಠಿಕ ಮಟ್ಟವನ್ನು ನಿರಂತರವಾಗಿ ಇಳಿಸುತ್ತಾ ಬರಲಾಯಿತು. 2009–10 ಕ್ಕೆ 1890/ 1700 ಕ್ಯಾಲರಿಗಳನ್ನು ಮಾತ್ರ ಪಡೆಯಬಹುದು. ಇದು ಮೂಲ 2200/2100 ಕ್ಯಾಲರಿ ಮಟ್ಟಕ್ಕಿಂತ ತೀರಾ ಕಡಿಮೆ. ಅದು ನಿತ್ಯದ ಬದುಕಿನ ಅಗತ್ಯ ವೆಚ್ಚಗಳನ್ನು ಒಳಗೊಳ್ಳುವುದಿಲ್ಲ ಎಂಬುದು ಎಲ್ಲರಿಗೂ ತಿಳಿಯುತ್ತದೆ. ಈ ಮಟ್ಟಕ್ಕಿಂತಲೂ ಕಡಿಮೆ ಖರ್ಚು ಮಾಡುವವರು ಬಡವರು ಮಾತ್ರವಲ್ಲದೆ ನಿರ್ಗತಿಕರು ಆಗಿದ್ದಾರೆ.

ರಾಜ್ಯದಲ್ಲಿ ಈ ರೀತಿಯ ಅವೈಜ್ಞಾನಿಕ ನೀತಿ ಬಳಸಿ ಇರುವ ಬಿಪಿಎಲ್ ಕಾರ್ಡಗಳನ್ನು ವಾಪಸ್ಸು ತೆಗೆಯಲಾಗುತ್ತಿದೆ.

ರಾಜ್ಯದ ಆದಾಯ : ರಾಜ್ಯದ ಒಟ್ಟು ಆತಂರಿಕ ಉತ್ಪನ್ನ 6.4% ಮಾತ್ರ, 2010–11 ರ ಸಾಲಿನ ಕೃಷಿ ವಲಯದ ಬೆಳವಣಿಗೆ 13.3 ರಿಂದ 2.9 ಕ್ಕೆ ಇಳಿದಿದೆ (ಬರದ ಪರಿಸ್ಥಿತಿಯು ಸೇರಿ) ಕೈಗಾರಿಕಾ ವಲಯದ ಬೆಳವಣಿಗೆ ದರ 6% ರಿಂದ 3.6 ಕ್ಕೆ ಇಳಿದಿದೆ. ಸೇವಾ ವಲಯದ ಬೆಳವಣಿಗೆ ದರ 9.1 ರಿಂದ 10.6 ಕ್ಕೇರಿದೆ (ರೇಲ್ವೆ, ದಾಸ್ತಾನು, ಸಂಪರ್ಕ, ವ್ಯಾಪಾರ, ವಸತಿ, ಉಪಹಾರ, ಗೃಹ, ಸಾರ್ವಜನಿಕ ಆಡಳಿತ ಮತ್ತು ಇತರ ಸೇವೆ)

ಈ ಅಂಕಿ ಸಂಖ್ಯೆಗಳೇ ರಾಜ್ಯದ ಕೃಷಿ ಬೆಳವಣಿಗೆ ದರ 2.9 ಕ್ಕೆ ಕುಸಿದಿರುವುದು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ವಿಷಾದದಿಂದ ಕೂಡಿರುವ ಪರಿಸ್ಥಿತಿಯನ್ನು ಎದುರಿಸಬೇಕಾದ ಕಠಿಣ ಸವಾಲುಗಳಿವೆ ಎಂದು ಹೇಳುತ್ತಿದೆ. ಅಪೌಷ್ಠಿಕತೆ ಹಾಗೂ ಆಹಾರದಷ್ಟೇ ಮುಖ್ಯವಾದ ಮತ್ತೊಂದು ಅಂಶ ವಾಸಿಸುವ ಸ್ಥಳ, ಪರಿಸರ ಮತ್ತು ಕುಡಿಯುವ ನೀರಿನ ಪ್ರಶ್ನೆ. ರಾಜ್ಯದಲ್ಲಿ ಕುಡಿಯುವ ನೀರು ಸರಬರಾಜು ಇರುವುದು 47.30% ಮಾತ್ರ ಕಡಿಮೆ ಗುಣಮಟ್ಟದ ನೀರು 12.76% ರಷ್ಟಿದೆ.

ವಸತಿ: ರಾಜ್ಯದಲ್ಲಿ 10.50 ಲಕ್ಷ ಗುಡಿಸಲು ಗಳಿವೆ. ವಾರ್ಷಿಕ 11,200 ರೂಗಿಂತ ಕಡಿಮೆ ಆದಾಯ ಇದ್ದವರಿಗೆ ಮಾತ್ರ ಉಚಿತ ಮನೆಯೆಂದು ಸರ್ಕಾರ ಘೋಷಿಸಿದೆ. ಇದು ಸಂಪೂರ್ಣ ಅವೈಜ್ಞಾನಿಕವಾದ ಮೌಲ್ಯ ಮಾಪನವಾಗಿದೆ. ಈ ಎಲ್ಲಾ ಕಾರಣಗಳನ್ನೊಳಗೊಂಡ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ನೋಡಿದಾಗ 19 ಪ್ರಮುಖ ರಾಜ್ಯಗಳಲ್ಲಿ 10 ನೇ ಸ್ಥಾನ ಕರ್ನಾಟಕಕ್ಕಿದೆ. ಅಸಮಾನತೆ ಹಿನ್ನೆಲೆಯಿಂದಾಗಿ ಅಭಿವೃದ್ಧಿ 30 ರಷ್ಟು ನಷ್ಟವಾಗಿದೆ. ಶೈಕ್ಷಣಿಕವಾಗಿ 43% ಆರೋಗ್ಯವಲಯ 30% ಆದಾಯ ಸೂಚಿ 16% ಕ್ಕೆ ಇಳಿದಿದೆ.

ಅಪೌಷ್ಠಿಕತೆಯನ್ನು ಕಡಿಮೆ ಮಾಡಲು ಇರುವ ಸರ್ಕಾರದ ಯೋಜನೆಗಳು:–

ಮಾನವ ಸಂಪನ್ಮೂಲಗಳ ಬೆಳವಣಿಗೆ ಅವಶ್ಯಕವಾದ ಆಹಾರದ ಭದ್ರತೆ, ಆರೋಗ್ಯ ಭದ್ರತೆ, ಸಾಮಾಜಿಕ ಭದ್ರತೆ, ಉದ್ಯೋಗದ ಭದ್ರತೆಗಳನ್ನು ರಾಜ್ಯದ ಜನಕ್ಕೆ ಶಾಶ್ವತವಾಗಿ ಒದಗಿಸಲು ಸರ್ಕಾರಗಳು ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ವಿಫಲವಾಗಿವೆ.

ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಮತ್ತು ಚುನಾಯಿತ ಜನ ಪ್ರತಿನಿಧಿಗಳಿಗೆ 5 ವರ್ಷದ ನಂತರ ಮತಗಳಿಕೆಗಾಗಿ ಜನರ ಬಳಿ ಮತ್ತೆ ಹೋಗಬೇಕು ಎಂಬುದು ಚೆನ್ನಾಗಿ ಗೊತ್ತಿರುವುದರಿಂದ ಸಮಸ್ಯೆಯನ್ನು ಮೂಲಭೂತವಾಗಿ ಬದಲಾಯಿಸದ ಕೆಲವೊಂದು 'ಸುಧಾರಣಾವಾದಿ' ಯೋಜನೆಗಳನ್ನು ಜಾರಿಗೆ ತಂದಿದೆ.

ಆ ಯೋಜನೆಗಳಲ್ಲಿ ಪ್ರಮುಖವಾದದ್ದು 1) ಸಮಗ್ರ ಶಿಶು ಅಭಿವೃದ್ಧಿ ಯೋಜನೆ 2) ಮಧ್ಯಾಹ್ನದ ಬಿಸಿಯೂಟದ ಯೋಜನೆ 3) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಆಶಾ)

1954 ರಿಂದ ಕೇಂದ್ರ ಸರ್ಕಾರ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಕೆಲವು ತಾತ್ಕಾಲಿಕ ಮತ್ತು ಪರಿಣಾಮಕಾರಿಯಾದ ಯೋಜನೆಗಳು ಯಾವುವು ಎಂದು ಚರ್ಚಿಸುವುದರಲ್ಲಿ ಮತ್ತು 'ನೀತಿ ರೂಪಿಸುವುದರಲ್ಲಿಯೇ ಹೆಚ್ಚಿನ' ಸಮಯವನ್ನು ಹಾಕಿತು. ಅಂತೂ ಆ ಯೋಜನೆಗಳು ರೂಪುಗೊಂಡು ಇ ಡಿ ದೇಶವ್ಯಾಪಿಯಾಗಿ 1975 ಅಕ್ಟೋಬರ್ 2 ರಂದು ಅಧಿಕೃತವಾಗಿ 'ಸಮಗ್ರ ಶಿಶು ಅಭಿವೃದ್ಧಿ ಯೋಜನೆ'ಯನ್ನು 6 ಮುಖ್ಯ ಅಂಶಗಳೊಂದಿಗೆ ಯುನೆಸೆಫ್‌ನ ಸಹಯೋಗದೊಂದಿಗೆ ಪ್ರಾರಂಭಿಸಲಾಯಿತು.

ಬಹುಶಃ ಭಾರತದಲ್ಲಿ ಅತ್ಯಂತ ಬೃಹತ್ ಯೋಜನೆಯಾಗಿ ದೇಶದ ಎಲ್ಲ ಭಾಗಗಳನ್ನು ಆವರಿಸಿಕೊಂಡಿರುವ ಈ ಯೋಜನೆ ಕರ್ನಾಟಕದಲ್ಲಿಯೂ ಇದೆ. ರಾಜ್ಯದಲ್ಲಿ 63,377 ಅಂಗನವಾಡಿ ಕೇಂದ್ರಗಳು (ಈಗ ಹೊಸದಾಗಿ 1,141) ಕಾರ್ಯ ನಿರ್ವಹಿಸುತ್ತಿವೆ. 1 ಲಕ್ಷ 20 ಸಾವಿರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ದುಡಿಯುತ್ತಿದ್ದಾರೆ.

ರಾಜ್ಯದ ಜನಸಂಖ್ಯೆಯ ಶೇ. 11.21% ರಷ್ಟು ಮಕ್ಕಳು 6 ವರ್ಷದೊಳಗಿನ ಮಕ್ಕಳು. ಅಂದರೆ 6 ವರ್ಷದೊಳಗಿನ ಸುಮಾರು 70 ಲಕ್ಷ ಮಕ್ಕಳು ರಾಜ್ಯದಲ್ಲಿದ್ದಾರೆ. ಆದರೆ ಐಸಿಡಿಎಸ್ ಯೋಜನೆಯಲ್ಲಿ ವ್ಯಾಪ್ತಿಗೆ ಬಂದಿರುವ ಮಕ್ಕಳ ಸಂಖ್ಯೆ 34,94,462 ಮಾತ್ರ. ಗರ್ಭಿಣಿ, ಬಾಣಂತಿಯರು 8,79,532 ಜನರು ಈ ವ್ಯಾಪ್ತಿಗೆ ಬಂದಿದ್ದಾರೆ. ಅಂದರೆ 45% ಮಕ್ಕಳು ಐಸಿಡಿಎಸ್ ಯೋಜನೆಯ ವ್ಯಾಪ್ತಿಯಿಂದ ಹೊರಗೆ ಇದ್ದಾರೆ. ಈ ಯೋಜನೆಯನ್ನು ಬಲಿಷ್ಟಪಡಿಸಿ, ಖಾಯಂ ಮಾಡಬೇಕೆಂದು ಒತ್ತಾಯಿಸಿ ಹೋರಾಟಗಳು ಮತ್ತು ಪತ್ತಾಯಗಳು ಹಲವು ವರ್ಷಗಳಿಂದ ನಡೆಯುತ್ತಿದೆ. ಏಕೆಂದರೆ ಈ ಯೋಜನೆಯು ಮಾನವ ಸಂಪನ್ಮೂಲ ಬೆಳವಣಿಗೆಗೆ ಪೂರಕವಾಗಿದೆ ಎಂಬ ಅಭಿಪ್ರಾಯ ಹಲವಾರು ಆಯೋಗಗಳಿಂದಲೂ ಬಂದಿದೆ. ಆದರೆ ಪ್ರಸ್ತುತ ಈ ಯೋಜನೆಯಲ್ಲಿ ಹಲವಾರು ಕೊರತೆಗಳು ಇವೆ.

ಪ್ರಮುಖವಾಗಿ ಅಂಗನವಾಡಿ ಕೇಂದ್ರದಲ್ಲಿ ಪೂರಕ ಪೌಷ್ಠಿಕ ಆಹಾರ ವಿತರಿಸುವುದು ಒಂದು ಪ್ರಮುಖ ಉದ್ದೇಶ. ಆದರೆ ಈ ಆಹಾರ ವಿತರಣೆಯಲ್ಲಿ ಸರಿಯಾಗಿ ಮಕ್ಕಳ ಸಂಖ್ಯೆಯ ಬದಲಾವಣೆ ಅನುಸರಿಸಿ ಆಹಾರ ಪೂರೈಕೆಯಾಗುತ್ತಿಲ್ಲ.

ಅಂಗನವಾಡಿ ಕೇಂದ್ರದ ಕೆಲಸದ ಅವಧಿ ಹೆಚ್ಚಳವಾಗಿದೆ. ಹಾಗೆಯೇ ಆಹಾರದ ಪ್ರಮಾಣವು ಕೂಡಾ ಹೆಚ್ಚಾಗಬೇಕಾಗಿದೆ.



ಸರ್ಕಾರ ಈ ಆಹಾರಕ್ಕಾಗಿ ಒಂದು ಮಗುವಿಗೆ ಒಂದು ದಿನಕ್ಕೆ 4.50 ರೂ ನಂತೆ 795 ಕೋಟಿ 13 ಲಕ್ಷ ರೂಗಳನ್ನು ವರ್ಷಕ್ಕೆ ಖರ್ಚು ಮಾಡುತ್ತದೆ. ಇಂದಿನ ಬೆಲೆಯೇರಿಕೆ ಆಧಾರದಲ್ಲಿ 4.50 ರೂಗೆ ಬರುವುದು ಕೇವಲ 53 ಗ್ರಾಂ ಆಹಾರ ಮಾತ್ರ. ಒಂದು ಮಗುವಿಗೆ ದಿನಕ್ಕೆ 1200 ಕ್ಯಾಲರಿ ಯಿಂದ 1800 ಕ್ಯಾಲರಿ ಆಹಾರ ಬೇಕೆಂದು ಆಹಾರ ತಜ್ಞರು ಹೇಳುತ್ತಾರೆ. ಅಂಗನವಾಡಿ ಕೇಂದ್ರದಲ್ಲಿ ಸಾಧಾರಣ ಅಪೌಷ್ಠಿಕತೆ ಇರುವ ಮಕ್ಕಳಿಗೆ 500 ಕ್ಯಾಲೋರಿ, ತೀವ್ರ ಅಪೌಷ್ಠಿಕತೆ ಇರುವ ಮಕ್ಕಳಿಗೆ 800 ಕ್ಯಾಲೋರಿ ಆಹಾರ ಕೊಡಬೇಕು ಎಂದು


ಪುಟ 15ಕ್ಕೆ

ಕಲ್ಲಿದ್ದಲು ಹಗರಣ: ಈಗ ಸಿಬಿಐ ದಾಳಿಯಿಂದಲೂ ಬಯಲು

ಕಲ್ಲಿದ್ದಲು ನಿಕ್ಷೇಪಗಳ ಹಂಚಿಕೆಯಲ್ಲಿ ಹ್ರಗರಣವೇನೂ ಇಲ್ಲ, ಇದರಿಂದ ಸರಕಾರದ ಬೊಕ್ಕಸಕ್ಕೆ ನಷ್ಟವೇನೂ ಅಗಿಲ್ಲ ಎಂಬ ಪ್ರಧಾನ ಮಂತ್ರಿಗಳೂ ಸೇರಿದಂತೆ ಯುಪಿಎ-2 ವಕ್ತಾರರುಗಳ ಆಲಾಪನೆಗಳ ನಡುವೆಯೇ ಈ ರೀತಿ ಕಲ್ಲಿದ್ದಲು ನಿಕ್ಷೇಪಗಳನ್ನು ಪಡೆದ ಐದು ಕಂಪನಿಗಳ ಮೇಲೆ ಸಿಬಿಐ ದಾಳಿಗಳಲ್ಲಿ ಈ ಹಗರಣದ ಒಂದು ನೋಟ ಬಯಲಾಗಿದೆ.

ಐದು ಕಂಪನಿಗಳ ಮಾಲಕರು, ನಿರ್ದೇಶಕರುಗಳು ಹಾಗೂ ಸರಕಾರೀ ಅಧಿಕಾರಿಗಳು ಸೇರಿಕೊಂಡು ಮಹಾರಾಷ್ಟ್ರ, ಝಾರ್ಖಂಡ್, ಒಡಿಶಾ ಮತ್ತು ಛತ್ತೀಸ್‌ಗಡದಲ್ಲಿ ಹೆಚ್ಚಿನ ಕಲ್ಲಿದ್ದಲು ನಿಕ್ಷೇಪಗಳನ್ನು ಪಡೆಯುವುದಕ್ಕಾಗಿ ತಮ್ಮ ಕಂಪನಿಗಳ ಮೌಲ್ಯಗಳನ್ನು ಮೋಸದಿಂದ ಹೆಚ್ಚಿಸಿಕೊಳ್ಳುವ ಪಿತೂರಿ ನಡೆಸಿರುವುದು ಸಿಬಿಐ ದಾಳಿಗಳಲ್ಲಿ ಬಯಲಾಗಿದೆ. ಇದರಲ್ಲಿ ಒಬ್ಬ ಕಾಂಗ್ರೆಸ್ ಸಂಸತ್ ಸದಸ್ಯರ 'ನೆರವಿ'ನ ಅಂಶವೂ ಬಯಲಾಗಿದೆ.

ಇದು ಈ ಹಗರಣವನ್ನು ಕಂಡು ಹಿಡಿದ ಸಿಎಜಿಯ ವರದಿ ಪ್ರಕಟವಾಗುವ ಮೊದಲೇ ಸಿಬಿಐ ಕೇಂದ್ರ ಜಾಗೃತಾ ಆಯೋಗದ ಕೇಳಿಕೆಯ ಮೇಲೆ ಅರಂಭಿಸಿದ ತನಿಖೆಯ ಪರಿಣಾಮ. ಸಿಎಜಿ ಗುರುತಿಸಿದಂತೆ ಖಾಸಗಿ ಕಂಪನಿಗಳು ಅಪಾರ ಲಾಭ ದೋಚಿಕೊಂಡ ಅಂಶದ ಒಂದು ಉದಾಹರಣೆ ಇಲ್ಲಿ ಸಿಗುತ್ತದೆ.



ಈ ಐದರಲ್ಲಿ ಒಂದು ಕಂಪನಿಯ 2010-11ರ ಆದಾಯ 1.8 ಕೋಟಿ ರೂ.ಗಳಾದರೆ, ಲಾಭದ ಪ್ರಮಾಣವೇ 1.65 ಕೋಟಿ ರೂ.ಗಳು! ಹಾಗೆ ನೋಡಿದರೆ ಈ ಐದು ಕಂಪನಿಗಳು ಕಲ್ಲಿದ್ದಲು ನಿಕ್ಷೇಪಗಳನ್ನು ಪಡೆದ ಕಂಪನಿಗಳಲ್ಲಿ ಬಹಳ ಸಣ್ಣವು.

ಸಿಎಜಿ ವರದಿ ದೊಡ್ಡ-ದೊಡ್ಡ ಕಂಪನಿಗಳು ಯುಪಿಎ-2 ಸರಕಾರದಿಂದ ದೇಶದ ಈ ಒಂದು ನೈಸರ್ಗಿಕ ಸಂಪನ್ಮೂಲದ 'ವರದಾನ'ದ ಮೂಲಕ ಗಳಿಸಿದ ಅಪಾತ್ರ ಲಾಭದ ಪ್ರಮಾಣ 1.86 ಲಕ್ಷ ಕೋಟಿ ರೂ. ಎಂದು ಲೆಕ್ಕ ಹಾಕಿರುವುದರಲ್ಲಿ ಅತಿಶಯೋಕ್ತಿಯೇನೂ ಇರಲಿಕ್ಕಿಲ್ಲ ಎಂಬುದರ ಸಂಕೇತ ಈ ಸಿಬಿಐ ದಾಳಿಗಳಲ್ಲೇ ಸಿಗುತ್ತದೆ. ಈ ನಡುವೆ ಯುಪಿಎ-2 ಪ್ರಧಾನ ಮಂತ್ರಿಗಳೂ ಸೇರಿದಂತೆ ಈ ಹಗರಣವನ್ನು ಮುಚ್ಚಿಕೊಳ್ಳಲು ಸಿಎಜಿಯ ಮೇಲೆಯೆ ದಾಳಿಗೆ ಇಳಿದಿರುವುದನ್ನು ಪ್ರತಿಭಟಿಸಿ ಸಿಎಜಿಯಲ್ಲಿ ಕೆಲಸ ಮಾಡುವ ಲೆಕ್ಕ ಪರಿಶೋಧಕರ ಸಂಘಟನೆಗಳು ಸಪ್ಟಂಬರ್ 6 ರಂದು ಪ್ರತಿಭಟನೆ ನಡೆಸಲು ಕರೆ ನೀಡಿವೆ.

ವಾಸ್ತವವಾಗಿ ದೇಶದ ಬೊಕ್ಕಸಕ್ಕೆ ನಷ್ಟವಾಗಿರುವುದು ಸ್ವಯಂವೇದ್ಯ. ಈ ಖಾಸಗಿ ಕಂಪನಿಗಳಿಗೆ ತೈಲ ನಿಕ್ಷೇಪಗಳನ್ನು ಹಂಚಿರುವುದು ಅವರಿಗೆ ಕಲ್ಲಿದ್ದಲು ಪೂರೈಕೆಯಾಗುತ್ತಿರಲಿ ಎಂದು. ಇದರಿಂದ ಅವರಿಗೆ ಕಲ್ಲಿದ್ದಲು ಸಾರ್ವಜನಿಕ ವಲಯದ ಕಲ್ಲಿದ್ದಲು ಕಂಪನಿಗಳ ಬೆಲೆಗಳಿಂತ ಕಡಿಮೆ ಬೆಲೆಗಳಲ್ಲಿ ಸಿಗುವಂತಾಗಿದ್ದರೆ, ಅದರರ್ಥ ಸಾರ್ವಜನಿಕ ವಲಯಕ್ಕೆ ಹೋಗಬೇಕಾಗಿದ್ದ ಹಣ ಈ ಖಾಸಗಿಯವರ ಜೇಬುಗಳಿಗೆ ಹೋಗಿದೆಯೆಂದೇ ಅರ್ಥವಲ್ಲವೇ? ಇದನ್ನು ನಿರಾಕರಿಸುವ ಮೂಲಕ ಯುಪಿಎ ನೇತೃತ್ವದಲ್ಲಿರುವ ಕಾಂಗ್ರೆಸ್ ಪಕ್ಷ ಜನತೆಯ ಬುದ್ಧಿಮತ್ತೆಗೆ ಅವಮಾನ ಮಾಡಿದೆ ಎಂದು ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಅಭಿಪ್ರಾಯ ಪಡುತ್ತಾರೆ.

ಇಲ್ಲಿರುವುದು ದೇಶದ ಬೊಕ್ಕಸಕ್ಕೆ ನಷ್ಟ ಮಾಡಿರುವ ಪ್ರಶ್ನೆಯಷ್ಟೇ ಅಲ್ಲ. ಈ ಸಮಸ್ಯೆ 2004ರಿಂದ ಆರಂಭವಾದುದೂ ಅಲ್ಲ, ನವ-ಉದಾರವಾದಿ ನೀತಿಗಳ ಆರಂಭದೊಂದಿಗೇ ಆರಂಭವಾದ ಪ್ರಶ್ನೆ-1993ರಲ್ಲಿ ಕಲ್ಲಿದ್ದಲು ನಿಕ್ಷೇಪಗಳನ್ನೇ ಖಾಸಗಿ ಕಂಪನಿಯವರ ಸ್ವಂತ ಬಳಕೆಗೆ ಕೊಡುವ ಕ್ರಮವನ್ನು ಆರಂಭಿಸಿದಾಗ ಆರಂಭವಾದ ಪ್ರಶ್ನೆ ಎನ್ನುತ್ತಾರೆ ಪ್ರೊ. ಪಟ್ನಾಯಕ್. ವಾಸ್ತವವಾಗಿ ಇದು ನವ-ಉದಾರವಾದಿ ತತ್ವಗಳನ್ನು ಅಪ್ಪಿಕೊಂಡ ಕೇಂದ್ರದ ಎಲ್ಲ ಸರಕಾರಗಳೂ ದೇಶದ ಸಂವಿಧಾನಕ್ಕೆ ಮಾಡಿರುವ ವಂಚನೆ ಕೂಡ ಎಂದು ಅವರು ವಿಶ್ಲೇಷಿಸುತ್ತಾರೆ. ಸ್ವತಃ ನವ-ಉದಾರವಾದದ ಮಾತುಗಳು ಎಷ್ಟು ವಿಶ್ವಸನೀಯ ಎಂಬ ಇನ್ನೊಂದು ಪ್ರಶ್ನೆಯೂ ಇಲ್ಲಿದೆ. ಸ್ಪರ್ಧೆಗೆ ಅವಕಾಶ ಕಲ್ಪಿಸಿ ತಾನು ಎಲ್ಲ ಉದ್ಯಮಿಗಳಿಗೆ ಸಮಾನ ಅವಕಾಶ ಕಲ್ಪಿಸಿಕೊಡುವುದಾಗಿ ಅದು ಹೇಳಿಕೊಳ್ಳುತ್ತದೆ. ಆದರೆ ಇಲ್ಲಿ ನಾವು ನೋಡುತ್ತಿರುವುದು ಆಳುವ ಮಂದಿಗೆ ಬೇಕಾದ ಕೆಲವರಿಗೆ ಮಾತ್ರ ದೇಶದ ಸಂಪನ್ಮೂಲಗಳನ್ನು ವರ್ಗಾಯಿಸುವ ಪ್ರಕ್ರಿಯೆ. ದೇಶದ ಬೊಕ್ಕಸಕ್ಕೆ ನಷ್ಟದ ಬಗ್ಗೆ ಮಾತಾಡುವಾಗ ನಾವು ಈ ಅಂಶಗಳನ್ನೂ ಉಪೇಕ್ಷಿಸಲಾಗದು ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್.

ಅಂಬಾನಿಗಳ ಬಾಕಿ ವಸೂಲಿ ಇಲ್ಲ, ಜತೆಗೆ ಅನಗತ್ಯ 'ಸಬ್ಸಿಡಿ'ಗಳು!

ಯುಪಿಎ-2 ಪ್ರಧಾನ ಮಂತ್ರಿಗಳೂ ಸೇರಿದಂತೆ ಆಳುವ ವರ್ಗಗಳ ಕೆಂಗಣ್ಣಿಗೆ ಗುರಿಯಾಗಿರುವ ಸಿಎಜಿಯ ಮತ್ತೊಂದು ವರದಿ ಈ ಸರಕಾರದ ಅಡಿಯಲ್ಲಿ ದೊಡ್ಡ-ದೊಡ್ಡ ಬಂಡವಾಳಿಗರು ಪಡೆಯುತ್ತಿರುವ ಬಕ್ಷೀಸುಗಳ ಇನ್ನೊಂದು ಉದಾಹರಣೆಯನ್ನು ದೇಶದ ಮುಂದಿಟ್ಟಿದೆ. ಭಾರತದ ಅನಿಲ ಪ್ರಾಧಿಕಾರ(ಗೇಲ್) ಖಾಸಗಿ ವಿದ್ಯುತ್ ಉತ್ಪಾದಕರಿಗೆ ಸಬ್ಸಿಡಿ ದರಗಳಲ್ಲಿ ಅನಿಲ ಪೂರೈಕೆ ಮಾಡಿ ರೂ.246 ಕೋಟಿ ರೂ.ಗಳಷ್ಟು 'ಅನಗತ್ಯ' ಪ್ರಯೋಜನಗಳನ್ನು ಒದಗಿಸಿದೆ, ಅಂಬಾನಿಗಳ ರಿಲಯಂಸ್ ಇಂಡಸ್ಟ್ರೀಸ್‌ನಿಂದ ಬರಬೇಕಾದ ಹಣವನ್ನು ವಸೂಲಿ ಮಾಡುವಲ್ಲಿ ವಿಫಲವಾಗಿದೆ ಎಂದು ಈ ವಾರ ಸಂಸತ್ತಿನಲ್ಲಿ ಮಂಡಿಸಿರುವ ಭಾರತದ ಮಹಾ ಲೆಕ್ಕಪರಿಶೋಧಕರ ಕಚೇರಿ (ಸಿಎಜಿ)ಯ ವರದಿ ಬಲವಾಗಿ ಟೀಕಿಸಿದೆ.

ವಿದ್ಯುತ್ ಉತ್ಪಾದಿಸುವ ಖಾಸಗಿ ಕಂಪನಿಗಳು ತಮ್ಮ ಬಳಕೆದಾರರಿಗೆ ವಾಣಿಜ್ಯ ದರಗಳಲ್ಲೇ ವಿದ್ಯುತ್ ಪೂರೈಸುತ್ತಿದ್ದರೂ ಗೇಲ್‌ನಿಂದ ಸಬ್ಸಿಡಿ ದರಗಳಲ್ಲೇ ಅನಿಲ ಪಡೆಯುತ್ತಿವೆ. ಇದು ಪೆಟ್ರೋಲಿಯಂ ಇಲಾಖೆಯ ನಿರ್ದೇಶನಗಳ ಉಲ್ಲಂಘನೆ. ಇದರಿಂದ ಈ ಖಾಸಗಿಯವರಿಗೆ 246 ಕೋಟಿ ರೂ.ಗಳ ಅನಗತ್ಯ ಸಬ್ಸಿಡಿ ಒದಗಿಸಿದಂತಾಗಿದೆ. ಅಲ್ಲದೆ ರಸಗೊಬ್ಬರ ಉತ್ಪಾದನೆಗೆ ಸಬ್ಸಿಡಿ ದರಗಳಲ್ಲಿ ಅನಿಲ ಪಡೆಯುವ ಕಂಪನಿಗಳು ಅದನ್ನು ಬೇರೆ ಉತ್ಪನ್ನಗಳಿಗೆ ಬಳಸುತ್ತಿದ್ದರೂ ಅದನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿಲ್ಲ ಎಂದು ವರದಿ ಹೇಳಿದೆ.



ವೇದರಾಜ ಎನ್.ಕೆ.

ರಿಲಯಂಸ್ ಇಂಡಸ್ಟ್ರೀಸ್ 2008ರಲ್ಲಿ ತನ್ನ ಪಾಲಿಗಿಂತ ಹೆಚ್ಚಿನ ಅನಿಲವನ್ನು ಬಳಸಿಕೊಂಡದ್ದಕ್ಕೆ ಅದರಿಂದ ನಿಯಮಗಳ ಪ್ರಕಾರ 29.78 ಕೋಟಿ ರೂ.ಗಳ ದಂಡ ವಸೂಲಿ ಮಾಡಬೇಕಿತ್ತು. ಅದು ಅದನ್ನು ಪಾವತಿಸಲು ನಿರಾಕರಿಸಿತು, ಇಂದಿನ ವರೆಗೂ ಗೇಲ್ ಅದನ್ನು ವಸೂಲಿ ಮಾಡುವ ಗೋಜಿಗೆ ಹೋಗಿಲ್ಲ!

ಅತ್ತ ಸಾಮಾನ್ಯ ಬಳಕೆದಾರರಿಗೆ ಒದಗಿಸುವ ಪೆಟ್ರೋಲಿಯಂ ಉತ್ಪನ್ನಗಳಿಗಾಗಿ ತೈಲ ಮಾರಾಟ ಕಂಪನಿಗಳಿಗೆ 'ಸಬ್ಸಿಡಿ' ನೀಡಲು ತನ್ನ ಬಳಿ ಹಣ ಇಲ್ಲ, ಅದರಿಂದಾಗಿ ಮುಂದಿನ ವಾರ ಪೆಟ್ರೋಲ್ ದರಗಳಲ್ಲಿ 4ರೂ., ಡೀಸೆಲ್ ದರಗಳಲ್ಲಿ 5ರೂ. ಮತ್ತು ಅಡುಗೆ ಅನಿಲದಲ್ಲಿ 50ರೂ. ಹೆಚ್ಚಳ ಮಾಡಬೇಕಾದೀತು ಎಂದು ಅದರ ವಕ್ತಾರರು ಹೇಳುತ್ತಿರುವುದನ್ನು ಇದರೊಂದಿಗೆ ಹೋಲಿಸಿ ನೋಡಿ!

'ಮರ್ಯಾದಾ ಹತ್ಯೆ'ಗಳ ಪ್ರಶ್ನೆ : ಇನ್ನೊಂದು ಯುಪಿಎ-2 ವಚನಭಂಗ

'ಮರ್ಯಾದಾ ಹತ್ಯೆ'ಗಳ ಪ್ರಶ್ನೆಯನ್ನು ಪರಿಶೀಲಿಸಲೆಂದು ಯುಪಿಎ-2 ಸರಕಾರ ನೇಮಿಸಿದ್ದ 'ಮಂತ್ರಿಗಳ ಗುಂಪು'(ಜಿಒಎಂ) ಬರ್ಖಾಸ್ತುಗೊಂಡಿದೆ. 2010ರಲ್ಲಿ 'ಮರ್ಯಾದೆ'ಯ ಹೆಸರಲ್ಲಿ ಹತ್ಯೆಗಳು, ಅವುಗಳಲ್ಲಿ 'ಖಾಪ್ ಪಂಚಾಯತು'ಗಳ ಪಾತ್ರದ ಪ್ರಶ್ನೆ ಇಡೀ ದೇಶದ ಗಮನ ಸೆಳೆದಿದ್ದಾಗ ಉಂಟಾದ ಒತ್ತಡದ ಸಂದರ್ಭದಲ್ಲಿ ಆಗಿನ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಈ ಗುಂಪನ್ನು ರಚಿಸಲಾಗಿತ್ತು. ಈಗ ಅವರು ರಾಷ್ಟ್ರಪತಿಗಳಾಗಿ ಯುಪಿಎ-2 ಸಂಪುಟದಿಂದ ಹೊರಗೆ ಹೋಗಿರುವುದನ್ನೇ ನೆಪ ಮಾಡಿಕೊಂಡು ಈ ಜಿಒಎಂನ್ನು ಕಳಚಿ ಹಾಕಲಾಗಿದೆ. ಈ ಮೂಲಕ ಯುಪಿಎ-2 ಸರಕಾರ ತನ್ನ ಇನ್ನೊಂದು ವಚನಭಂಗ ಮಾಡಿದೆ.

'ಮರ್ಯಾದೆ'ಯ ಹೆಸರಲ್ಲಿ ನಡೆಸುವ ಈ ಘೋರ ಕೃತ್ಯಗಳನ್ನು ತಡೆಯಲು ಒಂದು ಸಮಗ್ರ ಕಾನೂನಿನ ಅಭಾವವನ್ನು ಸಂಸತ್ತಿನಲ್ಲಿ ಈ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿದ ಎಲ್ಲಾ ರಾಜಕೀಯ ಪಕ್ಷಗಳ ಸದಸ್ಯರು ಗಂಭೀರವಾಗಿ ಗುರುತಿಸಿದಾಗ, ಇಂತಹ ಒಂದು ಶಾಸನವನ್ನು ರೂಪಿಸಲಾಗುವುದು ಎಂದು ಯುಪಿಎ-2 ಸರಕಾರ ಆಗ ದೇಶದ ಜನತೆಗೆ, ಅದರಲ್ಲೂ ಯುವಜನತೆಗೆ ವಚನ ನೀಡಿತ್ತು. ಇಲ್ಲಿ ಒಮ್ಮತದ ಅಭಾವದ ನೆಪವಿಲ್ಲದಿದ್ದರೂ, ಇದುವರೆಗೂ ಅಂತಹ ಒಂದು ಶಾಸನವನ್ನು ರೂಪಿಸುವಲ್ಲಿ ಅದು ವಿಫಲವಾಗಿದೆ. ಆದರೆ ಅದಕ್ಕಾಗಿ ರಚಿಸಿದ ಮಂತ್ರಿಗಳ ಗುಂಪನ್ನು ಸದ್ದಿಲ್ಲದೆ ವಿಸರ್ಜಿಸಲಾಗಿದೆ.

'ಮರ್ಯಾದಾ ಹತ್ಯೆ' ಇನ್ನಷ್ಟು ಹರಡುತ್ತಿರುವ ಸಂದರ್ಭದಲ್ಲಿ ಯುಪಿಎ-2 ಸರಕಾರದ ಇಂತಹ ಕ್ರಮದ ಬಗ್ಗೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ತೀವ್ರ ಆತಂಕ ವ್ಯಕ್ತಪಡಿಸಿದೆ. ಎಐಡಿಡಬ್ಲ್ಯುಎ ಈ ಕುರಿತು ಒಂದು ಸಮಗ್ರ ಶಾಸನದ ಕರಡು ತಯಾರಿಸಿದ್ದು, ಸ್ವತಃ ಇಂತಹ ಒಂದು ಶಾಸನವನ್ನು ರೂಪಿಸಲಾಗದ ಯುಪಿಎ-2 ಸರಕಾರ ಈ ಕರಡನ್ನು ಪರಿಶೀಲಿಸಲು ಕೂಡ ಸಿದ್ಧವಿಲ್ಲ. ಈ ಪ್ರಶ್ನೆಗೆ ಒಂದು ಕಾನೂನಿನ ಪರಿಹಾರವನ್ನು ಒದಗಿಸುವಲ್ಲಿ ಇನ್ನಷ್ಟು ವಿಳಂಬ ಮಾಡದಂತೆ ಆಗ್ರಹಿಸಲು ಎಐಡಿಡಬ್ಲ್ಯುಎ ಇತರ ಮಹಿಳಾ ಸಂಘಟನೆಗಳ ಜೊತೆಗೂಡಿ ಯುಪಿಎ-2 ಕಾನೂನು ಮಂತ್ರಿಗಳನ್ನು ಭೇಟಿ ಮಾಡಲು ನಿರ್ಧರಿಸಿದೆ.

ಪುಟ 14ಕ್ಕೆ

ಸಶಕ್ತಿಕರಣ ಎಂದರೆ ಯುವಜನರ ಸರ್ವತೋಮುಖ ಅಭಿವೃದ್ಧಿ

ಪುಟ 8 ರಿಂದ

ಮಾತನಾಡುತ್ತಲೇ ಇದ್ದಾರೆ. ಆದರೆ ಆ ದೆಶೆಯಲ್ಲಿ ಏನೊಂದು ಗಟ್ಟಿಯಾದ ಕ್ರಮಗಳನ್ನು ಕೈಗೊಂಡಿಲ್ಲ. ದುರಂತವೆಂದರೆ ಇದುವರೆಗೂ ಒಂದು 'ರ್ರಾಯ ಯುವ ನೀತಿ'ಯೆಂಬುದೇ ಇಲ್ಲ. ಹಿಂದೆ ವಿ.ಪಿ.ಸಿಂಗ್ ಸರ್ಕಾರದ ಸಂದರ್ಭದಲ್ಲಿ ಸಿಪಿಐ(ಎಂ) ಒತ್ತಡದಿಂದಾಗಿ ಡಿವೈಡಿಫ್‌ಐ ಪ್ರಧಾನಕಾರ್ಯದರ್ಶಿಯಾಗಿದ್ದ ಸಂಸದ ಮುಹ್ಮದ್ ಸಲೀಂರವರ ಮುತುವರ್ಜಿಯಿಂದ ಕರಡು ಸಿದ್ದತೆ ಬಿಟ್ಟರೆ ಬೇರಾವುದೇ ಪ್ರಯತ್ನಗಳೇ ಇಲ್ಲ. ಈಗಲೂ ಕರ್ನಾಟಕದ ಬಿಜೆಪಿಯು ಯುವನೀತಿಯ ಕರಡು ಸಿದ್ದಗೊಳಿಸಿದ್ದು ಅದು ಸಂಘ ಪರಿವಾರದ ಅಜೆಂಡಾಕ್ಕೆ ಅನುಗುಣವಾಗಿ ಯುವಜನರನ್ನು ಬಳಸುವ ಅಂಶಗಳಿಗೆ ಒತ್ತು ನೀಡಿದೆಯಲ್ಲದೇ ದೇಶದ ಯುವಜನತೆಯು ತಮ್ಮ ವಾಸ್ತವವನ್ನು ಏದುರಿಸಿ ಮುಂದೆ ಸಾಗಬಲ್ಲಂತಹ ಪ್ರತಿಪಾದನೆ, ಕಾಳಜಿ ಇಲ್ಲವಾಗಿದೆ. ಕೇಂದ್ರ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷಗಳಿಗೆ ಕಣ್ಣೋಟ, ಅದರ ಅಗತ್ಯ ಕಾಣದಾಗಿದೆ. ಇಂದು ಕಾಂಗ್ರೇಸ್, ಬಿಜೆಪಿಯಂತಹ ಬಹುತೇಕ ಎಲ್ಲಾ ಬಂಡವಾಳಶಾಹಿ ಪಕ್ಷಗಳಿಗೆ ಯುವಜನರೆಂದರೆ ತಮ್ಮ ಬಾಲಂಗೋಚಿಗಳಂತೆ ಭಾವಿಸಿ ಅವರ ಸ್ಥಾಪಿತ ಹಿತಾಶಕ್ತಿಗಳಿಗೆ, ರಾಜಕೀಯ ಉದ್ದೇಶಗಳಿಗೆ ಅಧಿಕಾರಕ್ಕೆ ಬರಲು ಬಳಸುವಂತವರಾಗಿದ್ದಾರೆ. 'ಯುವಜನರ ಸಶಕ್ತೀಕರಣ' ಎಂಬುದು ಅವರ ವರ್ತನೆ ಸ್ವಭಾವವನ್ನು ಅಧಿಕಾರದ ಆತ್ಮವಿಶ್ವಾಸವನ್ನು, ನಿರ್ಧಾರ ತೆಗೆದುಕೊಳ್ಳುವ ಶಕ್ತಿಯನ್ನು ಸೃಸಬೇಕು. ಬಹುಭಾಷೆ, ಸಂಸ್ಕ್ರತಿ, ಹಲವು ವೈವಿಧ್ಯತೆಯ ಭಾರತದಲ್ಲಿ ಎಲ್ಲಾ ಜನಾಂಗಗಳೊಂದಿಗೆ ತೊಡಗುವ, ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಭಾಗಿಯಾಗಿ ಬಲಗೊಳಿಸುವುದು ಸಾಧ್ಯವಾಗಬೇಕು. ಮುಖ್ಯವಾಗಿ ಗಂಡು ಹೆಣ್ಣು ಎಂಬ ಭೇದವಿಲ್ಲದೆ ಲಿಂಗಸಮಾನತೆ, ನ್ಯಾಯ ಸಾಧನೆ, ದೃ ಬೆಳೆಸಬೇಕು. ಜಾತಿ ಧಾರ್ಮಿಕ ಸಂಕುಚಿತತೆ, ಹಿಂಸೆ ಅಪರಾಧೀಕರಣದಿಂದ ದೂರವಿರುವಂತಾಗಬೇಕು. ಅದು ಶಿಕ್ಷಣ, ತರಬೇತಿ, ಆರೋಗ್ಯ, ಪರಿಸರ ಕಾಳಜಿ, ಮನೋರಂಜನೆ, ಕ್ರೀಡೆ, ಕಲೆ, ಸಾಂಸ್ಕೃತಿಕತೆಯ ಸಮಾನ ?ಅಬಿವೃದ್ಧಿ ಹೊಂದುವಂತಾಗಬೇಕು. ದೇಶ ಪ್ರೇಮದ ಹೆಸರಿನಲ್ಲಿ ಅನ್ಯ ದೇಶಗಳನ್ನು ದ್ವೇಶಿಸುವಂತದಾಗದೇ, ನಮ್ಮ ಜನತೆಯ ಸಾರ್ವಭೌಮತೆ, ಸಮಾನತೆ ಎತ್ತಿಹಿಡಿಯುವ, ಎಲ್ಲಾ ಜನತೆಯನ್ನು ಒಟ್ಟುಗೂಡಿಸುವ ವಿಶಾಲ ನೆಲೆಯ ದೇಶಪ್ರೇಮ ಬ್ರಾತೃತ್ವ ಬೆಳೆಸುವಂತಾಗಬೇಕು.

ಉದಾರೀಕರಣ ಜಾಗತೀಕರಣದ ಬಹುಮುಖಿ ಧಾಳಿಗಳಿಂದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ರಂಗಗಳು ತತ್ತರಿಸುತ್ತಿವೆ. ಅದರ ಎಲ್ಲಾ ದುಷ್ಪರಿಣಾಮಗಳು ಯುವಜನರನ್ನು ಭಾಧಿಸುತ್ತಿವೆ. ಇದು ಆಳುವವರಿಗೆ ಗೊತ್ತಿದ್ದರೂ ಮುಂದುವರಿಸುತ್ತಾರೆ. ಯುವಜನರು ಅತೀ ಹೆಚ್ಚಿನ ನಿರುದ್ಯೋಗ, ಅನಕ್ಷರತೆ, ಜೀವನದ ಅಭದ್ರತೆ ಅನುಭವಿಸುತ್ತಿದ್ದಾರೆ. ಜಾತೀಯ ಮತೀಯ, ಶಕ್ತಿಗಳು ಪ್ರಜಾಪ್ರಭುತ್ವ ಮೌಲ್ಯಗಳಿಗೆ ಭಾರೀ ಬೆದರಿಕೆ ಒಡ್ಡುತ್ತಿವೆ. ಕೋಮುವಾದಿ ಕೃತ್ಯಗಳಿಗೆ ಬಳಸಲಾಗುತ್ತಿದೆ. ಮತ್ತು ಭಾರತವನ್ನು ಛಿದ್ರಗೊಳಿಸಿ ದುರ್ಬಲಗೊಳಿಸಿ ಮತ್ತೆ ತಮ್ಮ ವಸಾಹತು ಮಾಡಿಕೊಳ್ಳುವ ಸಾಮ್ರಾಜ್ಯಶಾಹಿಗಳು ಸತತವಾಗಿ ಪ್ರಯತ್ನಿಸುತ್ತ ಯುವಜನರನ್ನು ಎತ್ತಿ ಕಟ್ಟಿ ಬಳಸಿಕೊಳ್ಳುತ್ತಿದ್ದಾರೆ. ದೇಶದ ಮಹಾನ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅತ್ಯಂತ ಉಜ್ವಲ ಪಾತ್ರವಹಿಸಿ ಬ್ರಿಟೀಶ್ ವಸಾಹತುಶಾಹಿಗಳನ್ನು ಹೊರಗಟ್ಟಿದ ತ್ಯಾ ಬಲಿದಾನಗಳ ಇತಿಹಾಸವಿರುವ ಭಾರತ ಯುವಜನತೆ ಇಂದು ಅಮೇರಿಕಾ, ಇಂಗ್ಲೇಂಡ ಜರ್ಮನಿ ಮುಂತಾದ ಸಾಮ್ರಾಜ್ಯಶಾಹಿಗ ಸಮರ್ಥಕರಾಗುವಂತಹ ವಾತಾವರಣವನ್ನು ಸೃಸಲಾಗಿದೆ. ಇದನ್ನು ಎದುರಿಸಿ ದೇಶ ಸಾರ್ವಭೌಮತೆ ? ಉಳಿಸಿಕೊಂಡು ಶೋಷಣೆ ಅಸಮಾನತೆ ವಿರುದ್ಧ ಸಮಾನತೆಗಾ ಹೋರಾಡುವ ಚೈತನ್ಯ ಯುವಜನರ ತರಬೇಕಾಗಿದೆ, ಇಂತಹ ಮನೋಭಾವವನ್ನು ಬೆಳೆಸಬೇಕಾಗಿದೆ. ಈ ಹಿನ್ನಲೆಯಲ್ಲಿ ಶಿಕ್ಷಣ ಉದ್ಯೋಗ, ಸಮಾನತೆಗಾಗಿ ವಿಶಾಲ ಯು ಆಂದೋಲನ ಬೆಳೆಯಬೇಕಾಗಿದೆ. ದೈನಂದಿ ಪ್ರಶ್ನೆಗಳಾದ ನಿರುದ್ಯೋಗ, ಅನಕ್ಷರತೆ, ಅಂಧಶ್ರದ್ಧೆ ವರದಕ್ಷಿಣೆ, ದೌರ್ಜನ್ಯಗಳಂತಹ ಪ್ರಶ್ನೆಗಳ ವಿರುದ್ಧ ಕೃ-ಕೈಗಾರಿಕಾ ಅಭಿವೃದ್ಧಿಗಾ ಹೋರಾಡುವಂತಾಗಬೇಕಿದೆ. ಅಂತಹ ವಿಶಾ ಐಕ್ಯ, ಪ್ರಗತಿಪರ, ಪ್ರಗತಿಪರ, ಪ್ರಜಾಸತ್ತಾತ್ಮಕ ಯು ಆಂದೋಲನದ ಮುಂದೆ ಸಾಗುವಿಕೆ ಇಂದಿ ಅಗತ್ಯ.

ಯುಪಿಎ ದರ್ಬಾರ್

ಲೈಂಗಿಕ ಕಿರುಕುಳ ಮಸೂದೆಗೆ 15 ವರ್ಷಗಳ ನಂತರ ಲೋಕಸಭೆಯ ಅಂಗೀಕಾರ

ಪುಟ 13 ರಿಂದ

ದೇಶದ ಸರ್ವೋಚ್ಚ ನ್ಯಾಯಾಲಯ 1997ರಲ್ಲಿ 'ವಿಶಾಖಾ ಮಾರ್ಗ ನಿರ್ದೇಶನಗಳು' ಎಂದು ಹೆಸರಾದ ನಿರ್ದೇಶನಗಳನ್ನು ಕೊಟ್ಟ 15 ವರ್ಷಗಳ ನಂತರ, ಸಪ್ಟಂಬರ್ 3ರಂದು ಲೋಕಸಭೆ ದುಡಿಮೆಯ ಸ್ಥಳಗಳಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ(ತಡೆ, ನಿಷೇಧ ಮತ್ತು ದೂರು ಪರಿಹಾರ) ಮಸೂದೆಯನ್ನು ಅಂಗೀಕರಿಸಿದೆ. ಆದರೆ ಹೀಗೆ ಮಾಡುವಾಗಲೂ ಮಹಿಳಾ ಸಂಘಟನೆಗಳು, ಪ್ರಜಾಪ್ರಭುತ್ವವಾದಿಗಳು, ಸ್ವತಃ ಸಂಸತ್ತಿನ ಸ್ಥಾಯೀ ಸಮಿತಿ ಸೂಚಿಸಿದ ಕೆಲವು ಸಲಹೆಗಳನ್ನು ಉಪೇಕ್ಷಿಸಲಾಗಿದೆ.

ಈ ಮಸೂದೆ ಲೈಂಗಿಕ ಕಿರುಕುಳವೆಂದರೆ ಏನು ಎಂಬ ಬಗ್ಗೆ ಒಂದು ಸಮಗ್ರ ನಿರೂಪಣೆ ಕೊಟ್ಟಿದೆ, ಎಲ್ಲ ಕಚೇರಿಗಳಲ್ಲಿ ಮತ್ತು ಇತರ ದುಡಿಮೆಯ ಸ್ಥಳಗಳಲ್ಲಿ ಆಂತರಿಕ ದೂರು ಪರಿಹಾರ ವ್ಯವಸ್ಥೆ ಏರ್ಪಡಿಸುವುದನ್ನು ಕಡ್ಡಾಯವಾಗಿಸಿದೆ, ಈ ಕಾನೂನು ಪಾಲಿಸದಿರುವುದನ್ನು ಶಿಕ್ಷಾರ್ಹ ಅಪರಾಧವಾಗಿಸಿದೆ. ಆದರೆ ಇನ್ನೂ ಹಲವು ಗಂಭೀರ ಕೊರತೆಗಳನ್ನು ಸರಿಪಡಿಸಿಲ್ಲ. ಉದಾ: ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರಲ್ಲಿ ದೊಡ್ಡ ವಿಭಾಗವಾದ ಕೃಷಿ ಕೂಲಿಕಾರರನ್ನು ಇದರ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಮೀನುಗಾರಿಕೆ, ಅರಣ್ಯ, ಕಟ್ಟಡ, ರಸ್ತೆ ಇತ್ಯಾದಿಗಳ ನಿರ್ಮಾಣ ಮುಂತಾದೆಡೆಗಳಲ್ಲಿ ದುಡಿಯುವ ಮಹಿಳೆಯರೂ ಈ ಶಾಸನದ ವ್ಯಾಪ್ತಿಯಲ್ಲಿ ಬಂದಿಲ್ಲ. ಅಸಂಘಟಿತ ವಲಯವನ್ನು ಇದರ ವ್ಯಾಪ್ತಿಗೆ ತಂದಲ್ಲಿಯೂ ದುಡಿಮೆಗಾರರ ಸಂಖ್ಯೆಯ ಮೇಲೆ ಮಿತಿ ಹಾಕಲಾಗಿದೆ(ಹತ್ತು).

ಅಲ್ಲದೆ, 'ಹಗೆ ತೀರಿಸಿಕೊಳ್ಳುವ ದೂರುದಾರರು' ಎಂಬ ಒಂದು ಅಂಶವನ್ನು ಸೇರಿಸಿ ಇಂತಹ ದೂರುದಾರರಿಗೆ ಶಿಕ್ಷೆ ವಿಧಿಸುವ ಅಂಶವನ್ನು ಸೇರಿಸಲಾಗಿದೆ. ದೂರುದಾರರನ್ನು ಯಾವುದೇ ರೀತಿಯಲ್ಲಿ ಬಲಿಪಶು ಮಾಡಬಾರದು ಎಂದು ಸುಪ್ರಿಂ ಕೋರ್ಟ್ ಮಾರ್ಗನಿರ್ದೇಶನಗಳು ಹೇಳಿದ್ದರೂ, ಸಂಸತ್ತಿನ ಸ್ಥಾಯೀ ಸಮಿತಿ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದರೂ, ಅವನ್ನೆಲ್ಲ ಉಪೇಕ್ಷಿಸಿ ಈ ಅಂಶವನ್ನು ಸೇರಿಸಿ ಈ ಮಸೂದೆಯ ಉದ್ದೇಶವನ್ನೇ ವಿಫಲಗೊಳಿಸಿದಂತಾಗುತ್ತದೆ ಎಂದು ಮಹಿಳಾ ಸಂಘಟನೆಗಳು ಟೀಕಿಸಿವೆ. ಇಷ್ಟೇ ಅಲ್ಲ, ಈ ಮಸೂದೆ ಆಪಾದಿತನ ವಿವರಗಳನ್ನು ಗೋಪ್ಯವಾಗಿಟ್ಟು ಆತನನ್ನು ರಕ್ಷಿಸುವ ಅಂಶವನ್ನು ಹೊಂದಿದೆ. ದೂರುದಾರರಿಗೇನೋ ಇಂತಹ ರಕ್ಷಣೆ ಬೇಕು, ಆದರೆ ಆಪಾದಿತನಿಗೂ ಇಂತಹ ರಕ್ಷಣೆ ಕೊಡುವ ಅಗತ್ಯವೇನಿಲ್ಲ, ಹಾಗೆ ಮಾಡಿದರೆ ಇಂತಹ ಅಪರಾಧಗಳು ಬೆಳಕಿಗೂ ಬರಲಾರವು ಎಂದೂ ಎಐಡಿಡಬ್ಲ್ಯುಎ(ಜನವಾದಿ ಮಹಿಳಾ ಸಂಘಟನೆ} ಹೇಳಿದೆ. ಈ ಎಲ್ಲ ಲೋಪ-ದೋಷಗಳನ್ನು ಸರಿಪಡಿಸಿ ರಾಜ್ಯಸಭೆಯಲ್ಲಿಯೂ ಇದರ ಅಂಗೀಕಾರ ವಿಳಂಬವಿಲ್ಲದೆ ಆಗಬೇಕು ಎಂದು ಅದು ಆಗ್ರಹಿಸಿದೆ. ●

ಮಾನವ ಧರ್ಮ

ಪವಿತ್ರ ಮನುಷ್ಯತ್ವ ಒಂದಿರಲು ಸಾಕು
ಮಾನ ಒಡೆವ ಧರ್ಮಗಳು ಯಾತಕ್ಕೆ ಬೇಕು?
ನೆತ್ತರಿನ ಹೊಳೆ ಹರಿಯೆ ಕಾರಣವು ಆದ
ಯಾವ ಧರ್ಮವು ಕೂಡ ನಮಗಿಂದು ಬೇಡ.

ಪಾಪದ ಕೊಡ

ದುರ್ಜನರ ಕೊಲ್ಲುವವ ಬರನೇಕೆ ಎಂದು
ಕೇಳಿದರೆ ಏನೇನೊ ಹೇಳುವರೂ ಇಂದು
ಸ್ವಿಸ್ ಬ್ಯಾಂಕ್ ಮತ ಗುಡಿಯು ಆದರೂ ಭರ್ತಿ
ಪಾಪದ ಕೊಡ ತುಂಬಿಲ್ಲ ಅನ್ನುವರು ಪೂರ್ತಿ!

-ವಿಡಂಬಾರಿ

ಜಗದಗಲಕ್ಕೂ ಯುವಜನತೆಯ....

ಪುಟ 8 ರಿಂದ

200 ನಗರಗಳಿಗೆ ಹಬ್ಬಿದವು. ಸಿಡ್ನಿಯಿಂ ಸಿಯಾಟಲ್ ವರೆಗೆ ಜಗದಗಲಕ್ಕೂ 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಹರಡಿತು. ಅಮೇರಿಕ ಸರ್ಕಾರದ ದಮನಕಾರಿ ಕ್ರಮಗಳು ಮ ಚಳಿಗಾಲದಿಂದ ಚಳುವಳಿಯ ಕಾ ಪಾಲ್ಗೊಳ್ಳುವಿಕೆ ಕಡಿಮೆಯಾದರೂ ನಿಂತಿಲ್ಲ 'ನಾವು 99%' ಎಂಬ ಅಂತಹುದೇ ಚಳುವ ಇದಕ್ಕೆ ಸೇರಿಕೊಂಡಿದೆ.

* ಚಿಲಿಯಿಂದ ಅಗಸ್ಟ್ 2011 ರಲ್ಲಿ ಆರಂಭವಾ ವಿದ್ಯಾರ್ಥಿ-ಯುವಜನ ಶಿಕ್ಷಣದ ಫೀಸು ಹೆಚ್ಚ ನಿರುದ್ಯೋಗ ಸವಲತ್ತು ಮತ್ತಿತರ ಸಾಮಾಜಿಕ ಭದ್ರ ಕ್ರಮಗಳ ಕಡಿತದ ವಿರುದ್ಧ ಭಾರೀ ಪ್ರತಿಭಟ ನಡೆಸಿದರು. ಬ್ರಿಟನ್, ಫ್ರಾನ್ಸ್, ಇಟಲಿ, ಸ್ಪೈನ್, ಗ್ರೀಸ್ ಪೋರ್ಚುಗಲ್ ಗಳಲ್ಲಿ ಸಾರ್ವತ್ರಿಕ ಮುಷ್ಕ ಬಹಿಷ್ಕಾರ, ಮುಂತಾದ ರೂಪಗಳಲ್ಲಿ ನಡೆಯಿತ

* ಲ್ಯಾಟಿನ್ ಅಮೆರಿಕದಲ್ಲಿ ನವ-ಉದಾರವಾ ವಿರುದ್ಧದ ರಾಜಕೀಯ ಹೋರಾಟದಲ್ಲ ಯುವಜನತೆ ದೊಡ್ಡ ಪ್ರಮಾಣದ ಭಾಗವಹಿಸಿದ್ದಾರೆ. ಎರಡು ಮೂರು ದೇಶಗಳನ್ನು ಬಿಟ್ಟರೆ ಇತರ ಎಲ್ಲಾ ದೇಶಗಳಲ್ಲಿ ಎಡಪಂಥೀಯ ಸರ್ಕಾರಗಳನ್ನು ಅಧಿಕಾರಕ್ಕೆ ತರುವಲ್ಲಿ ರಾಜಕೀಯ ಪ್ರಜ್ಞಾವಂತ ಯುವಕರ ಪಾತ್ರ ಕಡಿಮೆಯದ್ದ ವೆನೆಜುವೆಲಾದಲ್ಲಿ 1998-2008 ರ ನಡು ನಿರುದ್ಯೋಗ ಪ್ರಮಾಣ ಶೇ.11.3 ರಿಂದ ಶೇ.7. ಇಳಿಸಿದ ನೀತಿಗಳು ಇರುವ ಸರ್ಕಾರಗಳು ಬೇಕ ಎಂಬ ಯುವಜನತೆ ಪಣ ತೊಟ್ಟಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕರ್ನಾಟಕದಲ್ಲಿ ಅಪೌಷ್ಟಿಕತೆ: ಆಳುವವರು ಮನಗಾಣದ ಭೀಕರ ಮುಖ

ಪುಟ 12 ರಿಂದ

ಅಪೌಷ್ಟಿಕತೆಯ ಬಗೆಗಿನ ಚರ್ಚೆಗಳ ತೀವ್ರತೆ ಹೆಚ್ಚಾದ ಮೇಲೆ ಇಲಾಖೆ ತೀರ್ಮಾನಿಸಿದೆ.

ಅಂದರೆ ಒಂದು ಮಗುವಿಗೆ ದಿನಕ್ಕೆ ಒಂದು ಸಮಯಕ್ಕೆ 22 ರಿಂದ 23 ಗ್ರಾಂ ಮಾತ್ರ, ಇದರಲ್ಲಿ ಎಲ್ಲ ಬಗೆಯ ಪೋಷಕಾಂಶಗಳಿರುವ ಆಹಾರ ದೊರಕುತ್ತದೆಯೇ ಎಂಬ ಅಂಶ ಮಹತ್ತರವಾಗಿದೆ.

ಐಸಿಡಿಎಸ್ ಮಾರ್ಗದರ್ಶಿ ಸೂಚನೆ ಪ್ರಕಾರ "ಆಹಾರ ಪದಾರ್ಥಗಳನ್ನು ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಿ ಅಲ್ಲಿಯ ಮಕ್ಕಳು ಬಯಸುವ ರೀತಿಯಲ್ಲಿ ಅಲ್ಲಿಯೇ ಅಡುಗೆ ಮಾಡಿ ಬಡಿಸಬೇಕು." ಆದರೆ ನಮ್ಮ ರಾಜ್ಯ ಸರ್ಕಾರ ಈ ವಿಧಾನವನ್ನು ಬದಲಿಸಿ ರೇಡಿಮೇಡ್ ಆಹಾರ ಪೂರೈಸಿದ್ದು ಕೂಡಾ ಈ ತೀವ್ರ ಅಪೌಷ್ಟಿಕತೆಗೆ ಒಂದು ಕಾರಣ. ಈಗ ಅದು ಬದಲಾಗಿದೆ. ಆದರೆ ಖಾಯಂ ಆಗಿ ವೈಜ್ಞಾನಿಕವಾದ ಪದ್ಧತಿಗಳನ್ನು ಅಳವಡಿಸುವ ಅಗತ್ಯವೂ ಇದೆ. ಅದೇ ಸಮಯದಲ್ಲಿ 6.1/2 ಗಂಟೆ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳು ಕುಳಿತುಕೊಳ್ಳಬೇಕಿರುವುದರಿಂದ ಮಧ್ಯಾಹ್ನದ ಊಟವು ಇಲ್ಲದಿರುವುದರಿಂದ ಮಕ್ಕಳಿಗೆ ಈಗ ಕೊಡುತ್ತಿರುವ ಆಹಾರವನ್ನು ಒಳ್ಳೆಯ ಗುಣಮಟ್ಟದಲ್ಲಿ ಮತ್ತು ಹೆಚ್ಚು ಪ್ರಮಾಣದಲ್ಲಿ ಆಹಾರವನ್ನು ಕೊಡುವುದು ಅಗತ್ಯವಾಗಿದೆ. ಹಾಗೆಯೇ ಗರ್ಭಿಣಿ–ಬಾಣಂತಿಯರಿಗೆ ಆಹಾರದ ವಿಧಾನದಲ್ಲಿ ಬದಲಾವಣೆ ಬರಬೇಕಿದೆ. ಈಗಿರುವ 63 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಸ್ವಂತ ಕಟ್ಟಡ 36,529 ಮಾತ್ರ ಇದೆ. ಮಕ್ಕಳಿಗೆ ಶೌಚಾಲಯ 26,847 ಕೇಂದ್ರಗಳಲ್ಲಿ ಮಾತ್ರ, ಕುಡಿಯುವ ನೀರಿನ ವ್ಯವಸ್ಥೆ 26,819 ಕೇಂದ್ರಗಳಲ್ಲಿ ಮಾತ್ರ ಇದ್ದರೆ, ವಿದ್ಯುತ್ ಸಂಪರ್ಕ ಇರುವುದು 2,623 ಕೇಂದ್ರಗಳಿಗೆ ಮಾತ್ರ, ರಾಜ್ಯದ ಅರ್ಧದಷ್ಟು ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ, ದೇವಸ್ಥಾನ, ಸಮುದಾಯ ಭವನ, ಶಾಲಾ ಕೊಠಡಿಗಳಲ್ಲಿ ನಡೆಯುತ್ತವೆ.

ಮಕ್ಕಳನ್ನು ಆಕರ್ಷಿಸುವ ರೀತಿಯಲ್ಲಿ ಅಂಗನವಾಡಿ ಕೇಂದ್ರಗಳ ಪುನರ್ ನಿರ್ಮಾಣ ಅಗತ್ಯವಿದೆ. ಆದರೆ ಸರ್ಕಾರ ಈಗ ಒಂದು ಅಂಗನವಾಡಿ ಕೇಂದ್ರದ ಕಟ್ಟಡಕ್ಕೆ ನೀಡುತ್ತಿರುವುದು 4.16 ಲಕ್ಷ ಮಾತ್ರ, ಆದರೆ ನಿಜವಾಗಿ ಬೇಕಿರುವುದು 10 ಲಕ್ಷ ರೂಗಳು. ಗ್ರಾಮಾಂತರ ಪ್ರದೇಶಗಳನ್ನು ಅಂಗನವಾಡಿಗಳನ್ನು ಬಲಿಷ್ಠಗೊಳಿಸುವ ನಿಜವಾದ ಕಾಳಜಿಯನ್ನು ಸರ್ಕಾರಕ್ಕೆ ಮನಗಾಣಿಸುವ ಅಗತ್ಯವಿದೆ.

6 ವರ್ಷದ ಮಕ್ಕಳಿಗೆ 12–15 ಗ್ರಾಂ ಆಹಾರ ಅಂದರೆ ಸು. 500 ಕ್ಯಾಲೋರಿ, ಗರ್ಭಿಣಿ – ಬಾಣಂತಿಯರಿಗೆ 18–20 ಗ್ರಾಂ – ಅಂದರೆ ಸು.600 ಕ್ಯಾಲೋರಿ

ತೀವ್ರ ಅಪೌಷ್ಟಿಕತೆ ಇರುವವರಿಗೆ 20–22 ಗ್ರಾಂ –800 ಕ್ಯಾಲೋರಿ. ಇದು ಸದ್ಯಕ್ಕೆ ಆಹಾರದ ವಿತರಣೆ ಆಗುತ್ತಿರುವ ಪ್ರಮಾಣ.

ಸರ್ಕಾರ ಈ ದೀರ್ಘಕಾಲಿಕವಾದ ಯೋಜನೆಯನ್ನು ಇನ್ನಷ್ಟು ಇನ್ನಷ್ಟು ಬಲಿಷ್ಠ ಪಡಿಸುವ ಅಗತ್ಯವಿದೆ. ಮತ್ತು ಈ ಯೋಜನೆಯಿಂದ ಪೂರಕ ಆಹಾರದ ಬದಲಿಗೆ ಸಂಪೂರ್ಣ ಆಹಾರ ದೊರಕಬೇಕಾಗಿದೆ. ಈ ಯೋಜನೆಯಡಿ ಬರುವ ಗರ್ಭಿಣಿ–ಬಾಣಂತಿಯರಿಗೆ, ಕಿಶೋರಿಯರಿಗೆ ಮತ್ತು ಮತ್ತು ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಿಕೆ ಮತ್ತು ಧೀರ್ಘಕಾಲಿಕವಾಗಿ ಬಂದಿರುವ ಕೆಲವು ಮೂಢನಂಬಿಕೆಗಳು, ಪರಂಪರೆಯಿಂದ ಬಂದಿರುವ ಕೆಲವೊಂದು ಮೌಢ್ಯತೆಗಳಿಂದ ಅವರನ್ನು ಹೊರಗೆ ತರುವ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಹಾಗೇನೆ ಇದಕ್ಕಾಗಿ ಇರುವ ಅನುದಾನವನ್ನು ಕೂಡಾ ದ್ವಿಗುಣಗೊಳಿಸಿ ಐಸಿಡಿಎಸ್‌ನೇ ಪ್ರತ್ಯೇಕ ನಿರ್ದೇಶನಾಲಯವನ್ನು ರಚಿಸಬೇಕಾದ ಅನಿವಾರ್ಯತೆ ಇದೆ. ಇದರ ಬೆನ್ನೆಲುಬಾಗಿ ಕೆಲಸ ಮಾಡುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಜೀವನ ಮಟ್ಟವನ್ನು ಎತ್ತರಿಸಬೇಕಿದೆ.

ಮಧ್ಯಾಹ್ನದ ಬಿಸಿಯೂಟ ಯೋಜನೆ: ಈ ಯೋಜನೆಯು ಕೂಡಾ ಶಾಲಾ ಮಕ್ಕಳಲ್ಲಿ ಶಿಕ್ಷಣದ ಏಕಾಗ್ರತೆಯನ್ನು ಹೆಚ್ಚಿಸುವ ದೃಷ್ಠಿಯಿಂದ, ಶಾಲೆಗಳಿಂದ ಗೈರುಹಾಜರಿಯನ್ನು ತಡೆಯುವ ದೃಷ್ಠಿಯಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಈ ಯೋಜನೆಯನ್ನು 2001 ರಲ್ಲಿ ಜಾರಿಗೆ ತರಲಾಯಿತು.

ಯೋಜನೆ ಜಾರಿಯಾಗಿ 11 ವರ್ಷಗಳಾಗಿವೆ. ಈ ಯೋಜನೆಗೆ ಸುಮಾರು 800 ಕೋಟಿ ಅನುದಾನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನೀಡುತ್ತಿವೆ. 69 ಲಕ್ಷ ಮಕ್ಕಳು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಈ ಯೋಜನೆ ಕೂಡಾ ಅಪೌಷ್ಠಿಕತೆಯ ನಿವಾರಣಾ ಕಾರ್ಯಕ್ರಮದ ಭಾಗವಾಗಿ ಸರ್ಕಾರಗಳು ಜಾರಿಗೆ ತರಲೇ ಬೇಕಾದ ಕಾರ್ಯಕ್ರಮ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವೇ ನಿರ್ದೇಶನ ಕೊಟ್ಟು ಹೇಳಿದೆ.

ಇಲ್ಲಿಯೂ ಕೂಡಾ 1 ರಿಂದ 5 ತರಗತಿಗೆ 2.98 ಪೈಸೆ. 6 ರಿಂದ 8 ನೇ ತರಗತಿಗೆ 4.33 ಪೈಸೆ. 9 ರಿಂದ 10 ನೇ ತರಗತಿಗೆ 5.73 ಪೈಸೆಯಂತೆ ಸರ್ಕಾರ ಖರ್ಚು ಮಾಡುತ್ತದೆ. ಈ ಅಡುಗೆ ಕೆಲಸದಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಮಹಿಳೆಯರು ಕೇವಲ 1,000 ರೂ.ಗಳಿಗೆ ದುಡಿಯುತ್ತಿದ್ದಾರೆ. ಈ ಯೋಜನೆಯನ್ನು ಕೂಡಾ ತಾನು ಜಾತ್ಯತೀತ ಎಂದು ಸಾರಿಕೊಳ್ಳುವ ಸರ್ಕಾರ 'ಪ್ರತಿಷ್ಠಿತ' ಎನ್ನಲಾಗುವ 'ಧಾರ್ಮಿಕ' ಸಂಸ್ಥೆಗಳಿಗೆ ಕೊಟ್ಟು ಈ ಮಹತ್ತರ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ(ಎನ್‌ಆರ್‌ಎಚ್‌ಎಮ್) ಈ ಯೋಜನೆಯನ್ನು ಸರ್ಕಾರ ಕೇಂದ್ರದಲ್ಲಿ 2006 ರಿಂದ ಪ್ರಾರಂಭಿಸಿದೆ. ಆದರೆ ರಾಜ್ಯದಲ್ಲಿ 2008 ರಲ್ಲಿ ಪ್ರಕಟಿಸಿ 2009–10 ರಲ್ಲಿ ಜಾರಿಗೊಳಿಸಿದೆ. ಆರೋಗ್ಯ ಕ್ಷೇತ್ರ ಸಾರ್ವಜನಿಕ ಸಹಭಾಗಿತ್ವದ ಅಡಿಯಲ್ಲಿ ಖಾಸಗೀಕರಿಸಿದ ನಂತರ ದೇಶದಲ್ಲಿರುವ ಹಳ್ಳಿಗಳಿಗೆ ಆರೋಗ್ಯದ ಸವಲತ್ತುಗಳನ್ನು ಒದಗಿಸುತ್ತಿವೆ ಎಂದು ಹೇಳಿ ಈ ಯೋಜನೆಯನ್ನು ಜಾರಿ ಮಾಡಿದೆ. ಇದರಲ್ಲಿರುವ ಎಲ್ಲ ಮಹಿಳೆಯರೂ ಪ್ರೋತ್ಸಾಹ ಧನದ ಮೇಲೆ ದುಡಿಯುತ್ತಿದ್ದಾರೆ. ಒಟ್ಟಾರೆಯಾಗಿ ಸರ್ಕಾರ ನಮ್ಮ ಸಮಾಜವು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಹಿಂದುಳಿದಿದೆ ಎಂದು ಒಂದು ಹಂತದಲ್ಲಿ ಒಪ್ಪಿಕೊಂಡರೂ ಈ ಸಮಸ್ಯೆಯ ನಿವಾರಣೆಗೆ ಅಗತ್ಯವಾದ ಮೂಲಭೂತ ಬದಲಾವಣೆಗೆ ಪ್ರಯತ್ನ ಪಡೆದಿರುವುದೇ ಇಂದಿನ ಪ್ರಧಾನ ಸಮಸ್ಯೆಯಾಗಿದೆ. ಸರ್ಕಾರ ಶ್ರೀಮಂತರು, ಬಂಡವಾಳಶಾಹಿಗಳು, ಭೂಮಾಲಕರ ಪರವಾಗಿ ತನ್ನ ನಡಿಗೆಯನ್ನು ಇಟ್ಟಿದೆ. ತನ್ನದೇ ಆರ್ಥಿಕ ಸಮೀಕ್ಷೆಗಳನ್ನು ನಡೆಸಿ ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದ ಕಂದರಗಳು ಇದೆ ಎಂದು ಗುರ್ತಿಸಿದೆ. ಆದರೆ ಅದರ ಬದಲಾವಣೆಗೆ ಅಗತ್ಯ ಗಂಭೀರ ಪ್ರಯತ್ನಗಳನ್ನು ನಡೆಸುತ್ತಿರುವುದು ಕಾಣುತ್ತಿಲ್ಲ.

ಆದ್ದರಿಂದ ಸಾಮಾನ್ಯ ಜನರ ಪರವಾದ, ಶೋಷಿತ ವರ್ಗಗಳ ಪರವಾದ ಈ ನೀತಿಗಳ ಬಗ್ಗೆ ವ್ಯಾಪಕ ಪ್ರಚಾರ ಪ್ರಕ್ಷೋಭೆಗಳನ್ನು ನಡೆಸುವ ಮುಖಾಂತರ ಜನಾಂದೋಲನವನ್ನು ಸಜ್ಜುಗೊಳಿಸೋಣ. ಆ ದಿಕ್ಕಿನಲ್ಲಿ ದೃಢವಾದ ಹೆಜ್ಜೆಯಿಡೋಣ.

ಮರೆತೇನೆಂದರ ಮರೆಯಲಿ ಹ್ಯಾಂಗ...

ಪುಟ 16 ರಿಂದ

ಮಾಡಲಾರಂಭಿಸಿದರು. ಇದನ್ನು ನಿಷೇಧಿಸಿದ ಚೀನ ಸಾಮ್ರಾಟರ ವಿರುದ್ಧ ಹಲವು ಬಾರಿ ಯುದ್ಧ ಹೂಡಿ ಅವರನ್ನು ಅಡಗಿಸಿದರು. ನಂತರ ಅಸಮಾನಕರವಾದ ವ್ಯಾಪಾರದ ಒಪ್ಪಂದಗಳನ್ನು ಹೇರಿ ಚೀನವನ್ನು ಲೂಟಿ ಮಾಡಲಾರಂಭಿಸಿದರು. ಚೀನಾದ ಸಾಮ್ರಾಟರು ಈ ವಿದೇಶೀ ಸೈನ್ಯಗಳನ್ನು ಎದುರಿಸಲಾಗದೇ ಹೆಚ್ಚು ಹೆಚ್ಚಾಗಿ ಅವರ ಅಡಿಯಾಳಾಗಿ ವರ್ತಿಸಲಾರಂಭಿಸಿದರು. ಅದರಲ್ಲಿಯೇ ತಮ್ಮ ಸುಖವನ್ನು ಕಾಣಲಾರಂಭಿಸಿದರು. ಆದರೆ ಭಾರತದಂತೆ ಇಡೀ ದೇಶವನ್ನು ತಮ್ಮ ವಶ ಮಾಡಿಕೊಂಡು ಕೇಂದ್ರೀಕೃತ ಪ್ರಭುತ್ವವನ್ನು ಹೇರಲಿಲ್ಲ ಎಂಬುದು ಕೂಡ ಗಮನಾರ್ಹ. (ಈ ಅಫೀಮು ಬೆಳೆ ಮತ್ತು ವ್ಯಾಪಾರದಲ್ಲಿಯೇ ಭಾರತದ ಟಾಟಾಗಳು ಗುತ್ತೇದಾರಿ ಬಂಡವಾಳಗಾರರಾಗಿ ಬೆಳಯಲು ಬೇಕಾದ ದೊಡ್ಡ ಪ್ರಮಾಣದ ಲಾಭ ಮಾಡಿಕೊಳ್ಳಲು ಸಾಧ್ಯವಾದದ್ದು.).

ವಿದೇಶಿ ವ್ಯಾಪಾರದ ಜೊತೆ ಜೊತೆಗೇ ವಿದೇಶಿ ಶಿಕ್ಷಣ, ಬಹಳ ಸಣ್ಣ ಪ್ರಮಾಣದಲ್ಲಿಯಾದರೂ ಆಧುನಿಕ ಶಿಕ್ಷಣ ಶಾಲೆಗಳು ಆರಂಭವಾದವು. ಈ ಅಫೀಮು ವ್ಯಾಪಾರ ಆರಂಭವಾಗಿದ್ದೇ ಹುನಾನ್ ರಾಜ್ಯದ ನೆರೆಯ ರಾಜ್ಯದ ರಾಜಧಾನಿ ಗೊಂಗ್ ಜು ನಗರ ಹಾಗು ಶಾಂಘೈ ಬಂದರು ನಗರಗಳಿಂದ. ಈ ಎರಡೂ ನಗರಗಳ ನಡುವಣ ಸಂಪರ್ಕದ ಹೆದ್ದಾರಿ ಹುನಾನ್ ರಾಜ್ಯದ ಮೇಲೆ ಹಾದು ಹೋಗುತ್ತಿತ್ತು. ಇದರಿಂದಾಗಿ ಹುನಾನ್ ರಾಜ್ಯ ಹಾಗು ಅದರ ರಾಜಧಾನಿ ಚಾಂಗ್ ಶಾ ಹೊಸ ವಿಚಾರಗಳ ಸಂಘರ್ಷಗಳ ಆಡುಂಬೊಲವಾಗಿತ್ತು.

ವಿದೇಶೀ ವ್ಯಾಪಾರದಿಂದ ಚೀನಾದ ಜನತೆ ಅಫೀಮು ಚಟ, ಆರ್ಥಿಕ ಶೋಷಣೆ ಇವುಗಳಿಂದ ಬಾಧಿತರಾದರೆ ವಿದೇಶಿ ಶಿಕ್ಷಣ ಈ ಶೋಷಣೆಯ ಮೂಲದ ಬಗ್ಗೆ ತಿಳುವಳಿಕೆಯನ್ನೂ, ಪ್ರಜಾಪ್ರಭುತ್ವ ಹಕ್ಕುಗಳ ಪ್ರಜ್ಞೆಯನ್ನೂ ಮೂಡಿಸಿತು.

ಈ ಹಿನ್ನೆಲೆಯಲ್ಲಿಯೇ ಸನ್ ಯತ್ ಸೆನ್ ಎಂಬ ಹುನಾನ್‌ನ ನೆರೆಯ ರಾಜ್ಯದ ವ್ಯಕ್ತಿ ವೈದ್ಯಕೀಯ ವಿದ್ಯಾಭ್ಯಾಸ ಮಾಡಿ ಪ್ರಾಕ್ಟೀಸ್ ಆರಂಭಿಸಿದವರು ಚೀನಾದ ಜನರ ಆರೋಗ್ಯದ ಮೂಲ ವಿದೇಶೀ ತುಳಿತ ಹಾಗೂ ಅದಕ್ಕೆ ಬಲಿಯಾಗಿರುವ ಸಾಮ್ರಾಟರಿಂದ ವಿಮೋಚನೆ ಪಡೆದುಕೊಳ್ಳವುದರಲ್ಲಿಯೇ ಇದೆ ಎಂದು ಕಂಡುಕೊಂಡರು.

JANASHAKTHI KANNADA VARA PATRIKE SEP 16, 2012 Price : Rs. 5/-
Postal Reg. No. RNP/KA/BGS/2078/2010-12 Posted at MBC Bangalore GPO

ಮರೆತೇನೆಂದರ ಮರೆಯಲಿ ಹ್ಯಾಂಗ ಮಾವೋ ತ್ಸೇ ತುಂಗ

ಹುನಾನ್ ರಾಜ್ಯ ಎಂಬ ದಂಗೆ, ಹೋರಾಟಗಳ ಚಿಲುಮೆಯಲ್ಲಿ ಮಿಂದ ಮಾವೋ

ಜಿ.ಎನ್. ನಾಗರಾಜ್

ಬಾಗ-5

ಶಿಯಾಂಗ್ ಶಿಯಾಂಗ್‌ನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಯನ ನಡೆಸಿದ ಮಾವೋರವರಿಗೆ ಅರಿವಿನ ಹಂಬಲ ಮತ್ತಷ್ಟು ತೀವ್ರವಾಯಿತು. ಹುನಾನ್ ರಾಜ್ಯದ ರಾಜಧಾನಿ ಪ್ರಸಿದ್ಧನಗರ ಚಾಂಗ್ ಶಾ ದಲ್ಲಿದ್ದ ವಿವಿಧ ಶಿಕ್ಷಣ ಸಂಸ್ಥೆಗಳ ಬಗ್ಗೆ ಕೇಳಿದ ಅವರು ಚಾಂಗ್ ಶಾಕ್ಕೆ ಹೋಗಲು ಹಾತೊರೆದರು. ತಮ್ಮ ಬಗ್ಗೆ ಪ್ರೀತಿಯಿಂದಿದ್ದ ಮಾಸ್ತರರು, ಅವರಿಗೆ ಈ ಶಾಲೆಯಲ್ಲಿ ಪ್ರವೇಶ ದೊರಕಿಸಿ ಕೊಟ್ಟಿದ್ದವರು ಅವರಿಗೆ ವಿನಂತಿಸಿ ಚಾಂಗ್ ಶಾದ ಶಾಲೆಯೊಂದಕ್ಕೆ ಪ್ರವೇಶಕ್ಕಾಗಿ ಪರಿಚಯ ಪತ್ರವೊಂದನ್ನು ಪಡೆದುಕೊಂಡರು.



ತೈಪಿಂಗ್ ರೈತ ಬಂಡಾಯ

ತಮ್ಮ ಊರಿನಿಂದ ನಲವತ್ತು ಮೈಲಿ ದೂರದಲ್ಲಿದ್ದ ಚಾಂಗ್ ಶಾಕ್ಕೆ ನಡೆದೇ ಹೊರಟರು. ಶಿಯಾಂಗ್ ಶಿಯಾಂಗ್ ನ ಶಾಲೆಯಂತೆಯೇ ಅಲ್ಲಿಯೂ ಪ್ರವೇಶ ಪಡೆಯಲು ಏನು ಪಡಿಪಾಟಲು ಬೀಳಬೇಕಾಗುತ್ತದೋ ಎಂದು ಕಳವಳಗೊಂಡಿದ್ದ ಅವರಿಗೆ ಅಲ್ಲಿನ ಪ್ರೌಢ ಶಾಲೆಗೆ ಸುಲಭವಾಗಿಯೇ ದಾಖಲಾತಿ ದೊರಕಿತು.

ಚಾಂಗ್ ಶಾ ನಗರ ಒಂದು ಹೊಸ ವಿಚಾರಗಳ, ಚೀನಾವನ್ನು ಸಾಮ್ರಾಟರ ಪಾಳೆಯಗಾರಿ ಆಡಳಿತ ಹಾಗೂ ಬ್ರಿಟಿಷ್,ಫ್ರೆಂಚ್,ಜಪಾನೀ ಪರಕೀಯರ ಶೋಷಣೆಯಿಂದ ಮುಕ್ತಗೊಳಿಸ ಬೇಕೆಂದು ಪ್ರಯತ್ನಿಸುತ್ತಿದ್ದ ಸಂಘ, ಚಳುವಳಿಗಳ ಕೇಂದ್ರವಾಗಿತ್ತು. ಇಡೀ ಹುನಾನ್ ರಾಜ್ಯವೇ ಅರ್ಧ ಶತಮಾನದಿಂದಲೂ ಅನೇಕ ತುಮುಲಗಳ, ದಂಗೆಗಳ ಕುಲುಮೆಯಾಗಿತ್ತು. ಮಾವೋರವರು ಒಬ್ಬ ಕ್ರಾಂತಿಕಾರಿಯಾಗಿ ರೂಪಿಸುವಲ್ಲಿ ಗಣನೀಯ ಪರಿಣಾಮ ಬೀರಿದ ಈ ವಾತಾವರಣದ ಬಗ್ಗೆ ತಿಳಿದುಕೊಳ್ಳದೇ ಮಾವೋರ ಕೊಡುಗೆಯನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ.

ಚಾಂಗ್ ಶಾಕ್ಕೆ ಬಂದ ಕೆಲವೇ ದಿನಗಳಲ್ಲಿ ಅವರು ಮೊತ್ತಮೊದಲ ಬಾರಿಗೆ ಪತ್ರಿಕೆಯೊಂದನ್ನು ಓದಿದರು.

'ಜನಶಕ್ತಿ'(ಮಿನ್ ಲಿ ಬಾವೊ) ಎಂಬ ರಾಷ್ಟ್ರೀಯ ಕ್ರಾಂತಿಕಾರಿ ಪತ್ರಿಕೆ ಅವರಲ್ಲಿ ರಾಜಕೀಯ ಪ್ರಜ್ಞೆಯನ್ನು ಉದ್ದೀಪಿಸಿತು. ಈ ಪತ್ರಿಕೆಯಲ್ಲಿ ಒಂದು ದಿನ ಹುನಾನ್ ರಾಜ್ಯದ ಹುವಾಂಗ್ ಶಿಂಗ್ ಎಂಬ ಕ್ರಾಂತಿಕಾರಿಯ ನೇತೃತ್ವದಲ್ಲಿ ಪಕ್ಕದ ರಾಜ್ಯದ ರಾಜಧಾನಿ ಗೊಂಗ್ಝು (ಅಂದು ಅದು ಕ್ಯಾಂಟನ್ ಎಂಬ ಹೆಸರಿನ ಚೀನಾ ದೇಶದ ಮೂರನೆಯ ದೊಡ್ಡ , ಪರದೇಶಿಯರ ತುಳಿತಕ್ಕೆ ಸಿಕ್ಕಿ ನಲುಗುತ್ತಿದ್ದ ನಗರ)ವಿನಲ್ಲಿ ಮಂಚು ವಂಶದ ಸಾಮ್ರಾಟರ ಆಳ್ವಿಕೆಯ ವಿರುದ್ಧ ಒಂದು ಜನರು ದಂಗೆಯೆದ್ದ ಘಟನೆ ವರದಿಯಾಗಿತ್ತು. ಸೈನ್ಯದ ಧಾಳಿಗೆ ತುತ್ತಾಗಿ ಎಪ್ಪತ್ತೆರಡು ಜನರು ಮಡಿದರು. ಇದು ಮಾವೋರವರ ಮನವನ್ನು ಕಲಕಿತು.



ತೈಪಿಂಗ್ ರೈತ ದಂಗೆ

ಈ ದಂಗೆಯ ಹಿಂದೆ ಒಂದು ದೀರ್ಘ ಇತಿಹಾಸವೇ ಇದೆ. 1850ರಲ್ಲಿ ಚೀನಾದಲ್ಲಿ ಸಾಮ್ರಾಟರ ಆಳ್ವಿಕೆಯಲ್ಲಿ ತೆರಿಗೆ, ಸುಲಿಗೆಗಳ ಭಾರದಿಂದ ಅತೀವವಾಗಿ ನರಳುತ್ತಿದ್ದ ರೈತರು ತಾವೇ ದಂಗೆಯೆದ್ದರು. ಈ ದಂಗೆಗೆ ನೇತೃತ್ವ ನೀಡಿದವರು ಹುನಾನ್ ಪಕ್ಕದ ರಾಜ್ಯವೇ. ಈ ದಂಗೆಯ ಸೈನ್ಯ ಇಪ್ಪತ್ತು ಸಾವಿರದಿಂದ ಆರಂಭವಾಗಿ ವಿವಿಧ ರಾಜ್ಯಗಳನ್ನು ದಾಟಿ ಸಾಮ್ರಾಜ್ಯದ ಭಾಗಗಳನ್ನು ಆಕ್ರಮಿಸಿಕೊಡು ಸಾಗುವಾಗ ಹತ್ತು ಲಕ್ಷದವರೆಗೂ ಮುಟ್ಟಿತು. ಭೂಮಿಯ ಮೇಲೆ ಸ್ವರ್ಗದ ಸಾಮ್ರಾಜ್ಯವನ್ನು ಸ್ಥಾಪಿಸುವ ಗುರಿ ಹೊಂದಿದ್ದ ಈ ದಂಗೆ ರೈತರಿಗೆ ಭೂಮಿಯನ್ನು ಹದಿನಾರು ವರ್ಷ ದಾಟಿದ ಗಂಡು, ಹೆಣ್ಣು ಎಲ್ಲರಿಗೂ ಒಂದು ಪೂರ್ಣಭಾಗ, ಅದಕ್ಕಿಂತ ಕೆಳಗಿನವರಿಗೆ ಅರ್ಧ ಭಾಗ ನೀಡಿ ಸಮನಾಗಿ ಹಂಚುವ ಕೆಲಸಕ್ಕೆ ಕೈ ಹಾಕಿತು. ಇಂತಹ ಗುರಿಗಳು ರೈತರಲ್ಲಿ ಅಪಾರ ಉತ್ಸಾಹವನ್ನು ಮೂಡಿಸಿದವು. ಈ ರೈತ ದಂಗೆ ಚೀನದ ಹದಿನೇಳು ರಾಜ್ಯಗಳ ವ್ಯಾಪ್ತಿಯಲ್ಲಿ ಆಡಳಿತವನ್ನು ಸ್ಥಾಪಿಸಿ ಹನ್ನೊಂದು ವರ್ಷ ಕಾಲ ಆಳಿತು. ಭಾರತದಲ್ಲಿ ಇದೇ ಸಮಯದಲ್ಲಿಯೇ ಮೊದಲ ಸ್ವಾತಂತ್ರ್ಯ ಸಂಗ್ರಾಮವಾದ ಸಿಪಾಯಿ ದಂಗೆ ನಡೆಯಿತು ಎಂಬುದನ್ನು ನೆನಪಿಸಿಕೊಳ್ಳೋಣ.

ಹುನಾನ್ ರಾಜ್ಯದ ಮೇಲೆ ಹಾದು ಹೋದ ಈ ಸೈನ್ಯಕ್ಕೆ ಹುನಾನ್‌ನ ಸಾವಿರಾರು ರೈತರು ಸೇರಿದರು. 1864ರಲ್ಲಿ ಈ ದಂಗೆಯನ್ನು ಸೋಲಿಸಿದ್ದು ಹುನಾನ್‌ನ ಪಾಳೆಯಗಾರರ ನೇತೃತ್ವದ ಸೈನ್ಯವೇ ಈ ದಂಗೆಯನ್ನು ಹತ್ತಿಕ್ಕಿತು. ಹೀಗೆ ರೈತ ಹಾಗು ಪಾಳೆಯಗಾರೀ ದಂಡುಗಳೆರಡರಲ್ಲಿಯೂ ಹುನಾನ್ ರೈತರು ಭಾಗವಹಿಸಿದ್ದರಿಂದ ಹುನಾನ್ ರೈತರ ನೆನಪಿನಲ್ಲಿ ದೀರ್ಘ ಕಾಲ ಉಳಿಯಿತು. ಅದೇ ಸಮಯದಲ್ಲಿ ಚೀನಾವನ್ನೆಲ್ಲ ಕೇಂದ್ರೀಕೃತ ಸೈನ್ಯದಿಂದ ತಮ್ಮ ಬಿಗಿ ಹಿಡಿತದಲ್ಲಿಟ್ಟುಕೊಂಡಿದ್ದ ಸಾಮ್ರಾಟರು ದುರ್ಬಲಗೊಂಡರು. ಚೀನಾದ ಉದ್ದಗಲಕ್ಕೂ ಅನೇಕ ಪಾಳೆಯಗಾರಿ ದಂಡುಗಳು ರೂಪುಗೊಂಡವು. ಇದು ಮುಂದೆ ಚೀನದ ಕ್ರಾಂತಿಯ ಸಾಧ್ಯತೆ, ದಾರಿಯ ಮೇಲೆ ಗಣನೀಯ ಪರಿಣಾಮ ಬೀರಿತು.

ಜೊತೆಗೆ ಆಗಾಗ್ಗೆ ರೈತರು ವಿವಿಧ ಪ್ರಮಾಣದ ದಂಗೆಗಳು, ಪ್ರತಿಭಟನೆಗಳು ನಡೆಯಲಾರಂಭಿಸಿದವು. ಈ ಹಿನ್ನೆಲೆಯಲ್ಲಿ ಅನೇಕ ರಹಸ್ಯ ಕೂಟಗಳು ಆರಂಭವಾದವು. ಇವುಗಳಲ್ಲಿ ದೋಣಿ ನಡೆಸುವವರು, ಕುಶಲ ಕರ್ಮಿಗಳು, ರೈತರು ಸೇರಿಕೊಳ್ಳುತ್ತಿದ್ದರು. ಮಾವೋರವರ ಹಳ್ಳಿ ಶಾವೋ ಶಾನ್ ನಲ್ಲಿ ಕೂಡ ಇಂತಹ ರಹಸ್ಯ ಕೂಟವೊಂದು ಕೆಲಸ ಮಾಡುತ್ತಿತ್ತು.

ವಿದೇಶೀ ವ್ಯಾಪಾರ, ಅಫೀಮು ಯುದ್ಧ, ಹಾಗೂ ಆಧುನಿಕ ಶಿಕ್ಷಣ.

ತೈಪಿಂಗ್ ರೈತ ದಂಗೆಗೆ ಮೊದಲೇ ಭಾರತವನ್ನು ವಶಪಡಿಸಿಕೊಂಡಿದ್ದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಚೀನಾದಲ್ಲಿಯೂ ಚೀನಾದ ಅನೇಕ ತಯಾರಿಕೆಗಳನ್ನು ಆಮದು ಮಾಡಿಕೊಳ್ಳಲಾರಂಭಿಸಿತ್ತು. ಅದಕ್ಕೆ ಪ್ರತಿಯಾಗಿ ಚೀನಾ ಬ್ರಿಟಿಷ್ ತಯಾರಿಕೆಗಳನ್ನು ಕೊಳ್ಳಲು ನಿರಾಕರಿಸಿದ್ದರಿಂದ ತಾವು ಕೊಳ್ಳುವ ಚೀನೀ ಪಿಂಗಾಣಿ, ರೇಷ್ಮೆ, ಟೀ ಮೊದಲಾದ ವಸ್ತುಗಳಿಗೆ ಬದಲಾಗಿ ಬೆಳ್ಳಿಯನ್ನೇ ಕೊಡಬೇಕಾಗಿ ಬಂದು ಅವರಿಗೆ ಬಹಳ ನಷ್ಟವಾಗುತ್ತಿತ್ತು. ಆದ್ದರಿಂದ ಭಾರತದಲ್ಲಿ ಅಫೀಮು ಬೆಳೆದು ಚೀನಾಕ್ಕೆ ರಫ್ತು

ಮೊದಲನೆ ಅಫೀಮು ಯುದ್ಧ



ಪುಟ 15ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH